
ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 34
ಆಗಸ್ಟ್ 24, 2003 ಬೆಲೆ ರೂ. 3.00

ಕಾರ್ಗಿಲ್ ಯುದ್ಧ ಶಸ್ತ್ರ ಖರೀದಿ
ಭ್ರಷ್ಟಾಚಾರ ಮುಚ್ಚುವ ಹುನ್ನಾರ






ಭಾರತದ ಸ್ವಾತಂತ್ರ್ಯ ಉಳಿದೀತೆ ?



ಜನತಾದಳ ವಿಲೀನ : ವಾಸ್ತವ ಹೆಜ್ಜೆಗಳು


ಸಮರೋತ್ಸಾಹ ತುಂಬುವ ಜಾಥಾಗಳು



ನೂರು ತುಂಬಿದ ಬೋಲ್ಶೆವಿಕ್ ಪಕ್ಷ

ವಿಮೋಚನಾ ಸಮರದಲ್ಲಿ....

ಮೇಜರ್ ಜಯಪಾಲ್ ಸಿಂಗ್



ಆತ್ಮಕಥನ

40



ಕಮ್ಯುನಿಸಂ ಛಾಯೆಯಂತೆ ಕ್ರಾಂತಿಕಾರಿ ಉತ್ಸಾಹದಿಂದ ಕೆಲಸ ಮಾಡುವ ಮನಸ್ಸಿಲ್ಲದವರನ್ನು ಗಮನಿಸಿದ ಜಯಪಾಲ್ ಸಿಂಗ್‌ರು; ಅಂತೂ ಕೊನೆಗೂ ಪ್ರಾಮಾಣಿಕ ಸೌಹಾರ್ದತೆ, ಸಂಗಾತಿತನದ ಭಾವನೆ ಮುಕ್ತತೆ ಹಾಗೂ ನೇರ ನಡೆನುಡಿಯ ವಾತಾವರಣ ಕಂಡ ಮೇಜರ್, ಕೇಂದ್ರದ ಮೇಲೆ ಪೋಲೀಸ್ ದಾಳಿ ನಡೆದಾಗ ತಪ್ಪಿಸಿಕೊಳ್ಳಲು ಹಿಂಬಾಗಿಲು ತೋರಿಸಿದ ನಾಗ್. ಶತ್ರುಗಳು ತಮ್ಮ ಸಂಗಾತಿಗಳು ಸೆರೆ ಸಿಕ್ಕರೂ ಕಾರ್ಯಾಚರಣೆಯಲ್ಲಿ ಸತ್ತರು ಎಂಬ ಸುಳ್ಳು ಸುದ್ದಿ ಹರಡುತ್ತಿದ್ದದ್ದು, ಬೆಂಗಳೂರಿನಲ್ಲಿ ಸೆರೆಸಿಕ್ಕ ಸಂಗಾತಿಯನ್ನು ಕಾಳಗದಲ್ಲಿ ಹತರಾಗಿದ್ದಾರೆ ಎಂಬ ಸುದ್ದಿ, ಮತ್ತು ಅಕಾಲದಲ್ಲಿ ದೇಶದಲ್ಲೇ ಫ್ಯಾಸಿಸಂ ಅಪಾಯ ತಲೆ ಎತ್ತಿದ್ದರ ಬಗ್ಗೆ ಓದಿರುವಿ. ಮುಂದೆ.....

ಕನ್ನಡಕ್ಕೆ: ವಿಶ್ವ ಕುಂದಾಪುರ

ಮೂಗಿಗೆ ಬಡಿದ ಅಪಾಯದ ವಾಸನೆ

ಬಾಡಿಗೆಬಂಟ ಪತ್ರಿಕೆಗಳ ಅಂಕಣಗಳ ಮೂಲಕ ಆಗಾಗ ಪುಂಖಾನುಪುಂಖವಾಗಿ ಬರುವ ವಿಚಾರಗಳು,ದೇಶಪ್ರೇಮಿಗಳುಮತ್ತುಕಮ್ಯುನಿಸ್ಟರನ್ನು ಬೇಟೆಯಾಡುವಲ್ಲಿ ಶತ್ರು ಚಟುವಟಿಕೆಯ ತೀವ್ರತೆ, ಬಂಗಾಳ, ಮುಂಬಯಿ ಮತ್ತು ಉತ್ತರ ಭಾರತದ ಇತರ ಭಾಗಗಳಲ್ಲಿ ಮಹಿಳೆಯರು ಹಾಗೂ ರೈತರ ಮೇಲಿನಪೊಲೀಸ್‌ಗೋಲಿಬಾರುಗಳು-ಇವೆಲ್ಲವೂ ನೆಹರೂಆಡಳಿತಹರಿಯಬಿಟ್ಟನಗ್ನಭಯೋತ್ಪಾದನೆ ಬಗ್ಗೆ ಇವರು ತಮ್ಮ ಪರಿಕಲ್ಪನೆ ರೂಪಿಸಿಕೊಳ್ಳಲು ಕಾರಣವಾದ ಮುಖ್ಯ ಅಂಶಗಳಾಗಿವೆ. ನಾನು ಮಾಡಿದ್ದು ಕೂಡ ಅದನ್ನೇ. ಈ ಪರಿಕಲ್ಪನೆಗಳು ಸಾಕಾಗುತ್ತಿರಲಿಲ್ಲಹಾಗೂಆಂಧ್ರಮತ್ತುತೆಲಂಗಾಣ ಸಂಗಾತಿಗಳ ಪರಿಕಲ್ಪನೆಗಳಿಗೆ ಹೋಲಿಕೆಯಾಗುತ್ತಿರಲಿಲ್ಲ. ಯಾಕೆಂದರೆ ಅವರ ಅಂದಾಜಿಗೆ ಆಧಾರವೇ ಬೇರೆಯಾಗಿತ್ತು. ಇತರರೊಂದಿಗೆನಾನುಕೂಡನೆಹರೂಆಡಳಿತವನ್ನು ಫ್ಯಾಸಿಸ್ಟ್ ಆಡಳಿತವೆಂದು ಜರೆದಿದ್ದೆ.


ಕಳೆದ ನಾಲ್ಕು ವರ್ಷಗಳಲ್ಲಿ ಆಂಧ್ರದ ಜನರು, ತೆಲಂಗಾಣದ ರೈತಾಪಿ ವರ್ಗ ಮತ್ತು ಪಕ್ಷ ಏನನ್ನು ಅನುಭವಿಸಿತು ಎನ್ನುವುದು ಈ ಪ್ರಾಂತ್ಯಗಳಿಂದ

> **ಕಳೆದ ನಾಲ್ಕು ವರ್ಷಗಳಲ್ಲಿ ಆಂಧ್ರದ ಜನರು ಮತ್ತು ತೆಲಂಗಾಣದ ರೈತಾಪಿ ವರ್ಗ ಹಾಗೂ ಪಕ್ಷ ಅನುಭವಿಸಿದ ನೋವನ್ನು ಈ ಪ್ರಾಂತ್ಯಗಳಿಂದ ಹೊರಗಿರುವವರು ಸರಿಯಾಗಿ ತಿಳಿಯಲಿಲ್ಲ. ಅರ್ಥ ಮಾಡಿಕೊಳ್ಳಲಿಲ್ಲ. ನೆಹರೂ ಆಡಳಿತ ಹರಿಯಬಿಟ್ಟ ನಗ್ನ ಭಯೋತ್ಪಾದನೆ ಬಗ್ಗೆ ನಾಗ್ ವಿವರಿಸಿದ್ದು ಅತಿಶಯೋಕ್ತಿ ಎಂದು ಮೊದಲಿಗೆ ಅನಿಸಿತು. ಆದರೆ ಕ್ರಮೇಣ ವಾಸ್ತವ ಪರಿಸ್ಥಿತಿಯ ಅರಿವಾಯಿತು.**

ಹೊರಗಿರುವವರಿಗೆ ಸರಿಯಾಗಿ ಗೊತ್ತಿಲ್ಲ ಹಾಗೂ ಅರ್ಥಮಾಡಿಕೊಳ್ಳಲಿಲ್ಲ.

ಭಾರತೀಯ ಫ್ಯಾಸಿಸಂ ಪೆಡಂಭೂತದ ಅಪಾಯ

ಸಂಗಾತಿಗಳೇ, ನೆಹರೂ ಆಡಳಿತವನ್ನು ಆ ರೀತಿಯಾಗಿವರ್ಣಿಸಿದ್ದನ್ನುಒಪ್ಪದವರುಅಷ್ಟೊಂದು 'ಸಂತೋಷ' ಪಡಬೇಕಾಗಿಲ್ಲ. (ಹಾಗೆ ಮಾಡಿದ ಹಲವರನ್ನು ನಾನು ಕಂಡಿದ್ದೇನೆ).ಯಾಕೆಂದರೆ ಈ ಎರಡು ಪ್ರದೇಶಗಳಿಗೆ ಸಂಬಂಧಪಟ್ಟು ಹೇಳುವುದಾದರೆ,ನಮ್ಮದೇಶದ ಈ ಎರಡು ಅತೃಪ್ತ ಭಾಗಗಳಜನತೆ ಹಾಗೂ ಪಕ್ಷದ ವಿರುದ್ಧ ಅತ್ಯಂತ ಕ್ರೂರಫ್ಯಾಸಿಸ್ಟ್‌ದೌರ್ಜನ್ಯಹಾಗೂದಬ್ಬಾಳಿಕೆಯನ್ನು ಹರಿಯ ಬಿಡಲಾಯಿತು. ಇದನ್ನು ಮನವರಿಕೆ ಮಾಡಿಕೊಳ್ಳದಿರುವುದು ಹಾಗೂ ಅರ್ಥ ಮಾಡಿಕೊಳ್ಳದಿರುವುದರಿಂದಭಾರತದಸನ್ನಿವೇಶದಲ್ಲಿ



ಫ್ಯಾಸಿಸಂನ ಅನಾಗರಿಕ ಕ್ರೂರ ಇತಿಹಾಸವನ್ನು ನಿರ್ಲಕ್ಷಿಸಿದಂತಾಗುತ್ತದೆ. ಅಲ್ಲದೆ ದೇಶದ ಇತರ ಭಾಗಗಳಲ್ಲೂಭಾರತೀಯಫ್ಯಾಸಿಸಂನಪೆಡಂಭೂತ ತಲೆ ಎತ್ತಲಿರುವ ಅಪಾಯುವನ್ನು ನಾವು ಧಿಕ್ಕರಿಸಿದಂತಾಗುತ್ತದೆ.

ಈ ರೀತಿಯಾಗಿ, ಆಂಧ್ರ ಸಂಗಾತಿಗಳ ಜತೆ ಸಹಮತವಿದ್ದಅಥವಾಇಲ್ಲದಿರುವ,ಹೊರಗಡೆಯ ಎರಡೂ 'ಪ್ರವೃತ್ತಿಗಳು' ನಮ್ಮ ಪಕ್ಷ ಹಾಗೂ ಜನತೆ ಕ್ರೂರ ಹಾಗೂ ಅನಾಗರಿಕ ದಬ್ಬಾಳಿಕೆಯಿಂದ ಎಷ್ಟು ಸಂಕಷ್ಟ ಅನುಭವಿಸಿದವು ಎನ್ನುವುದನ್ನು ಅರಿಯಲು ಇಂದಿಗೂ ವಿಫಲವಾಗಿವೆ. ಇಡೀ ಜನತೆ ಮತ್ತು ಪಕ್ಷ ಶಸ್ತ್ರಾಸ್ತ್ರ ಕೈಗೆತ್ತಿಕೊಳ್ಳಲು ಏನು ಕಾರಣ ಎಂಬುದನ್ನು ಕೂಡಾಇಂದಿಗೂಸರಿಯಾಗಿಹಾಗೂಪೂರ್ಣವಾಗಿ ಅರ್ಥಮಾಡಿಕೊಳ್ಳಲುಆಗಿಲ್ಲ.ಒಂದುವೇಳೆಶಸ್ತ್ರಾಸ್ತ್ರ ಕೈಗೆತ್ತಿಕೊಳ್ಳದಿದ್ದರೆಪಕ್ಷಕ್ಕೆಗ್ರಹಣಹಿಡಿದಂತಾಗುತ್ತಿತ್ತು ಮತ್ತುಜನತೆಯಮಾರಣಹೋಮನಡೆಯುತ್ತಿತ್ತು.

ಆ ಭೂಗತ ಕೇಂದ್ರದಲ್ಲಿ ಕುಳಿತುಕೊಂಡು ಆ ಕ್ಷಣದಲ್ಲಿನಮ್ಮಪಕ್ಷಹಾಗೂಜನತೆಎಂಥದಬ್ಬಾಳಿಕೆಗೆ ಒಳಗಾಗಿದ್ದಾರೆ ಎನ್ನುವುದನ್ನು ಹೇಗೆ ಅಂದಾಜು ಮಾಡಲಿ?ರೈತರನಾಡಿನಒಳಗೆಪ್ರವೇಶಿಸಿಕಂಡಾಗ ಆದ ಆಘಾತ ಅಂತಿಂಥದ್ದಲ್ಲ. ಅಲ್ಲದೆ ಇದುವರೆಗೆ ಇದನ್ನು ನಿರ್ಲಕ್ಷಿಸಿದ್ದ ಬಗ್ಗೆಯೂ ನನಗೆ ಪಶ್ಚಾತ್ತಾಪವಾಯಿತು. ಇದನ್ನು ಮುಂದೆ ಇನ್ನಷ್ಟು ವಿವರವಾಗಿತಿಳಿಸುತ್ತೇನೆ.ಈಗಮತ್ತೆನಾಗ್‌ವಿಚಾರಕ್ಕೆ ಬರೋಣ.

ಕೋಣೆಯಿಂದ ಕಾಣುವ ಆ ಗುಡ್ಡಗಳಾಚೆ ನಡೆಯುತ್ತಿದ್ದ ವಿದ್ಯಮಾನಗಳ ಬಗ್ಗೆ ಸಾಕಷ್ಟು ಪರಿಕಲ್ಪನೆಯಿಲ್ಲದೆ ನಾನು ವಿಷಯಗಳನ್ನು ಉತ್ಪ್ರೇಕ್ಷೆಗೊಳಿಸುತ್ತಿದ್ದನಾಗ್ ಜೊತೆಮಾತನಾಡುತ್ತ ಕುಳಿತಿದ್ದೆ. ಮುಂದಿನ ದಿನಗಳಲ್ಲಿ, ನಾಗ್ ಅವರ ಕ್ರಾಂತಿಕಾರಿಕಾಳಜಿಹಾಗೂಪ್ರಾಮಾಣಿಕತೆಯಿಂದಾಗಿ ನಾನವರನ್ನು ಅತಿಯಾಗಿ ಪ್ರೀತಿಸಿದೆ ಹಾಗೂ ಗೌರವಿಸಿದೆ.ಈರೀತಿಯಾಗಿಯೋಚಿಸುತ್ತಿದ್ದವರಲ್ಲಿ ನಾನೊಬ್ಬ ವ್ಯಕ್ತಿಯಾಗಿರಲಿಲ್ಲ. ಆ ಕ್ಷಣದಲ್ಲಿಆಂಧ್ರಮತ್ತುತೆಲಂಗಾಣದ ಹೊರಗಡೆ ಅಸ್ತಿತ್ವದಲ್ಲಿದ್ದ ಇಡೀ ಪ್ರವೃತ್ತಿ ನಾನಾಗಿದ್ದೆ.

ನೀವು ಇಲ್ಲಿಂದ ನಿಮ್ಮ ಜತೆ ಒಂದು ರೈಫಲ್ ಒಯ್ಯ್ಯ ಬೇಕಾಗುತ್ತದೆ.ಅದನ್ನುನಾನುವ್ಯವಸ್ಥೆ ಮಾಡುತ್ತೇನೆ.ಸಶಸ್ತ್ರತಂಡವೊಂದು ಪ್ರದೇಶದಲ್ಲಿ ಸುತ್ತಾಡುವಾಗ ನಿಮ್ಮ ಕಾವಲಿಗಿರುತ್ತಾರೆ' - ನಾಗ್ ಹೇಳಿ ಮುಗಿಸಿದರು.

"ಸಿಂಗರಿಸಿಕೊಂಡು ಸಂಭ್ರಮಿಸುವ ಅಜ್ಜಿಯಂತೆ, ರೈಫಲ್‌ನ ಅಗತ್ಯವೇನಿದೆ? ಇವೆಲ್ಲ ಕೊಳಕು, ಕಲ್ಪಿತ ಅಪಾಯಗಳಲ್ಲವೇ?' - ಎಂಬುದಷ್ಟೇ ನನ್ನ ಕ್ಷೀಣ ಪ್ರತಿರೋಧವಾಗಿತ್ತು. ಕೆಲವೇ ಮೈಲುಗಳ ದೂರದಲ್ಲಿ ಸುಡುವ ಮರಳು ಹಾಗು ಬಂಡೆಗಳರಾಶಿಯಲ್ಲಿಏನುಕಾದಿದೆಯೋಎನ್ನುವುದರ ಅರಿವು ನನಗೆ ಕಿಂಚಿತ್ತೂ ಇರಲಿಲ್ಲ.

ಸಂಪರ್ಕ ಸಾಧಿಸಲು ಕಾಯುತ್ತಿದ್ದ ಕಾಲದಲ್ಲಿ ನಗರದಲ್ಲಿ ಸುತ್ತಾಡಲು ನನಗೆ ಅವಕಾಶ ಸಿಗುತ್ತಿತ್ತು. ಕೆಲವು ಪ್ರದೇಶಗಳಲ್ಲಿ ನಿಧಾನವಾಗಿ ಚಲಿಸುವ ಉಪನಗರ ರೈಲಿನಲ್ಲಿ ಪ್ರಯಾಣಿಸಿದೆ, ಕೆಲವು ಪ್ರದೇಶಗಳಲ್ಲಿ ನಡೆದೇ ಓಡಾಡಿದೆ.

ಈ ನಗರ ಮತ್ತದರ ಉಪನಗರಗಳು ಪರಿಸರ ನನಗೆ ಚೆನ್ನಾಗಿ ಗೊತ್ತು. ಯುದ್ಧಪೂರ್ವ ದಿನಗಳಲ್ಲಿ ಬ್ರಿಟಿಷ್ ಪಟ್ಟಣದವೈಭವೋಪೇತಕ್ಲಬ್‌ಗಳುಮತ್ತು ನರ್ತನಹಾಲ್‌ಗಳಲ್ಲಿಸಾಮಾಜಿಕಕೂಟದಹೆಸರಿನಲ್ಲಿ ಪಾಳೇಗಾರಿ-ಸಾಮ್ರಾಜ್ಯಶಾಹಿ ಮೈತ್ರಿಕೂಟ ಸಭೆ ಸೇರುವ ಒಂದು ಸ್ಥಳವಾಗಿತ್ತದು. ನನಗೆ ಅನೇಕ ಸಿಹಿ ನೆನಪುಗಳೂ-ಕಹಿಅನುಭವಗಳೂಇವೆ.ಒಂದೊಮ್ಮೆ ತುಂಬಾ 'ಆತ್ಮೀಯ'ವಾಗಿದ್ದ ಈ ಸ್ಥಳದಲ್ಲಿ ಓಡಾಡುವಾಗನನ್ನಹೃದಯಡವಗುಟ್ಟತೊಡಗಿತು.

ಕಳೆದ ಹತ್ತು ವರ್ಷಗಳಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಒಂದು ಜಾಗತಿಕ ಯದ್ಧ ನಡೆದು ಅದನ್ನು ಸೋವಿಯತ್ ಒಕ್ಕೂಟ ನೇತೃತ್ವದ ಪ್ರಜಾಸತ್ತಾತ್ಮಕ ಶಕ್ತಿಗಳು ಗೆದ್ದಿವೆ. ಒಂದು ದೇಶದ ಉದ್ಧಾರಕರು ಮತ್ತು ಹೀರೋಗಳು ಎಂದು ಆಷಾಡಭೂತಿತನದ ಬಿಂಕದಿಂದ ಅದರ ಸುತ್ತ ಸುತ್ತಿದವರು ದೇಶಕ್ಕೆ ವಿಶ್ವಾಸದ್ರೋಹ ಬಗೆದರು. ಈಗ ನಿಜಾಮ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಗಾಂಧಿ ಟೋಪಿ ವೀರರಿಗೆ ತಲೆ ಬಾಗಬೇಕಾಯಿತು. ಈ ಗಾಂಧಿ ಟೋಪಿ ವೀರರೂ ಈಗಲೂ ತೆರೆಮರೆಯಿಂದ ಆಡಳಿತ ನಡೆಸುತ್ತಿರುವ - ನಿಯಂತ್ರಿಸುತ್ತಿರುವಬಿಳಿಯಸಾಹೇಬರಿಗಿಂತಏನೂ ಕಮ್ಮಿಯಿಲ್ಲ.

ಹಿಂದೆ ನಾನು ಓಡಾಡಿಕೊಂಡಿದ್ದ ನಗರದ ನೆನಪುಗಳು ಮೊಗೆದು ಬರುತ್ತಿದ್ದಾಗ ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಆದ ಭಾರಿ ಬದಲಾವಣೆಗಳು ಸುಳಿದಾಡಿದವು.

ಇತರ ಅನೇಕ ವಿಚಾರಗಳಲ್ಲೂ ಬದಲಾವಣೆ ಆಗಿವೆ. ಒಂದೊಮ್ಮೆ ಸೈನಿಕರು ಕಂಠಮಟ್ಟ ಕುಡಿದು ಓಲಾಡುತ್ತಿದ್ದ ತಾಣ, ಒಂದೊಮ್ಮೆ ಇತರರ ಹೆಂಡತಿಯರು ಹಾಗೂ ತಂಗಿಯರ ಮಾನ ಹಾಳು ಮಾಡುತ್ತಿದ್ದಯುವಸೈನಿಕರಿಗೆಆಟದಮೈದಾನವಾಗಿದ್ದ 'ಶಾಂತಿ ನಿಲ್ದಾಣ' ಈಗ ಕಾರ್ಯಾಚರಣೆ ಪಡೆಯ ಒಂದು ಮೂಲ ಕೇಂದ್ರ ಕಚೇರಿ ಆಗಿತ್ತು.

ಆಲಿವ್ ಹಸಿರು ಬಟ್ಟೆ ತೊಟ್ಟು, ಗನ್‌ಗಳನ್ನು ತೂಗು ಹಾಕಿಕೊಂಡಿದ್ದ, ಧೂಳು ತುಂಬಿದ ಬಟ್ಟೆ ಹಾಕಿಕೊಂಡು, ಮುಖ ತೊಳೆಯದ ಸೈನಿಕರನ್ನು ಹೊತ್ತಭಾರಿಲಾರಿಗಳುಹಾದುಹೋದವು.ಅವುಗಳು ರೈತರು ಬಂಡಾಯವೆದ್ದ ಪ್ರದೇಶಗಳಿಗೆ ಸೈನಿಕರನ್ನು ಸಾಗಿಸುತ್ತಿದ್ದವು ಹಾಗೂ ಅಲ್ಲಿಂದ ವಾಪಸ್ ಕರೆ ತರುತ್ತಿದ್ದವು.

ಭಾರಿ ದಣಿದಿದ್ದ ಹಾಗೂ ಮುಖ ಸೊಟ್ಟಗೆ ಮಾಡಿಕೊಂಡಿದ್ದ ಹಿರಿಯ ಅಧಿಕಾರಿಗಳು ಕೂತಿದ್ದ ಪುಟ್ಟ ಜೀಪ್‌ಗಳು ಚಲಿಸಿದವು. ಆ ಜೀಪ್‌ಗಳ ಕಟ್ಟಿದ್ದಟ್ರಾಲಿಗಳಲ್ಲಿಅಧಿಕಾರಿಗಳಕಿಟ್‌ಗಳುಇದ್ದವು ಅವುಗಳ ಮಡ್‌ಗಾಡ್‌ಗಳಿಗೆ ಕೆಸರು ಮೆತ್ತಿದ್ದ ಕಂಡರೆ ಅವುಗಳು ಕ್ರಾಸ್‌ಕಂಟ್ರಿ ರೇಸ್ ಹೋಗಿದ್ದವೇನೋ ಅನಿಸಿತು...

ಈ ವಿದ್ಯಮಾನ ನನಗೆ ಕಣ್ಣು ತೆರೆಸುವಂತಿತ್ತು ಒಂದುಸಣ್ಣಬೆದರಿಕೆಗಾಗಿ,ಕೆಲವೇಬಂಡುಕೋರ ಹೋರಾಟಕ್ಕಾಗಿ ಇಡೀ ಗ್ಯಾರಿಸನ್ನನ್ನು ಸನ್ನ ಸ್ಥಿತಿಯಲ್ಲಿರಿಸಿ 'ಯುದ್ಧ ಆದೇಶ' ನೀಡಿದ್ದು ನಿಜಕ ಅಚ್ಚರಿಯದ್ದಾಗಿತ್ತು, ಗೊಂದಲಮಯೂ ಆಗಿತ್ತು

ವಾರಾಂತ್ಯದ ಬಿಡುವಿನಲ್ಲಿದ್ದ ಸೈನಿಕರ ಒಂದ ತಂಡ ಬಜಾರ್‌ಗಳಲ್ಲಿ ಠಳಾಯಿಸುತ್ತಿತ್ತು. ಅವ ಸಮವಸ್ತ್ರ ಗಬ್ಬೆದ್ದು ಹೋಗಿತ್ತು. ಅವರು ಬ್ ಚಡ್ಡಿಗಳು,ಪಾಲಿಶ್‌ಮಾಡದಶೂಗಳನ್ನುಧರಿಸಿದ್ದ ಅಕ್ಕಿನಹೆಲ್ಮೆಟ್‌ಗಳುಅವರಮುಖವನ್ನುರಕ್ಷಿಸಿದ್ದ ಬಹುಶಃ ದಕ್ಷಿಣ ಪ್ರಸ್ಥಭೂಮಿಯನ್ನು ಸುಡು ಬಿಸಿಲಿನಿಂದ ಅವರನ್ನು ಹೆಲ್ಮೆಟ್‌ಗಳು ರಕ್ಷಿಸಿದ್ದ ಎಂದು ನಾವು ನಂಬಬೇಕೆನ್ನುವುದು ಕಾರಿಯ ಗುಂಪಿನವರ ಉದ್ದೇಶವಿದ್ದಂತಿತ್ತು. ಅ ಚಳಿಗಾಳಿಯಿತ್ತು.ಸೂರ್ಯಅಷ್ಟುಪ್ರಖರನಾಗಿರಲಿ

ಸೇನಾ ನಿಲ್ದಾಣಗಳ ಠಾಣೆಯಾದ 'ಶಾಂ ನಿಲ್ದಾಣ'ದಲ್ಲಿ ಈ ರೀತಿಯಾಗಿ ಬಿಸಿ ಗಾಳಿ ಯಾವುದೇ ಬೆದರಿಕೆ ಇಲ್ಲದಾಗ, ಸುತ್ತಮುತ್ತ ಎಲ್ ಗುಂಡು ಹಾರುವ ಭಯ ಇಲ್ಲದಾಗ ಉಕ್ ಶಿರಸ್ತ್ರಾಣಗಳನ್ನು ಧರಿಸಿದ್ದು ಶಾಂತಿ ಕಾಲದಲ್ಲಿ ಸೈನ ತಕ್ಕ ಧಿರಿಸಾಗಿರಲಿಲ್ಲ.

ಈ ಸೈನ್ಯದ ಉದ್ದೇಶ ಹಾಗೂ ಕೆಲಸದ ನಡು ವಿರೋಧಾಭಾಸಎದ್ದುಕಾಣುವಂಥದ್ದಾಗಿತ್ತು.ಒ ಸಾಮಾನ್ಯ 'ಶಾಂತಿತಾಣ'ದ ಮುಖವಾಡ ಧ ಇದುದಬ್ಬಾಳಿಕೆನಡೆಸುವ,ಜನವಿರೋಧಿಸೇನೆಯ ಕಾರ್ಯನಿರ್ವಹಿಸಿತು.ಇದರಲ್ಲಿ40ಸಾವಿರಸೈನಿಕರ ತೆಲಂಗಾಣದಲ್ಲಿ ಅವರನ್ನು ನಿಯೋಜಿಸಲಾಗಿ

(ಮುಂದುವರಿಯುವುದು

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಅಗಸ್ಟ್ 16 ರಿಂದ 31,2003
ಕೇಂದ್ರ ಸರಕಾರದ ಅಮೇರಿಕ ಪರ ವಿದೇ ನೀತಿ, ಜನವಿರೋಧಿ ಆರ್ಥಿಕ ನೀತಿ ಹಾಗ - ಕೋಮುವಾದೀಕರಣದ ವಿರುದ್ಧ ಪ್ರಚಾರಾಂದೋಲನ
ಸೆಪ್ಟೆಂಬರ್ 9 ರಂದು ಬೆಂಗಳೂರಿನಲ್ಲಿ ರಾ
ಸೆಪ್ಟೆಂಬರ್ 18 ರಂದು ಮಂಗಳೂರಿನ ರ್‍ಯಾಲಿ

ಅಗಸ್ಟ್ 20 ರಿಂದ, 2003
ಗ್ರಾಮೀಣ ಕೃಪಾಂಕ ನೌಕರಿಯಿಂದ ವಜಾಗೊಂಡವರ ಅನಿರ್ದಿಷ್ಟಾವಧಿ ಧರ ಸತ್ಯಾಗ್ರಹ ಮಧ್ಯಾಹ್ನ 12 ಗಂಟೆಗೆ ಬನ್ನಪ್ಪ ಪಾರ್ಕ್, ಕಾರ್ಪೋರೇಶನ್ ಕಛ ಬಳಿ, ಬೆಂಗಳೂರು

ಅಗಸ್ಟ್ 24,2003
ಕಾಂ.ಸೂರ್ಯನಾರಾಯಣರಾವ್ ಜನ್ಮ ಕಾರ್ಯಕ್ರಮ- ಬೆಂಗಳೂರು

ಸೆಪ್ಟೆಂಬರ್ 11,2003
ಸಿ.ಐಟಿಯು ದ.ಕ. ಜಿಲ್ಲಾ ಸಮ್ಮೇಳನ

ವೃತ್ತಿ ಶಿಕ್ಷಣ : ಗೊಂದಲಕಾರಿ ತೀರ್ಪು - ಹಾಲೋಗರ ಉಂಡ ಖಾಸಗಿ ಸಂಸ್ಥೆಗಳು

ವೃತ್ತಿ ಶಿಕ್ಷಣದ ಸೀಟು ಹಂಚಿಕೆ ಮತ್ತು ಶುಲ್ಕಗಳ ನಿಗದಿಗೆ ಸಂಬಂಧಿಸಿ ಆಗಸ್ಟ್ 14 ರಂದು ಸುಪ್ರೀಂಕೋರ್ಟ್ ತೀರ್ಪೊಂದು ನೀಡಿದೆ. ಅನುದಾನ ರಹಿತ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ (ಈ ವರುಷ ಮಾತ್ರ) ಖಾಸಗಿ ಸಂಸ್ಥೆಗಳು 50:50 ಅನುಪಾತದಂತೆ ಸೀಟು ಭರ್ತಿ ಮಾಡಿಕೊಳ್ಳಬಹುದು ಎಂಬುದು ಈ ತೀರ್ಪಿನ ಒಂದಂಶ. ಕ್ಯಾಪಿಟೇಷನ್ ಫೀಯನ್ನು ನಿಷೇಧಿಸಲಾಗಿದೆಯೆಂದಿರುವ ತೀರ್ಪು ಶುಲ್ಕ ವ್ಯವಸ್ಥೆಯ ನಿಗದಿಯನ್ನು ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ನೀಡಿದೆ! ಅದರ ಮೇಲ್ವಿಚಾರಣೆಗೆ ಐವರ ಸಮಿತಿಯೊಂದು ಇರಬೇಕೆಂದಿದೆ. ಯಾರಿರಬೇಕೆಂದೂ ನ್ಯಾಯಾಲಯವೇ ಸೂಚಿಸಿ, ಅದರ ರಚನೆಯನ್ನು ಸರ್ಕಾರ ಮಾಡಲು ಆದೇಶಿಸಿದೆ. ಸಮಿತಿಯಲ್ಲಿ ಸರ್ಕಾರದ ವೈದ್ಯಕೀಯ ಅಥವಾ ತಾಂತ್ರಿಕ ಶಿಕ್ಷಣ ಇಲಾಖೆ ಕಾರ್ಯದರ್ಶಿ ಮಾತ್ರ ಇರುತ್ತಾರೆ. ಇನ್ನೂ ಒಂದು ವಿಶೇಷವೆಂದರೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಯನ್ನು ಆಯಾ ಸಂಸ್ಥೆಗಳು ನಡೆಸಿ ಆಯ್ಕೆಮಾಡಿಕೊಳ್ಳಬಹುದು. ಇಲ್ಲವೆಂದರೆ ಸರ್ಕಾರ ಮಾಡಬಹುದು.

ಈ ತೀರ್ಪಿನಿಂದ 'ಶಿಕ್ಷಣದ ವ್ಯಾಪಾರಿಗಳು' ಹಾಲೋಗರ ಉಂಡಂತೆ ಉಬ್ಬಿಹೋಗಿದ್ದಾರೆ. ಇಂತಹದೇ ತೀರ್ಪನ್ನು ಅವರು ಸರ್ಕಾರ'ದಿಂದ'ಲೂ ನಿರೀಕ್ಷಿಸಿದ್ದರು. ಈಗ 'ಬ್ರಹ್ಮ ಲಿಖಿತ'ದಂತಹ ತೀರ್ಪನ್ನು ನ್ಯಾಯಾಲಯವೇ ನೀಡಿರುವುದರಿಂದ ಹೆಚ್ಚು ನಿರಾಳವಾಗಿದ್ದಾರೆ. ತಮಾಷೆಯ ಸಂಗತಿಯೆಂದರೆ, ಪ್ರವೇಶದ ಕುರಿತು ರಾಜ್ಯ ಸರ್ಕಾರ 75 : ಶಿಕ್ಷಣ ಸಂಸ್ಥೆಗಳು 25 ಎಂಬ ಸರ್ಕಾರದ ನಿರ್ಧಾರವನ್ನು ಹೈಕೋರ್ಟ್ ಮಾನ್ಯ ಮಾಡಿತ್ತು. 'ಶಿಕ್ಷಣ ಲಾಭ' ಸುಪ್ರೀಂಕೋರ್ಟ್‌ಗೆ ಹೋದಾಗಲೂ ಜುಲೈ 2 ರ ತೀರ್ಪಿನಲ್ಲಿ ಹೈಕೋರ್ಟ್ ನಿರ್ಧಾರವನ್ನು ದ್ವಿಸದಸ್ಯ ಪೀಠ ಅಂಗೀಕರಿಸಿತ್ತು. ಆದರೆ ಇದೇ ನ್ಯಾಯಾಲಯದ ನಾಲ್ಕು ನ್ಯಾಯಮೂರ್ತಿಗಳಿರುವ ವಿಭಾಗೀಯ ಪೀಠವು ಹಿಂದಿನದನ್ನು ತಿರಸ್ಕರಿಸಿ 50:50 ತೀರ್ಪು ನೀಡಿದೆ! ಈ 'ಫಿಫ್ಟೀ, ಫಿಫ್ಟೀ' ವಾದವನ್ನೇ 'ಶಿಕ್ಷಣದ ವ್ಯಾಪಾರಿಗಳು' ಪ್ರತಿಪಾದಿಸುತ್ತಿದ್ದರು!

ಇನ್ನು ಸೀಟು ಕೋಟಾ ನಿಗದಿ ರಾಜ್ಯ ಸರ್ಕಾರಗಳಿಗಿವೆಯಂತೆ. ಅದಕ್ಕೆ 'ಸ್ಥಳೀಯ ಅವಶ್ಯಕತೆ'ಗೆ ಅನುಗುಣವಾಗಿ ಎಂದಿದೆ! ಈಗ 'ಅವಶ್ಯಕತೆ' ಹೇಗೆಲ್ಲಾ ಬರುತ್ತದೆ ಎಂದು

ಕೇಂದ್ರೀಯ ಶಾಸನ ತುರ್ತು ಅಗತ್ಯ

ಗೊತ್ತಿರುವುದೇ! ಕರ್ನಾಟಕದಲ್ಲಿರುವ ಎಲ್ಲಾ ವೃತ್ತಿಶಿಕ್ಷಣದ ವ್ಯಾಪಾರವೂ ಸ್ಥಳೀಯ - ರಾಜ್ಯದ, ರಾಷ್ಟ್ರದ, ಅಂತರ್‌ರಾಷ್ಟ್ರೀಯ ಅವಶ್ಯಕತೆಗಳಂತೆಯೇ ಇದೆಯಲ್ಲ! ಹೀಗೆ ಈ ತೀರ್ಪೇ ಹಲವಾರು ಗೊಂದಲಗಳನ್ನು ಮನಸೋಇಚ್ಛೆ ಮೇಯಲು ಅವಕಾಶವನ್ನು ಹುಟ್ಟುಹಾಕುತ್ತದೆ. ಈಗಾಗಲೇ ಹುಟ್ಟುಹಾಕಿದೆ.

ಈವಾರ ಕರ್ನಾಟಕ ಒಂದು ನೋಟ — ಎಸ್ ವೈ ಗುರುಶಾಂತ್

ಈ ಹಿಂದೆ ಸರ್ಕಾರ ಸಿಇಟಿ ರ್‍ಯಾಂಕ್ ಮತ್ತು ಮೆರಿಟ್ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಸೀಟು - ಶಿಕ್ಷಣ ಸಂಸ್ಥೆಗಳನ್ನು ಹಂಚಿದ್ದರಿಂದ ಬಹಳಷ್ಟು ವಿದ್ಯಾರ್ಥಿಗಳು ಕಾಲೇಜುಗಳಿಗೆ ಸೇರಿದ್ದಾರೆ. ಪುನರ್ ವಿಮರ್ಶಿತ ಶುಲ್ಕವನ್ನು ತೆತ್ತೂ ಆಗಿದೆ. ಇನ್ನೂ ಸಾವಿರಾರು ವಿದ್ಯಾರ್ಥಿಗಳು ಸೇರಬೇಕಿದೆ. ಇಂತಹ ಪರಿಸ್ಥಿತಿಯಲ್ಲಿ ಇವರ ಭವಿಷ್ಯವೇನು? ಕಾಲೇಜ್ ಸೇರಿದವರು ಹೊರಬರಬೇಕೆ? ಇಲ್ಲ ಅವರು ಮುಂದುವರೆಯುತ್ತಾರೆ ಎನ್ನುತ್ತದೆ ಕೋರ್ಟ್. ಹಾಗಾದರೆ 'ಫಿಫ್ಟೀ' ಕೋಟಾದವರಿಗೆ ಎಲ್ಲಿ ಸೇರಿಸುತ್ತಾರೆ. ರ್‍ಯಾಂಕ್ ಪಟ್ಟಿಯನ್ನು ಪುನರ್ ಪ್ರಕಟಿಸಲಾಗುವುದು ಎಂದಿದ್ದಾರೆ. ಇದೆಷ್ಟು ಗೊಂದಲಕಾರಿ? ವಿದ್ಯಾರ್ಥಿ-ಪಾಲಕರಿಗೆ ಎಷ್ಟು ಯಾತನೆ? ಹೊರೆ ಎಂಬುದರ ಅರಿವು ಈ ನ್ಯಾಯ-ನೀತಿಗಳ ಬ್ರಹ್ಮರಿಗೆ ತಿಳಿಯದೇ? ಶುಲ್ಕ ನಿದಿಯಲ್ಲಿಯೂ ಒಂದೊಂದು ಕಾಲೇಜು ಒಂದೊಂದು ರೀತಿ. ಸಮಾನ ಶುಲ್ಕ ನಿಗದಿ ಎಂಬುದೇ ಇರುವುದಿಲ್ಲ. ಶಿಕ್ಷಣ ಜನಸಾಮಾನ್ಯರ ಸ್ವತ್ತು. ಮಾರಾಟದ ಸರಕಾಗಬಾರದು ಎಂಬಂತಹ ಆಶಯಗಳು ಜಾಗತೀಕರಣ-ಉದಾರೀಕರಣ ಸಿದ್ಧಾಂತದ ಕೊಳೆಯಲ್ಲಿ ತಿರುಗು ಮುರುಗಾಗಿವೆ.

ನ್ಯಾಯಾಲಯಗಳೂ ಈ ಪ್ರಭಾವದಿಂದ ಹೊರತೇನಲ್ಲ. ನ್ಯಾಯಾಲಯಗಳು ಜನಸಾಮಾನ್ಯರ ರಕ್ಷಣೆಗೆ ಬರಬೇಕು, ನಿಲ್ಲಬೇಕು. ಆದರೆ ಹಾಗಾದುತ್ತಿಲ್ಲ. ಇಂತಹ ತೀರ್ಪಿನಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕ. ಗೊಂದಲ, ವ್ಯಾಪಾರೀಕರಣ, ಸಾಮಾಜಿಕ ನ್ಯಾಯಕ್ಕೆ ಅಘಾತಕಾರಿಯಾಗಿ ಪರಿಣಮಿಸುತ್ತದೆ. ಅರಾಜಕತೆ, ಭ್ರಷ್ಟತೆ, ಸ್ವಜನಪಕ್ಷಪಾತ ತಾಂಡವವಾಡಿ ಹಕ್ಕಿನ ವಂಚನೆಯಾಗುತ್ತದೆ. ಈ ಒಟ್ಟು ಸಂದರ್ಭದ ವಿದ್ಯಮಾನಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ 'ಕೇಂದ್ರೀಯ ಶಾಸನ'ವನ್ನು ತರುವುದರ ಮೂಲಕ ಜನರ ಪ್ರಜಾಸತ್ತಾತ್ಮಕ ಹಕ್ಕನ್ನು-ಸಮಾಜದ ಸ್ವಾಸ್ಥ್ಯವನ್ನು ಕಾಯಬೇಕು. ಆ ಮೂಲಕ ಸಂವಿಧಾನದ ಸಾಮಾಜಿಕ ನ್ಯಾಯ-ಪ್ರಜಾಸತ್ತಾತ್ಮಕ ಹಕ್ಕು-ಅವಕಾಶಗಳನ್ನು ಎಲ್ಲಾ ಜನತೆಗೆ ವಿಸ್ತರಿಸಿ, ಬಲಪಡಿಸಿದಂತಾಗುತ್ತದೆ. ಶಾಶ್ವತ ಪರಿಹಾರವೂ ರೂಪಿತವಾಗುತ್ತದೆ. ಕನಿಷ್ಟ ತಕ್ಷಣ ಸುಗ್ರೀವಾಜ್ಞೆ ಹೊರಡಿಸುವುದು ತುರ್ತು ಅಗತ್ಯ. ಇದು ಜನರ ಕೋರಿಕೆ, ಕೃಷ್ಣ, ವಾಜಪೇಯಿ ಏನನ್ನುತ್ತಾರೆ? ಏನೂ ಹೇಳದೆ ಆಗಿರುವುದೆಲ್ಲಾ ಒಳ್ಳೆಯದೇ ಎಂದು 'ಮೌನಪಿತೂರಿ' ಮಾಡಿದರೆ ಜನ ಏನೆನ್ನಬೇಕು?..... ತೊಲಗಿ ಎಂದಲ್ಲವೇ?



ಜನತಾದಳ ವಿಲೀನ

ಶನಿವಾರ, 16 ರಂದು ಜೆಡಿ(ಎಸ್) ಮತ್ತು ಜೆಡಿ(ಯು) ಬಣಗಳು ವಿದ್ಯುಕ್ತವಾಗಿ ವಿಲೀನ ಗೊಂಡವು. ಈ ಹಿಂದೆಯೇ ಅಂತಹ ತೀರ್ಮಾನಗಳನ್ನು ಪ್ರಕಟಿಸಿಯೂ ಆಗಿತ್ತು. ಆದರೆ ಇಂತಹ ವಿಲೀನದ ಕ್ರಿಯೆಯು ಜನರ ಮುಂದೆ ಉದ್ಘೋಷವಾಗಬೇಕು. ಅವರಲ್ಲಿ ಉತ್ಸಾಹ ಹೊಮ್ಮಬೇಕು. ಒಡೆದು ಹೋಗಿದ್ದ ಮನಸ್ಸುಗಳು ಒಂದುಗೂಡಬೇಕು. ಈ ಮೂಲಕವೂ ರಾಜ್ಯದ ರಾಜಕಾರಣದಲ್ಲಿ ತಮ್ಮ ಅಸ್ತಿತ್ವದ ಗಟ್ಟಿತನ ಸಾರಬೇಕು ಎಂಬ ದಳದ ನಾಯಕರ ಲೆಕ್ಕಾಚಾರ ಸಹಜ.

ಕಾಂಗ್ರೆಸ್‌ಗೆ ದಳವೇ ಪರ್ಯಾಯವೆಂದು ಘೋಷಿಸಿದ್ದಾರೆ ಅವರು. ಕಾಂಗ್ರೆಸ್-ಬಿಜೆಪಿಗಳನ್ನು ಎದುರಿಸಿ, ಮೂರನೇಯ ಪರ್ಯಾಯ ಬಲಗೊಳಿಸುವ ಮುಂದಿನ ಹೋರಾಟದ ದಿಕ್ಕು ಸಾರಿದ್ದಾರೆ ದಳದ ನಾಯಕರು. ಇದು ಸಕಾರಾತ್ಮಕ ಬೆಳವಣಿಗೆ. ಇದನ್ನು ಜನತೆಯ [illegible] ಸಾಧಿಸುವುದು ಜನತೆಗೆ ಕೊಟ್ಟ ವಚನವೂ ಹೌದು. ಜನತಾ ಪರಿವಾರದಲ್ಲಿ ಜೆಡಿ(ಯು) ಬಣ ಸಣ್ಣದು. ತಿಪ್ಪಣ್ಣ, ಸಿಂಧ್ಯಾರವರೆ ಪ್ರಮುಖರು. ಆದ್ದರಿಂದ ಇದಕ್ಕೆ ಅಂತಹ ಮಹತ್ವ ಇರಲಾರದು ಎಂದು ವಿಲೀನವಿರೋಧಿಗಳು, ಈ ಬೆಳವಣಿಗೆ ಸಹಿಸದವರು ಹೇಳುತ್ತಿದ್ದಾರೆ. ಚುನಾಯಿತ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಅ.ಭಾ. ಪ್ರಗತಿಪರ ಜನತಾದಳದೊಂದಿಗೆ ಇರಬಹುದು. ಈ ಬಣದಲ್ಲೂ ಚಿಂತನ-ಮಂಥನ ನಡೆದಿದೆ ಎಂಬುದು ನಿಜ. ಅಲ್ಲಿಯೂ ವಿಲೀನಪರ ಮನೋಭಾವ ಹೆಚ್ಚಿದೆ. ವಿರೋಧ ಸಣ್ಣದು ಎನ್ನಬಹುದು. ಇವೆಲ್ಲ ಸಂಸದೀಯ ಲೆಕ್ಕಾಚಾರದ ಆಚೆಗೆ ವಿಲೀನದ ಪರ ಜನರ ಮನೋಭಾವ ಬೆಳೆಯುತ್ತಿದೆ. ಇದು ಗಮನಿಸಬೇಕು. ವಿಲೀನದ ವಿರೋಧದ ಧ್ವನಿಯ ಹಿಂದೆ ಕಾಂಗ್ರೆಸ್-ಬಿಜೆಪಿಯ ಸೂತ್ರದಾರಿಗಳು ಹುನ್ನಾರ ಇಲ್ಲದೇ ಇಲ್ಲ. ಇಂತಹ ಸಂದರ್ಭದಲ್ಲಿ ಬಂದಪ್ರಶ್ನೆಗಳಿಗೆ ಜನತಾದಳ(ಎಸ್)ನ ನಾಯಕರು ತಾಳ್ಮೆಯಿಂದ ಉತ್ತರಿಸಿದ್ದಾರೆ. ಅವರದು ವಿಲೀನದ ಪರದ ಧ್ವನಿ. ಹಾಗೆ ಎರಡಾದ ಸೈದ್ಧಾಂತಿಕ- ರಾಜಕೀಯ ಅಂಶಗಳನ್ನು ಸಿದ್ದರಾಮಯ್ಯ ನೆನಪಿಸಿದ್ದಾರೆ.

ಈಗ ವಿಲೀನಕ್ಕೆ ಕಾಂಗ್ರೆಸ್-ಬಿಜೆಪಿ ವಿರುದ್ಧದ ರಾಜಕೀಯ ಹೋರಾಟಕ್ಕೆ ಜನತೆಯ ಸ್ಪಂದನೀಯ ಮನೋಭಾವವನ್ನು ಗಂಭೀರ ಪರಿಗಣಿಸಿ, ಹೋರಾಟಕ್ಕೆ ಇಳಿಯಬೇಕು. ಕೇವಲ ಚುನಾವಣಾ ಸಿದ್ಧತೆಯ ವ್ಯಕ್ತಿಗತ ಲೆಕ್ಕಾಚಾರದಲ್ಲಿ ಅಲ್ಲ; ರಾಜ್ಯದ-ರಾಷ್ಟ್ರದ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿನ ಕರ್ತವ್ಯ ಗುರುತಿಸಿ, ಜನತೆಯನ್ನುಳಿಸುವ ಪ್ರಶ್ನೆಗಳಾಧಾರದಲ್ಲಿ ಹೋರಾಟ ರೂಪಿಸಬೇಕು. ಇದು ನಿಜ ಪರ್ಯಾಯ ರೂಪಿಸುತ್ತದೆ. ದಳದ ಉಳಿದಬಣಗಳು ಈ ದಿಶೆಯಲ್ಲಿ ಕ್ರಿಯಾಶೀಲವಾಗುವುದು ತುರ್ತು ಅಗತ್ಯ.

ಬರ ಅಧ್ಯಯನಕ್ಕೆ ಮತ್ತೊಂದು ನಾಟಕ ಕಂಪನಿ!

ಬರ ಅಧ್ಯಯನಕ್ಕೊಂದು ಕೇಂದ್ರ ಸರ್ಕಾರದ ತಂಡವೊಂದು ಮತ್ತೆ ಬಂದಿದೆ. ಕಳೆದ ಎರಡು ವರುಷಗಳಲ್ಲಿ ಇಂತಹ ತಂಡಗಳೂ, ಸಚಿವರು ಅಧಿಕಾರಿಗಳು ಬಂದು ಹೋದರೂ, ಅಗತ್ಯವಿರುವಷ್ಟು ನೆರವನ್ನು ನೀಡಲಿಲ್ಲ. ಜನರನ್ನು ರಕ್ಷಿಸಲು ಭಾವಿಸಲಿಲ್ಲ. ಕೊಡುವ ಸಹಾಯವನ್ನು ಸಾಲದ ಮುಂಗಡವಾಗಿ ಕೊಡಲು ಕೇಂದ್ರ ಸರ್ಕಾರ ಮುಂದಾಯಿತು. ಅದರಲ್ಲೂ ತಾರತಮ್ಯ. ವಾಜಪೇಯಿ ಸರ್ಕಾರದ ಸಮರ್ಥಕ ಎನ್‌ಡಿಎ ಭಾಗಿದಾರರಿಗೆ ಒಂದು ನೀತಿ-ಇತರ ರಾಜ್ಯಗಳಿಗೆ ಇನ್ನೊಂದು ನೀತಿ. ಮುತ್ಸದ್ದಿ ಎಂದುಕೊಳ್ಳುವ ಪ್ರಧಾನಿ ವಾಜಪೇಯಿಯವರೇ ಚಂದ್ರಬಾಬು ನಾಯ್ಡು ಆಂಧ್ರ ಪ್ರದೇಶಕ್ಕೆ, ಕರ್ನಾಟಕಕ್ಕೆ ಎಂತಹ ತಾರತಮ್ಯದ ಮಾನವೀಯತೆ ಇಲ್ಲದ ಮಾನದಂಡ ಅನುಸರಿದರು ಎಂಬುದು ಬಹಿರಂಗ ಸತ್ಯ! ಇಂತಹುದೇ ನೆಪ ಹೇಳಿ ರಾಜ್ಯದ ಕಾಂಗ್ರೆಸ್ ಸರ್ಕಾರವೂ ನೆರವಿಗೆ ಬರಬಹುದಾದಷ್ಟು ಪ್ರಮಾಣದಲ್ಲಿ ಬರಲಿಲ್ಲ. ಸಂಪನ್ಮೂಲ ಕ್ರೋಢೀಕರಿಸಿ ಬಳಸಲಿಲ್ಲ. ಈ 'ಮಾನವಂತರ' ಸಹಾಯ ಎಷ್ಟಿದೆಯೆಂದರೆ ನಾಡಿನ ರೈತರು - ಕೂಲಿಕಾರರು ಹಸಿವಿನಿಂದ ಸಾಯುತ್ತಿದ್ದಾರೆ. ಆತ್ಮಹತ್ಯೆಗೀಡುಗುತ್ತಿದ್ದಾರೆ. ಕುಟುಂಬಗಳೇ ಮಕ್ಕಳು, ಮಹಿಳೆಯರು ನೀರಿನ-ಮಣ್ಣಿನ ಪಾಲಾಗುತ್ತಿದ್ದಾರೆ. ಇದನ್ನು ಅರಿಯಲು ಆಗದೇ?

ಅಲ್ಲಿ, ದೆಹಲಿಯ ಗದ್ದುಗೆ ಮೇಲೆ ಗಟ್ಟಿಯಾಗಿ ಕುಳಿತಿರುವ ಆಹಾರ ಸರಬರಾಜು ಸಚಿವ ರಾಜನಾಥ ಸಿಂಗ್ ಗೆ ರೈತರು ಸಾಯುತ್ತಿರುವುದು ತಿಳಿದಿಲ್ಲವಂತೆ! ಇಂಥವರಿಂದ ಎಂತಹ ಮಾನ, ಮಾನವೀಯತೆ ನಿರೀಕ್ಷಿಸಲಾದೀತು! ಜನರೆಂದರೆ ಇವರಿಗೆ ಎಂತಹ ತಿರಸ್ಕಾರ?

ಈಗಲೂ ತಂಡ ಬಂದಿದೆ-ಹೋಗುತ್ತಿದೆ. ಆಧುನಿಕ ತಂತ್ರಜ್ಞಾನದ ಈ ಯುಗದಲ್ಲಿ ಸೆಟಲೈಟ್-ಉಪಗ್ರಹಗಳ ಕಣ್ಣಿನಲ್ಲಿ ಕೆಲವು ಗಂಟೆಗಳಲ್ಲಿ ದೇಶದ, ರಾಜ್ಯದ ಯಾವ ಭಾಗ-ಎಷ್ಟೆಷ್ಟು ಬರಕ್ಕೆ ತುತ್ತಾಗಿದೆಯೆಂದು ವರದಿಯನ್ನು ಪಡೆಯಬಹುದು. ಅಂತಹ ಟನ್‌ಗಟ್ಟಲೇ ವಿಶ್ಲೇಷಣೆ ಈಗಾಗಲೇ ಇಲಾಖೆಯಲ್ಲಿ ಇದೆ. ಆದರೆ ನೋಡ ಬೇಕಾದವರು ಯಾರು? ಅವರಿಗೇನು ಅವಶ್ಯಕತೆ?- ಈ ತಂಡಗಳ ಭೇಟಿಯ ಅಮಾನವೀಯ ನಾಟಕ ಈಗಲೇ ನಿಲ್ಲಿಸಲಿ. ನಿಜವಾಗಿಯೂ ಧಾನ್ಯ-ಹಣ ಸಹಾಯ ನೀಡಿ ಜನರನ್ನು ರಕ್ಷಿಸಲಿ.



ಬೆಂಗಳೂರಿನ ವಿನೋಬಾನಗರದ ದಲಿತ ವಿದ್ಯಾರ್ಥಿ ಚಂದ್ರಮೂರ್ತಿ ಸಾವಿಗೆ ಕಾರಣರಾದ ಪೊಲೀಸ್ ಅಧಿಕಾರಿಯನ್ನು ಅಮಾನತು ಗೊಳಿಸುವಂತೆ ಹಾಗೂ ಚಂದ್ರಮೂರ್ತಿ ಕುಟುಂಬಕ್ಕೆ ನ್ಯಾಯ ಒದಗಿಸುವಂತೆ ಒತ್ತಾಯಿಸಿ ಡಿವೈಎಫ್ಐ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಪೊಲೀಸ್ ಮಹಾನಿರ್ದೇಶಕರ ಕಛೇರಿ ಎದುರು ಧರಣಿ ನಡೆಸಿದರು.

ಕೃಪಾಂಕ ನೌಕರರ ಮರುನೇಮಕಾತಿ ಆಮೆ ವೇಗದಲ್ಲಿ ತೆವಳುತ್ತಿರುವ ಸರ್ಕಾರ

ಕೃಪಾಂಕ ನೌಕರರ ಸ್ಥಿತಿ ಈಗಲೂ ಡೋಲಾಯಮಾನವೇ? ಸರ್ಕಾರದ ಭರವಸೆಗಳು, ಅದರ ಕ್ರಮಗಳು ಕ್ರಮಿಸುತ್ತಿರುವ ವೇಗ ಆಮೆ ತರದ್ದು. ಭರವಸೆ ಈಡೇರಿಸಲು ಸರ್ಕಾರದ ಮೇಲೆ ಒತ್ತಡ ಹೇರುವ ಹೋರಾಟ ಅತ್ಯಗತ್ಯ. ಈಚೆಗೆ ಮಧ್ಯಂತರ ಅವಧಿ ಮಂಡಿಸುತ್ತಾ ಮುಖ್ಯಮಂತ್ರಿ ಕೃಷ್ಣರವರು ಆಡಳಿತ ವೆಚ್ಚದ ಕಡಿತದ ಬಗ್ಗೆ ಯೋಜನೆ ಮಂಡಿಸಿ ಅಂಗೀಕರಿಸಿಕೊಂಡಿದ್ದಾರೆ ಎಂಬುದು ನೆನಪಿರಲಿ! ಒಟ್ಟು ವಿದ್ಯಮಾನಗಳತ್ತ ಅವಲೋಕನವಿಲ್ಲಿ.

ಕೆ.ಎನ್.ಉಮೇಶ್



ಜುಲೈ 24 ರಂದು ಗ್ರಾಮೀಣ ಕೃಪಾಂಕ ನೌಕರರನ್ನು ಕೂಡಲೇ ಮರುನೇಮಕ ಮಾಡಿಕೊಳ್ಳಬೇಕೆಂದು ಒತ್ತಾಯಿಸಿ ಸಾವಿರಾರು ನೌಕರರು ಮುಖ್ಯಮಂತ್ರಿಯವರ ಮನೆ ಮುಂದೆ ಧರಣಿ ನಡೆಸಿ ಮನವಿ ಸಲ್ಲಿಸಿದರು. ಅಂದೇ ಸರ್ಕಾರದ ಪರವಾಗಿ ನೀರಾವರಿ ಸಚಿವರು ವಿಧಾನ ಪರಿಷತ್‌ನಲ್ಲಿ ಎರಡು ತಿಂಗಳೊಳಗೆ ಎಲ್ಲಾ ವಜಾಗೊಂಡ ನೌಕರರನ್ನು ಮರುನೇಮಕ ಮಾಡಿಕೊಳ್ಳುವುದಾಗಿ ಪ್ರಕಟಿಸಿದ್ದಾರೆ. ಮನವಿ ಸ್ವೀಕರಿಸಿದ ಮುಖ್ಯಮಂತ್ರಿಯವರು ವಿಶ್ವಾಸವಿಡಿ, ಕಾಲಾವಕಾಶ ಮರುನೇಮಕ ಮಾಡಿಕೊಳ್ಳುತ್ತೇವೆ ಎಂದ ಕಾರಣ ಜುಲೈ 29' ರ ಧರಣಿಯನ್ನು ನಡೆಸಿ, ಇದುವರೆಗೆ ಕಾಲಾವಕಾಶ ನೀಡಲಾಯಿತು.

ಸುತ್ತೋಲೆಗಳು

ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿಗೊಳಿಸದಿರಲು ಇರುವ ತೊಂದರೆಗಳನ್ನು ತೋರಿ, ಸಂವಿಧಾನದಡಿ ಇರುವ ಅವಕಾಶವನ್ನು ಬಳಸಿ ಪರಿಚ್ಛೇದ 31(ಬಿ) ಅಡಿ ಶಾಸನ ರೂಪಿಸಲು ಸಲ್ಲಿಸಲಾಗಿದ್ದ ಬೇಡಿಕೆಯನ್ನು ಪರಿಗಣಿಸಿದೆ, ಅದನ್ನು ರೂಪಿಸಲು ಅಗತ್ಯ ಧೈರ್ಯ ಹಾಗೂ ರಾಜಕೀಯ ಇಚ್ಛಾಶಕ್ತಿ ತೋರದ ಸರ್ಕಾರ ಅಂತಿಮವಾಗಿ ಸುಪ್ರಿಂ ಕೋರ್ಟ್ ಆದೇಶ ಮೇರೆಗೆ ನೌಕರರನ್ನು ವಜಾಗೊಳಿಸಿದೆ. ಈ ಹಿಂದೆ 13,780 ಎಂದು ಇದ್ದ ಕೃಪಾಂಕ ನೌಕರರ ಸಂಖ್ಯೆ ಪ್ರಸ್ತುತ 16,000 ವನ್ನು ಮೀರಿದೆ. ಇದರಲ್ಲಿ ಕೋರ್ಟ್ ಆದೇಶದ ಮೇರೆಗೆ ಕೃಪಾಂಕ ಹೊರತುಪಡಿಸಿದಾಗ ವಜಾಗೊಂಡ ನೌಕರರ ಸಂಖ್ಯೆ 4792 ಎಂದು ವಿಧಾನ ಪರಿಷತ್‌ನಲ್ಲಿ ಪ್ರಕಟಿಸಲಾಗಿದೆ. ಆದರೆ ಸುಪ್ರಿಂ ಕೋರ್ಟ್‌ಗೆ ಈ ಸಂಖ್ಯೆ 6000 ಎಂದು ತಿಳಿಸಲಾಗಿದೆ. ಸಾವಿರಾರು ಶಿಕ್ಷಕರು bmtc{â ksrtc ಹಾಗೂ ಇತರೆ ಇಲಾಖೆ ನೌಕರರನ್ನು ವಜಾಗೊಳಿಸಲಾಗಿದೆ. ವಜಾಗೊಂಡು ತಿಂಗಳೆ ಉರುಳಿದೆ. ಇನ್ನು ಕೆಲವು ಪೋಲೀಸ್ ಸಬ್‌ಇನ್ಸ್‌ಪೆಕ್ಟರ್, kpsc ಆಯ್ಕೆ ಮಾಡಿದ್ದ ಎಫ್.ಡಿ.ಸಿ, ಎಸ್.ಡಿ.ಸಿ ಹಾಗೂ ಇಂಜನಿಯರ್‌ಗಳನ್ನು ವಜಾಗೊಳಿಸಿಲ್ಲ ಎಂದು ಸುಪ್ರಿಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನಾ ಅರ್ಜಿ ಸಲ್ಲಿಸಲಾಗಿದೆ. ಸೆಪ್ಟೆಂಬರ 4 ರೊಳಗೆ ಅವರನ್ನು ವಜಾಗೊಳಿಸಲು ಕೋರ್ಟ್ ತಿಳಿಸಿದೆ. ಅಗಸ್ಟ್ 18 ರೊಳಗೆ ಉಳಿದವರನ್ನು ಸಹಾ ವಜಾಗೊಳಿಸಲು ಮತ್ತೊಂದು ಸುತ್ತೋಲೆಯನ್ನು ಹೊರಡಿಸಲಾಗಿದೆ.

ಹೋರಾಟದತ್ತ

ಯಾರನ್ನು ವಜಾಗೊಳಿಸುವುದಿಲ್ಲ, ಕೋರ್ಟ್‌ಗಾಗಿ ಸುತ್ತೋಲೆ ಹೊರಡಿಸಲಾಗಿದೆ ಎಂಬೆಲ್ಲಾ ಹೇಳಿಕೆ ನೀಡಿ ನೌಕರರನ್ನು ದಾರಿ ತಪ್ಪಿಸಲು ಸರ್ಕಾರ ನಡೆಸಿದ ಯತ್ನದಿಂದ, ಸರ್ಕಾರದಲ್ಲಿ ಅಲ್ಪಸ್ವಲ್ಪ ವಿಶ್ವಾಸವಿರಿಸಿದ್ದ ನೌಕರರು ಸರ್ಕಾರದ ಮೇಲಿನ ಭರವಸೆಯನ್ನೇ ಕಳೆದುಕೊಂಡಿದ್ದಾರೆ. ವಜಾಗೊಂಡ ಮರುದಿನವೆ ಮರುನೇಮಕದ ಆದೇಶ ನೀಡಲಾಗುವುದು ಎಂದೆಲ್ಲಾ ಸರ್ಕಾರದ ಹೇಳಿಕೆಗಳು ಅಂತಿಮವಾಗಿ ಹುಸಿಯಾಗಿವೆ. ವಾಸ್ತವದಲ್ಲಿ ನೌಕರರು ವಜಾಗೊಂಡು, **ಪರಿಸ್ಥಿತಿಯ ಅರಿವಾದ ಕಾರಣ ಹೋರಾಟದ ಕಣಕ್ಕೆ ಇಳಿದಿದ್ದಾರೆ, ಅಲ್ಲಲ್ಲಿ ತಾವಾಗೆ ಸಮಾವೇಶ ಸಭೆ ನಡೆಸಿ, ಹೋರಾಟದ ಸಾಗರಕ್ಕೆ ದುಮುಕಿದ್ದಾರೆ.**

ಈ ನಡುವೆ ನ್ಯಾಯಾಲಯದಲ್ಲಿ ಸಮಸ್ಯೆಗೆ ಸಂಜೀವಿನಿ ಕೊಡಿಸುವುದಾಗಿ, ನೌಕರರು ಹೋರಾಟ ಮಾಡುವ ಅಗತ್ಯವಿಲ್ಲ ಎಂದು ಹೇಳಿದ ಜನ ನೌಕರರಿಂದ ಲಕ್ಷಾಂತರ ರೂಪಾಯಿ ಸಂಗ್ರಹಿಸಿದ್ದರು. ನ್ಯಾಯಾಲಯಕ್ಕೆ ಸಲ್ಲಿಸಿದ್ದ ರಿಟ್ ಅರ್ಜಿ ವಜಾಗೊಳ್ಳುತ್ತದೆ ಎಂದು ಅರಿವಾದಾಗ ಅರ್ಜಿಯನ್ನು ವಾಪಸು ಪಡೆದಿದ್ದಾರೆ. ಈಗ ಕೇವಲ ಸರ್ಕಾರ ಸಲ್ಲಿಸಿರುವ ಮರುಪರಿಶೀಲನಾ ಅರ್ಜಿಯನ್ನು ನೌಕರರಿಗೆ ತೋರುತ್ತಿದ್ದಾರೆ. ನೌಕರರನ್ನು ವಜಾಗೊಳಿಸಲು ಕೋರ್ಟ್ ತೀರ್ಪು ಜಾರಿಗೊಳಿಸಿದಾಗಲೇ ಮರುಪರಿಶೀಲನಾ ಅರ್ಜಿ ತನ್ನ ಸತ್ವವನ್ನೇ ಕಳೆದುಕೊಂಡಿದೆ. ಅದರಿಂದ ಏನೂ ಸಿಗದು ಎಂಬ ಅಂಶ ಸರ್ಕಾರಕ್ಕೆ ಮತ್ತೆ ಇತರರಿಗೆ ತಿಳಿದ ವಿಷಯವಾಗಿದೆ. ಕೋರ್ಟ್‌ಗೆಂದು ಹಣ ಸಂಗ್ರಹಿಸಿದ ಜನ ಮೌನವಹಿಸಿದ್ದಾರೆ, ಸರ್ಕಾರ ನೌಕರರ ಪರವಿದೆ ನಂಬಿಕೆ ಇಡಿ ಮರುನೇಮಕ ಆಗುತ್ತದೆ ಎಂಬ ಹೇಳಿಕೆಯನ್ನು ನೀಡುತ್ತಾ ಕುಳಿತಿದ್ದಾರೆ. ಇದರೊಟ್ಟಿಗೆ KAT ಯಲ್ಲಿ ನ್ಯಾಯ ಸಿಗುತ್ತದೆ ಎಂದು KAT ಬೆನ್ನತ್ತಿ ಹೋದ ಮಂದಿಯು



ಆತ್ಮಹತ್ಯೆಗೀಡಾದ ಯುವ ಉದ್ಯೋಗಿ

ಹಣ ಹೋಯಿತಷ್ಟೆ ಪರಿಹಾರ ಸಿಗಲಿಲ್ಲ ಎಂದು ರೋಧಿಸುತ್ತಿದ್ದಾರೆ. ಇನ್ನೂ ಕೆಲವರು ಸರ್ಕಾರದ ಮರುಪರಿಶೀಲನಾ ಅರ್ಜಿಯು ವಜಾಗೊಳ್ಳುತ್ತದೆ. ಆನಂತರ ಸುಪ್ರಿಂ ಕೋರ್ಟ್‌ನಲ್ಲಿ ಪರಿಹಾರಾತ್ಮಕ ಅರ್ಜಿ (curative petition) ಸಲ್ಲಿಸಿದರೆ ಪರಿಹಾರ ಸಿಗುತ್ತದೆ ಎಂದು ಹೇಳಿ ಕೆಲವರು ಹಣ ಸಂಗ್ರಹಕ್ಕೆ ಇಳಿದಿದ್ದಾರೆ. "ಉರಿವ ಮನೆಯಲ್ಲಿ ಗಳ ಹಿರಿವವರು ಎಷ್ಟೊ" ಎಂಬ ಜಾನಪದ ನಾಣ್ಣುಡಿಯಂತೆ ಕೃಪಾಂಕ ನೌಕರರು ನಯವಂಚಕರಿಂದ ವಂಚನೆಗೆ ಒಳಪಟ್ಟು, ಸರ್ಕಾರದ ವಿಶ್ವಾಸದ್ರೋಹದಿಂದ ಬೇಸತ್ತು, ಹೋರಾಟದ ಹಾದಿಯೊಂದೇ ಉಳಿದ ದಾರಿಯೆಂದು ಹೋರಾಟಕ್ಕೆ ಇಳಿದಿದ್ದಾರೆ. ಈ ಎಲ್ಲದರಿಂದ ಬೇಸತ್ತ ಕೆಲವರಂತು ಆತ್ಮಹತ್ಯೆಗೆ ಶರಣಾಗಿದ್ದಾರೆ.


ಮರುನೇಮಕಕ್ಕೆ ರೂಪಿಸಲಾಗಿರುವ ವಿಶೇಷ ನಿಯಮಾವಳಿ ಹಣಕಾಸು ಇಲಾಖೆ ಒಪ್ಪಿಗೆ ಪಡೆಯಲು ಸುಮಾರು ತಿಂಗಳುಗಳು ಬೇಕಾಯಿತು. ಜೂನ್ 30 ರಂದು ಹಣಕಾಸು ಇಲಾಖೆಗೆ ಬಂದ ಫೈಲ್ ಇಲಾಖೆ ಒಪ್ಪಿಗೆ ಪಡೆದಿರುವುದು ಅಗಸ್ಟ್ 7 ರಂದು ತಡವಾಗಲು ಕಾರಣ ಸರ್ಕಾರದ ಉದಾರೀಕರಣ ನೀತಿ, ಸರ್ಕಾರದ ವೆಚ್ಚ ಕಡಿತಗೊಳಿಸಬೇಕೆಂಬ ಸಾಲಕೊಟ್ಟ ಸಾಹುಕಾರರಾದ ವಿಶ್ವಬ್ಯಾಂಕ್, ಐಎಮ್‌ಎಫ್‌ನವರ ಶರತ್ತುಗಳ ಬೀತಿ. ಅಂತಿಮವಾಗಿ ಹೋರಾಟದ ಕಾವು ತೀವ್ರಗೊಂಡಂತೆ ತಮಗೆ ಅಧಿಕಾರವಿರದ ಮುಂದಿನ 2007 ರವರೆಗೆ "ಮಧ್ಯಂತರ ಹಣಕಾಸು ನೀತಿಯನ್ನು" ಪ್ರಕಟಿಸಿ, ಕೆ.ಎಸ್.ಆರ್.ಟಿ.ಸಿ ಪೂರ್ಣ ಖಾಸಗೀಕರಣ, ಇಲಾಖೆಗಳ ರದ್ದತಿ, ನೌಕರರ ಸಂಖ್ಯೆ ಸೌಲಭ್ಯಗಳಿಗೆ ಕಡಿತ ಹಾಕುವ ಕ್ರಮಗಳ ಮಸೂದೆಗೆ ಶಾಸನ ಸಭೆಯಲ್ಲಿ ಒಪ್ಪಿಗೆ ಪಡೆದು ಪ್ರಕಟಿಸಿ, ಆ ನಡುವೆ ಕೃಪಾಂಕ ನೌಕರರ ಮರುನೇಮಕದ ವಿಶೇಷ ನಿಯಮಾವಳಿಗಳಿಗೆ ಹಣಕಾಸು ಇಲಾಖೆಯ ಒಪ್ಪಿಗೆ ನೀಡಲಾಗಿದೆ. ವಿಶೇಷ ನಿಯಮಾವಳಿಯ ಫೈಲ್ ಈಗ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿದೆ. ಅಲ್ಲಿನ ಪ್ರಕ್ರಿಯೆ ಮುಗಿದ ನಂತರ ಸಚಿವ ಸಂಪುಟದ ಒಪ್ಪಿಗೆ ಪಡೆದು, ಅಭ್ಯಂತರಗಳನ್ನು ಆಹ್ವಾನಿಸಿ ಪ್ರಕಟಿಸಬೇಕಿದೆ. ಆ ನಂತರ ಒಂದು ತಿಂಗಳು ಕಾನೂನು ಪ್ರಕಾರ ಕಾಲಾವಕಾಶ ನೀಡಿ, ಅಧಿಕೃತ ಅಧಿಸೂಚನೆ ಹೊರಡಿಸಿ, ಅದರ ಮೇರೆಗೆ ಮರುನೇಮಕ ಮಾಡಿಕೊಳ್ಳಬೇಕಿದೆ.

ಅಭ್ಯಂತರಗಳನ್ನು ಆಹ್ವಾನಿಸಲು ಹೊರಡಿಸಬೇಕಾದ ಅಧಿಕೃತ ಪ್ರಕಟಣೆಯನ್ನು ಮಾಡುವ ಪ್ರಕ್ರಿಯೆ ಇನ್ನೆಷ್ಟು ವಿಳಂಬವಾಗಲಿದೆ ಎಂಬುದು ಇಂದಿನ ಆತಂಕ. ಹೋರಾಟದ ಕಾವು ತೀವ್ರಗೊಳ್ಳದಿದ್ದರೆ, ಅದು ಶೀಘ್ರವಾಗದು. ಆದ ಕಾರಣ ಅಗಸ್ಟ್ 20 ರಿಂದ ಗ್ರಾಮೀಣ ಕೃಪಾಂಕ ನೌಕರರ ಕ್ರಿಯಾ ಸಮಿತಿ, ಎಸ್.ಎಫ್.ಐ ಮತ್ತು ಡಿವೈಎಫ್‌ಐ ರಾಜ್ಯ ಮಟ್ಟದ ಅನಿರ್ದಿಷ್ಟಾವಧಿ ಸಾಮೂಹಿಕ ಧರಣಿ ಸತ್ಯಾಗ್ರಹವನ್ನು ಬೆಂಗಳೂರಿನ ಬನಪ್ಪ ಪಾರ್ಕ್‌ನಲ್ಲಿ ಹಮ್ಮಿಕೊಂಡಿದೆ. ಅಂತಿಮವಾಗಿ ಕೃಪಾಂಕ ನೌಕರರ ಮರುನೇಮಕಕ್ಕಾಗಿ ನಡೆದಿರುವ ಹೋರಾಟ ರಾಜ್ಯ-ಕೇಂದ್ರ ಸರ್ಕಾರಗಳು ಅನುಸರಿಸುತ್ತಿರುವ ಉದಾರೀಕರಣ ನೀತಿಗಳ ವಿರುದ್ಧದ ಹೋರಾಟವಾಗಿದೆ. ನೌಕರರ ಹೋರಾಟದ ಗೆಲುವ ಉದಾರೀಕರಣ ನೀತಿಗಳಿಗೆ ನೀಡುವಂ ಮಹತ್ತರ ಪೆಟ್ಟು, ರಾಜ್ಯ ಸರ್ಕಾರವು ವಜಾಗೊಂ ನೌಕರರ ಮರುನೇಮಕಕ್ಕೆ ಕಟ್ಟಿಬದ್ಧ ಎಂದ ನುಡಿದಿರುವಂತೆ, ನಡೆದುಕೊಳ್ಳುವಂತೆ ಮಾಡು ಹೋರಾಟವಾಗಿ - ಕೃಪಾಂಕ ನೌಕರರ ಹೋರಾ ಹೊರಹೊಮ್ಮಬೇಕಾಗಿದೆ.

ಡಿ.ವೈ.ಎಫ್.ಐ. ನಿಂದ ಸಾಮ್ರಾಜ್ಯಶಾಹಿ ವಿರೋಧಿ ದಿನಾಚರಣ

ಅನೇಕಲ್ ತಾಲ್ಲೂಕಿನ ಡಿ.ವೈ.ಎಫ್.ಐ.ನ ವತಿಯಿಂದ ಕುವೆಂಪುನಗರ, ನಾರಾಯಣಪುರ, ಚನ್ನೇನ ಅಗ್ರಹಾರ, ಸಮಂದೂರು ನಲ್ಲಿ 56ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಭಿನ್ನವಾಗಿ ಆಚರಿಸಲಾಯಿತು.

ಕುವೆಂಪು ನಗರದಲ್ಲಿ ಡಿ.ವೈ.ಎಫ್.ಐ ಮತ್ತು ಎಸ್.ಎಫ್.ಐ ಕಾರ್ಯಕರ್ತರು ಶಾಲಾ ಮೈದಾನದಲ್ಲಿ ಹುತಾತ್ಮ ಭಗತ್ ಸಿಂಗ್ ಹೆಸರಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಧ್ವಜಾರೋಹಣವನ್ನು ಶಾಲಾ ಮಕ್ಕಳ ಕೈಯಿಂದ ನೆರವೇರಿಸಿದರು. ಈ ಸಂದರ್ಭದಲ್ಲಿ ಹಾಜರಿದ್ದ ಡಿ.ವೈ.ಎಫ್.ಐ. ತಾ|| ಅಧ್ಯಕ್ಷ ಅಶೋಕ್ ಕುಮಾರ್ ಮತ್ತು ಎಸ್.ಎಫ್.ಐ ತಾ| ಅಧ್ಯಕ್ಷ ಮಂಜುನಾಥ ಹಾಗೂ ವೈ. ಆನಂದ್ ಮಾತನಾಡಿ ಸ್ವಾತಂತ್ರ್ಯ ಅಂದೋಲನದಲ್ಲಿ ಹುತಾತ್ಮರಿಗೆ ನಮನ ಸಲ್ಲಿಸಿ ಅಂದು ಸಾಮ್ರಾಜ್ಯಶಾಹಿ ವಿರುದ್ಧ ಆಂದೋಲನ ನಡೆಸಿ ಸ್ವಾತಂತ್ರ್ಯಗಳಿಸಿದರೂ ಸಹ ಜನತೆಯ ಪಾಲಿಗೆ ಇನ್ನೂ ಪೂರ್ಣ ಸ್ವಾತಂತ್ರ್ಯ ಸಿಗಲಿಲ್ಲವೆಂದು ತಿಳಿಸಿದರು. ಇಂದು ಸಾಮ್ರಾಜ್ಯಶಾಹಿ ಶಕ್ತಿಗಳು ದೇಶದಲ್ಲಿ ಆಳು ವರ್ಗಗಳ ವಿರುದ್ಧ ಮತ್ತು ಕೋಮುವಾದಿ ವಿರುದ್ಧ ಮತ್ತೆ ಸ್ವಾತಂತ್ರ್ಯ ಅಂದೋಲನ ನ ಸ್ವಾತಂತ್ರ್ಯವನ್ನು ಪೂರ್ಣಗೊಳಿಸಬೇಕಾಗಿದೆ ಎಂ



ಕರೆ ನೀಡಿದರು. ಈ ಸಂದರ್ಭದ ಕುವೆಂಪುನಗರ ಘಟಕ ತಿಮ್ಮರಾಯಪ್ಪ ಬಾಬು, ಸುರೇ ಗೌಡ, ಆನಂದ್, ಮುಂತಾದವ ಭಾಗವಹಿಸಿದರು. ಕೊನೆಯ ಮಕ್ಕಳಿಗೆ ಸಿಹಿ ತಿಂಡಿ ಹ ಮುಕ್ತಾಯಗೊಳಿಸಲಾಯಿತು.

ಅಲ್ಲದೆ ನಾರಾಯಣಪುರ ರಾಮಕೃಷ್ಣ, ಚನ್ನೇನ ಅಗ್ರಹಾ ಮಹದೇಶ್ ಮ ಸಮಂದೂರಿನಲ್ಲಿ ಮುನಿಸ ಇವರ ನೇತೃತ್ವದಲ್ಲಿ 56 ಸ್ವಾತಂತ್ರ್ಯ ದಿನಾಚರಣೆಯ ಸಾಮ್ರಾಜ್ಯಶಾಹಿ ವಿರೋ ದಿನವಾಗಿ ಡಿ.ವೈ.ಎಫ್ ವತಿಯಿಂದ ಆಚ ಮಾಡಲಾಯಿತು.

ಭಾರತದ ಸ್ವಾತಂತ್ರ್ಯ ಉಳಿದೀತೆ?

ನಮ್ಮ ಸ್ವಾತಂತ್ರ್ಯದ 57ನೇ ಆಚರಣೆಗೆ ಮುನ್ನಡೆಯುತ್ತಿರುವಾಗ ಭಾರತೀಯ ಗಣತಂತ್ರದ ಮೂಲಗುಣಗಳೇ ಅಪಾಯದಲ್ಲಿವೆ ಎಂದು ಅತ್ಯಂತ ಸ್ಪಷ್ಟವಾಗಿದೆ. ಇಂದಿನ ಭಾರತವನ್ನು ಈ ಶಕ್ತಿಗಳಿಂದ ನಾವಿಂದ ರಕ್ಷಿಸಬೇಕು. ಇಂದಿನ ಭಾರತವನ್ನು ಉಳಿಸಿಕೊಳ್ಳುವುದರ ಮೂಲಕ ಮಾತ್ರವೇ ನಾಳೆಗೆ ಇದನ್ನು ಉತ್ತಮ ಭಾರತವನ್ನಾಗಿ ಮಾಡಲು ಸಾಧ್ಯ. ಯಾರು ನೈಜ ಭಾರತ, ನೈಜ ಸ್ವಾತಂತ್ರ್ಯವನ್ನು ಗೌರವಿಸುತ್ತಾರೆ ನಮ್ಮ ಸ್ವಾತಂತ್ರ್ಯ, ಮತ್ತದರ ಜಾತ್ಯಾತೀತ, ಪ್ರಜಾಸತ್ತಾತ್ಮಕ ಗುಣಲಕ್ಷಣಗಳನ್ನು ರಕ್ಷಿಸಿಕೊಳ್ಳಬೇಕು. ಅದಕ್ಕಾಗಿ ಕೋಮುವಾದಿ ಶಕ್ತಿಗಳನ್ನು ಗಂಭೀರವಾಗಿ ಎದುರಿಸಬೇಕಾದ ಅಗತ್ಯವಿದೆ. ನೈಜ ಭಾರತ ಮತ್ತು ನೈಜ ಸ್ವಾತಂತ್ರ್ಯವನ್ನುಳಿಸಲು ನಾವೆಲ್ಲರೂ ಒಟ್ಟಾಗಿ ನಿಲ್ಲೋಣ.

ನಮ್ಮ ಸ್ವಾತಂತ್ರ್ಯ ದಿನದಂದು ಭಾರತೀಯರೆಲ್ಲರಿಗೂ ಶುಭಾಶಯ ಕೋರುವುದು ಸತ್‌ಸಂಪ್ರದಾಯ. ಎಲ್ಲಕ್ಕಿಂತ ಮುಖ್ಯವಾಗಿ ಪ್ರಚಂಡ ಜನತಾ ಚಳುವಳಿಯು ಭಾರತೀಯ ಜನತೆಯನ್ನು ವಸಾಹತುಶಾಹಿ ಕಪಿಮುಷ್ಠಿಯಿಂದ ವಿಮೋಚನೆಗೊಳಿಸಿದೆ. ಇದು ನೆನಪಿಸಿಕೊಳ್ಳಬೇಕಾದ ಮತ್ತು ಆಚರಿಸಬೇಕಾದ ಒಂದು ಮಹತ್ವದ ಘಟನೆಯಾಗಿದೆ. ಹಾಗೆಯೇ ಸ್ವಾತಂತ್ರ್ಯ ಚಳುವಳಿಯ ಆಶಯಗಳು, ಗುರಿಗಳ ಬಾಕಿಪಟ್ಟಿಯನ್ನು ತೆಗೆದು ಅವುಗಳನ್ನು ಗುರುತಿಸಿಕೊಂಡು, ಆ ಆಶಯಗಳು, ಗುರಿಗಳನ್ನು ಈಡೇರಿಸಲು ನಮ್ಮ ಪ್ರಯತ್ನಗಳನ್ನು ಇಮ್ಮಡಿಗೊಳಿಸಬೇಕು.

ನಮ್ಮ ದೇಶದ 57 ನೇ ಸ್ವಾತಂತ್ರ್ಯ ದಿನದಂದು ಇನ್ನೂ ಪೂರೈಸಲಾಗದಿರುವ ಆಶಯಗಳನ್ನು ಪೂರ್ಣಗೊಳಿಸಲು ಮುನ್ನೋಟ ಬೀರುವ ಬದಲು ನಮ್ಮ ಗಣತಂತ್ರವನ್ನು ಉಳಿಸಿಕೊಳ್ಳುವುದು ಹೇಗೆ ಎಂಬುದು ಭಾರತೀಯ ಜನತೆಯನ್ನು ಕಾಡುತ್ತಿರುವ ಬಹುಮುಖ್ಯ ವಿಷಯವಾಗಿದೆ. ಕಳೆದ ಐದು ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರವು ದೇಶವನ್ನು ಇಂತಹ ಸ್ಥಿತಿಗೆ ನೂಕಿರುವುದು ಅತ್ಯಂತ ದುರಾದೃಷ್ಟಮಯ ಸನ್ನಿವೇಶವಾಗಿದೆ.

ಭಾರತೀಯ ಗಣತಂತ್ರದ ಭವ್ಯ ಕಟ್ಟಡದ ನಾಲ್ಕು ಆಧಾರಸ್ಥಂಭಗಳಿಂದ ಜಾತ್ಯಾತೀತ ಪ್ರಜಾಪ್ರಭುತ್ವ, ಒಕ್ಕೂಟ ವ್ಯವಸ್ಥೆ, ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ನ್ಯಾಯ ಇವುಗಳು ಇಂದು ದಾಳಿಗೊಳಗಾಗಿವೆ.

ಭಯಾನಕ

ಅಪಾರ ವೈವಿಧ್ಯತೆಯಿಂದ ಕೂಡಿದ ಈ ದೇಶವನ್ನು ಒಗ್ಗಟ್ಟಿಗಾಗಿ ಬೆಸೆದಿದ್ದ ಜಾತ್ಯಾತೀತ ಹಂದರವನ್ನು ಯೋಜಿತವಾಗಿ ಹರಿಯಲಾಗುತ್ತಿದೆ. ನಾವು ಕಳೆದ ವರ್ಷ ಗುಜರಾತಿನಲ್ಲಿ ಕಂಡಂತೆ, ಧರ್ಮದ ಹೆಸರಿನಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ಧಾಳಿಯ ಪ್ರಮಾಣವು ಭಯ ಹುಟ್ಟಿಸುವಷ್ಟು ಹೆಚ್ಚಾಗಿದೆ.

ವಾಜಪೇಯಿ ಸರ್ಕಾರದ ಬೆಂಬಲದೊಂದಿಗೆ ಕೋಮುವಾದಿ ಅಕ್ಟೋಬರ್ ಸಂಘಪರಿವಾರದ ವಿವಿಧ ಅಂಗಸಂಸ್ಥೆಗಳು ಕೋಮುವಾದಿ ಅಜೆಂಡಾದ ಆಧಾರದಲ್ಲಿ ಬಿರುಸಿನಿಂದ ನಡೆಸಿರುವ ಪ್ರಚಾರವು ಪರಿಸರವನ್ನು ಕಲುಷಿತಗೊಳಿಸುತ್ತಿದೆ. ಜಾತ್ಯಾತೀಯ ಭಾರತೀಯ ಗಣತಂತ್ರವನ್ನು ಒಂದು ಅಸಹಿಷ್ಣು ಫ್ಯಾಸಿಸ್ಟ್‌ವಾದಿ 'ಹಿಂದೂ ರಾಷ್ಟ್ರವನ್ನಾಗಿ' ಪರಿವರ್ತಿಸಲು ನಿರಂತರ ಪ್ರಯತ್ನಗಳು ನಡೆಯುತ್ತಿವೆ.

ದೇಶದ ಆರ್ಥಿಕತೆಯನ್ನು ಕೊಳ್ಳೆಹೊಡೆದು ದೋಚಲು ಈ ಐದುವರ್ಷಗಳಲ್ಲಿ ಬಹುರಾಷ್ಟ್ರೀಯ ಬಂಡವಾಳಕ್ಕೆ ಮುಕ್ತ ಅವಕಾಶ ನೀಡಲಾಗಿದೆ. ದೇಶದ ರಕ್ಷಣೆಯಲ್ಲಿ ಅತ್ಯಂತ ಪ್ರಮುಖವಾಗಿ ರಕ್ಷಣಾ ಉತ್ಪಾದನೆ ಮತ್ತು ದೂರ ಸಂಪರ್ಕ ಕ್ಷೇತ್ರಗಳನ್ನು ಲಾಭಕೋರ ವಿದೇಶಿ ಬಂಡವಾಳಕ್ಕೆ ತೆರೆದುಬಿಡಲಾಗಿದೆ. ದೇಶದ ಆರ್ಥಿಕ ಸ್ವಾವಲಂಬನೆಯ ಆಧಾರಗಳಾದ ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಖಾಸಗಿ ಬಂಡವಾಳದಾರರಿಗೆ ಮೂರು ಕಾಸಿಗೆ ಮಾರಾಟ ಮಾಡಿ, ಕಳಚಿಹಾಕಲಾಗಿದೆ. ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಮಿತಿಮೀರಿದ್ದು ಅನೈತಿಕತೆಗೆ ಸಾಂಸ್ಥಿಕ ಸ್ಥಾನಮಾನ ನೀಡಲಾಗುತ್ತಿದೆ. ಕಳೆದ ವರ್ಷ ಮಹಾಲೆಕ್ಕ ಪರಿಶೋಧಕರು ತಿಳಿಸಿರುವಂತೆ ಒಟ್ಟು ರಾಷ್ಟ್ರೀಯ ಉತ್ಪಾದನೆಯ ಮೂರನೇ ಎರಡರಷ್ಟು ಸರ್ಕಾರದ ಸಾಲ-ಸೋಲಗಳಿಗೇ ವ್ಯಯವಾಗುತ್ತಿದೆ. ನಮ್ಮ ಸ್ವಾವಲಂಬನೆಯನ್ನು ಬಲಗೊಳಿಸುವುದರ ಬದಲು ಈ ಐದು ವರ್ಷಗಳಲ್ಲಿ ಭಾರತೀಯ ಆರ್ಥಿಕತೆಯನ್ನು ಒತ್ತೆಯಿಡಲಾಗಿದೆ.

ಜನಬಲಿ

ಇಂತಹ ನೀತಿಗಳಿಗೆ ಯಾವಾಗಲೂ ಭಾರತೀಯ ಜನತೆಯ ಬಹುಪಾಲು ವಿಭಾಗ ಬಲಿಯಾಗುತ್ತಿದೆ. ದೇಶದ ಹಲವಾರು ಭಾಗಗಳಲ್ಲಿ ಹಸಿವಿನಿಂದ ಸಂಭವಿಸಿದ ಸಾವುಗಳು ಮತ್ತು



ಆತ್ಮಹತ್ಯೆಗಳು ನಿತ್ಯದ ಸುದ್ದಿಗಳಾಗಿವೆ. ಕೃಷಿಯ ಕುಸಿತವು ಯಾವ ಹಂತಕ್ಕೆ ಮುಟ್ಟಿದೆಯೆಂದರೆ, ಇಂದು ತಲಾ ದೊರೆಯುತ್ತಿರುವ ಆಹಾರಧಾನ್ಯವು ಎರಡನೇ ಮಹಾಯುದ್ಧದ ಸಮಯದಲ್ಲಿ ದೊರೆಯುತ್ತಿದ್ದುದಕ್ಕೆ ಸಮನಾಗಿದೆ. ಅಂದರೆ 60 ವರ್ಷಗಳಷ್ಟು ಹಿಂದೆ.

ಒಂದೇ ವರ್ಷದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಅಪಾಯಕಾರಿಯಾದಷ್ಟು ಅಂದರೆ ಶೇ.14 ರಷ್ಟು ಕುಸಿದಿದೆ. ಎಷ್ಟೊಂದು ಮತಿಹೀನವೆಂದರೆ, ಇತ್ತ ಆರುಕೋಟಿ ಟನ್ನುಗಳಷ್ಟು ಆಹಾರಧಾನ್ಯ ಗೋದಾಮುಗಳಲ್ಲಿ ಕೊಳೆಯುತ್ತಿದ್ದರೆ, ಇತ್ತ ಜನತೆ ಹಸಿವಿನಿಂದ ಸಾಯುತ್ತಿದ್ದಾರೆ. ವಾಜಪೇಯಿ ಮತ್ತು ಕಂಪನಿಯವರು ಈ ಆಹಾರಧಾನ್ಯಗಳನ್ನು ಬಡತನ ರೇಖೆಗಿಂತ ಕೆಳಗಿರುವ ಬಡಜನರಿಗೆ ಕೊಳ್ಳಲು ಸಾಧ್ಯವಾಗದಷ್ಟು ಬೆಲೆಯಲ್ಲಿ ಮಾರಾಟ ಮಾಡುತ್ತಿದ್ದು, ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಜನತೆಯ ಜೀವವನ್ನು ಪಣಕ್ಕಿಟ್ಟು ಆಹಾರಧಾನ್ಯಗಳನ್ನು ಮಾರಿ ವಿದೇಶಿ ವಿನಿಮಯಗಳಿಸಿಕೊಳ್ಳುವುದರಲ್ಲೇ ಈ ಸರ್ಕಾರ ಮಗ್ನವಾಗಿದೆ. ಈ ಕೋಟಾ ರಾಮಭಕ್ತರ ನಿಜಗುಣವಿದು.

ತೀವ್ರ ಖಾಸಗೀಕರಣ ಮತ್ತು ಸರ್ಕಾರಿ ಉದ್ಯೋಗಗಳ ಮೇಲಿನ ನಿರ್ಧಾರದಿಂದಾಗಿ ಜಾತಿ ಆಧಾರಿತ ದಬ್ಬಾಳಿಕೆ ಮತ್ತು ಲಿಂಗಾಧಾರಿತ ದೌರ್ಜನ್ಯ ಯಾವುದೇ ತಡೆಯಿಲ್ಲದೆ ಸಾಗುತ್ತಿದೆ. ಸಾಮಾಜಿಕ ಹಿಂದುಳಿದಿರುವ ಮೀಸಲಾತಿಯಿಂದ ಪಡೆಯುತ್ತಿದ್ದ ಅಲ್ಪ-ಸ್ವಲ್ಪ ಪ್ರಯೋಜನವನ್ನು ನಿಷ್ಕ್ರಿಯಗೊಳಿಸಲಾಗಿದೆ. ಇತ್ತೀಚಿನ ಸುಪ್ರಿಂ ಕೋರ್ಟಿನ ತೀರ್ಪಿನಲ್ಲಿ ಒಪ್ಪಿಗೆ ಸೂಚಿಸಿರುವಂತೆ ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣವು ಶಿಕ್ಷಣ ರಂಗದ ಮೀಸಲಾತಿಯಿಂದ ಈ ವರ್ಗಗಳಿಗೆ ಸಿಗುತ್ತಿದ್ದ ಅಲ್ಪ-ಸ್ವಲ್ಪ ಪ್ರಯೋಜನವೂ ಸಿಗದಂತೆ ಮಾಡಿದೆ.

ಸಂವಿಧಾನಿಕ ಸಂಸ್ಥೆಗಳೆಂದರೆ ಸಂಘರ್ಷ

ಏಕಪ್ರಭುತ್ವವನ್ನು ಹೇರುವ ಈ ಸರ್ಕಾರದ ಪ್ರವೃತ್ತಿಗಳು ಇತ್ತೀಚಿನ ದಿನಗಳಲ್ಲಿ ಅನೇಕ ಬಾರಿ ಕಾಣಿಸಿಕೊಂಡಿದೆ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಚುನಾವಣೆಗಳನ್ನು ಏಕಕಾಲಕ್ಕೆ ನಡೆಸಬೇಕೆಂಬ ಸಲಹೆಯು ಅಂತಹ ಪ್ರಯತ್ನಗಳಲ್ಲಿ ಒಂದು. ರಾಜ್ಯಗಳ ನ್ಯಾಯಬದ್ಧ ಹಕ್ಕುಗಳಲ್ಲಿ ಕುಸಿತ, ಕೇಂದ್ರ-ರಾಜ್ಯ ಸಂಬಂಧಗಳ ಒಕ್ಕೂಟ ಅಂಗಗಳನ್ನು ಬಲಪಡಿಸುವ ಬದಲು ಕೇಂದ್ರ ಸರ್ಕಾರ ನಿರಂತರವಾಗಿ ರಾಜ್ಯಗಳ ವಿಷಯಗಳಲ್ಲಿ ಮಧ್ಯಪ್ರವೇಶ ಮಾಡುತ್ತಿದೆ.

ಗಣತಂತ್ರದ ಆಧಾರ ಸ್ಥಂಬಗಳನ್ನೇ ಬುಡಮೇಲು ಮಾಡುವ ಅಂಶಗಳನ್ನು ಬದಲಾಯಿಸಲು ಈ ಸರ್ಕಾರಕ್ಕೆ ಮನಸ್ಸಿಲ್ಲ ಎಂಬುದನ್ನು ವಿಧಿಯಿಲ್ಲದೆ ಹೇಳಬೇಕಿದೆ. ಎಲ್ಲಾ ಸಂವಿಧಾನಿಕ ಸಂಸ್ಥೆ ಮತ್ತು ಅಧಿಕಾರಿಗಳ ಜತೆಯಲ್ಲಿ ಈ ಸರ್ಕಾರ ನಿರಂತರವಾಗಿ ಸಂಘರ್ಷ ಹೂಡಿದ ದಾಖಲೆಗಳಿವೆ. ಚುನಾವಣಾ ಆಯೋಗ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ನ್ಯಾಯಾಂಗ ಹೀಗೆ ಎಲ್ಲವೂ ಸಂಘಪರಿವಾರದ ಕೋಮುವಾದಿ ಅಜೆಂಡಾಗಳನ್ನು ಮುಂದೊಯ್ಯಲು ಅಡ್ಡಿಬಂದಾಗಲೆಲ್ಲಾ ವಾಜಪೇಯಿ ಮತ್ತವರ ಕಂಪನಿಯ ಧಾಳಿಗೆ ಗುರಿಯಾಗಿವೆ.

ಗುಲಾಮಿತನ

ಇದೆಲ್ಲದಕ್ಕೂ ಕಿರೀಟವೆಂಬಂತೆ ಈ ಸರ್ಕಾರವು ಅಮೇರಿಕನ್ ಸಾಮ್ರಾಜ್ಯಶಾಹಿ ಗುಲಾಮಿಕೆ ನಡೆಸುವಲ್ಲಿ ತೋರಿದ ಆತುರ. ಜಾಗತೀಕರಣದ ಐಎಂಎಫ್, ವಿಶ್ವಬ್ಯಾಂಕ್ ಮತ್ತು ವಿಶ್ವವ್ಯಾಪಾರ ಸಂಸ್ಥೆಗಳ ತ್ರೀಮೂರ್ತಿಗಳ ನೆರವಾಗುವ ಕೋಮುವಾದಿ ತ್ರಿಶೂಲವಾದಿ ಸರ್ಕಾರದ ವಿದೇಶಾಂಗ ನೀತಿಯು ಈ ವಲಯದಲ್ಲಿ ಅಮೆರಿಕಾದ ಪ್ರತಿನಿಧಿಯಾಗಿ ಪಾಕಿಸ್ತಾನ ಜಾಗದಲ್ಲಿ ಭಾರತವನ್ನು ನಿಲ್ಲಿಸುವಂತಿದೆ.

ಇಂತಹ ಸನ್ನಿವೇಶದಲ್ಲಿ, ತನ್ನ ನೀತಿಗಳಿಂದ ಬಹುತೇಕ ಜನತೆ ಈ ಸರ್ಕಾರದಿಂದ ದೂರ ಸರಿಯುತ್ತಿರುವಾಗ, ಸ್ವಲ್ಪವಾದರೂ ಜನತೆಯಿಂದ ಬೆಂಬಲ ಸಿಕ್ಕಿ ರಾಜಕೀಯ ಲಾಭ ಆಗಬೇಕಿದ್ದರೆ ಅದು ಕೋಮು ಉನ್ಮಾದವನ್ನು ಎಬ್ಬಿಸುವುದರಿಂದ ಮಾತ್ರ ಎಂಬ ದಾರಿಯನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿ ಕಂಡುಕೊಂಡಿವೆ. 57ನೇ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ನಮ್ಮನ್ನಾಳುತ್ತಿರುವ ಈ ಸರ್ಕಾರವು ಜನತೆಯ ಅಭಿವೃದ್ಧಿಗೆ ಪೂರಕವಾಗಬಲ್ಲ ಅಥವಾ ಅವರ ನಿತ್ಯ ಜೀವನಕ್ಕೆ ನೆರವಾಗಬಲ್ಲ ಒಂದೇ ಒಂದು ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿಲ್ಲ. ಜನತೆಯ ಜೀವನವು ದುರಂತದೆಡೆಗೆ ಸಾಗುತ್ತಿರುವಾಗ ಅಯೋಧ್ಯೆ, ಸಮಾನ ನಾಗರಿಕಸಂಹಿತೆ, 370 ನೇ ವಿಧಿಯ ನಿಷೇಧ, ಗೋಸಂರಕ್ಷಣೆ ಇತ್ಯಾದಿಗಳು ಅವರ ಕಾರ್ಯಸೂಚಿಯಾಗಿವೆ.

ಗೋಹತ್ಯೆಕಾರರಿಂದ ಗೋವು ರಕ್ಷಣೆ?

ಗೋ ಸಂರಕ್ಷಣೆಗೆ ಕುರಿತ ಕೇಂದ್ರೀಯ ಶಾಸನ ರಚನೆಯ ವಿಷಯವನ್ನೇ ತೆಗೆದುಕೊಳ್ಳಿ. ನಮ್ಮ ಸಂವಿಧಾನದ ಒಕ್ಕೂಟ ತತ್ವದ ಆಶಯದಂತೆ ಇದು ರಾಜ್ಯಗಳ ವ್ಯಾಪ್ತಿಗೆ ಬರುತ್ತದೆ. ಮಸೂದೆ ತರುವ ವಿಷಯಗಳನ್ನು ರಾಜ್ಯ ವಿಧಾನ ಸಭೆಗಳಿಗೆ ಬಿಡುವುದನ್ನು ಬಿಟ್ಟು ಈ ಕೇಂದ್ರ ಸರ್ಕಾರವು ತನ್ನ ಕೋಮುವಾದ ಕಾರ್ಯಸೂಚಿಯನ್ನು ಮುಂದೊಡ್ಡಲು ನಮ್ಮ ಒಕ್ಕೂಟ ವ್ಯವಸ್ಥೆಯನ್ನು ಉಲ್ಲಂಘಿಸಿ ಕೇಂದ್ರೀಯ ಶಾಸನ ರೂಪಿಸಲು ಪ್ರಯತ್ನಿಸುತ್ತಿದೆ. ಆರ್‌ಎಸ್‌ಎಸ್ ಮತ್ತು ಬಿಜೆಪಿಗಳು ಈ ವಿಚಾರವನ್ನು ತಮ್ಮ ಚುನಾವಣಾ ಲಾಭಕ್ಕಾಗಿ ಬಳಸಿಕೊಳ್ಳಲು ಬಯಸುತ್ತಿದೆ ಎಂಬುದು ಅತ್ಯಂತ ಸ್ಪಷ್ಟವಾಗಿದೆ. ಆದರೆ ಈ ವಿಷಯದ ಕಟುವಾಸ್ತವವೆಂದರೆ, ಯಾರು ಗೋವುಗಳ ರಕ್ಷಣೆಗೆ ಶಾಸನ ರೂಪಿಸಲು ಹೊರಟಿದ್ದಾರೆ, ಅವರೇ ಅನುಸರಿಸುತ್ತಿರುವ ಆರ್ಥಿಕ ನೀತಿಗಳು ಡೈರಿ ಉತ್ಪನ್ನಗಳ ಮುಕ್ತ ಆಮದಿಗೆ ಅವಕಾಶ ಮಾಡಿಕೊಟ್ಟು ದೇಶೀಯ ಡೈರಿ ಉದ್ಯಮ ಕುಸಿಯುವಂತೆ ಮಾಡಿದ್ದಾರೆ. ಕೊನೆಗೆ ಇದು ಹಸುಗಳ ನಿರ್ಲಕ್ಷ್ಯ ಮತ್ತು ನಾಶಕ್ಕೆ ಎಡೆ ಮಾಡಿಕೊಡುತ್ತದೆ. ಹಸುಗಳನ್ನು ಸಾಕಬೇಕಾದ ಜನರಿಗೆ ಅದು ಇಂದು ದುಸ್ತರವಾಗುತ್ತಿದೆ. ವಾಜಪೇಯಿ ಮತ್ತವರ ಕಂಪನಿಗೆ ಹಸುಗಳನ್ನು ಸಂರಕ್ಷಿಸಬೇಕೆಂದೇನಾದರೂ ಆಸಕ್ತಿಯಿದ್ದಲ್ಲಿ ಡೈರಿ ಉತ್ಪನ್ನಗಳ ಆಮದನ್ನು ತಡೆಗಟ್ಟಬೇಕು. ಆದರೆ ಅವರಿಗಿರುವುದು ಹಸುಗಳ ಯೋಗಕ್ಷೇಮದ ಮೇಲಿನ ಆಸಕ್ತಿಯಲ್ಲ ಬದಲಾಗಿ ಈ ವಿಷಯದ ಆಧಾರದಲ್ಲಿ ಕೋಮುಧ್ರುವೀಕರಣ ತಂದು ಚುನಾವಣಾ ಲಾಭ ಮಾಡಿಕೊಳ್ಳುವುದು ಹೇಗೆಂಬುದು ಅವರ ಲೆಕ್ಕಾಚಾರವಾಗಿದೆ.

ಭಾರತ ಉಳಿಸಲು


ನಮ್ಮ ಸ್ವಾತಂತ್ರ್ಯದ 57ನೇ ಆಚರಣೆಗೆ ಮುನ್ನಡೆಯುತ್ತಿರುವಾಗ ಭಾರತೀಯ ಗಣತಂತ್ರದ ಮೂಲಗುಣಗಳೇ ಅಪಾಯದಲ್ಲಿವೆ ಎಂದು ಅತ್ಯಂತ ಸ್ಪಷ್ಟವಾಗಿದೆ. ಇಂದಿನ ಭಾರತವನ್ನು ಈ ಶಕ್ತಿಗಳಿಂದ ನಾವಿಂದ ರಕ್ಷಿಸಬೇಕು. ಇಂದಿನ ಭಾರತವನ್ನು ಉಳಿಸಿಕೊಳ್ಳುವುದರ ಮೂಲಕ ಮಾತ್ರವೇ ನಾಳೆಗೆ ಇದನ್ನು ಉತ್ತಮ ಭಾರತವನ್ನಾಗಿ ಮಾಡಲು ಸಾಧ್ಯ. ಯಾರು ನೈಜ ಭಾರತ, ನೈಜ ಸ್ವಾತಂತ್ರ್ಯವನ್ನು ಗೌರವಿಸುತ್ತಾರೆ ನಮ್ಮ ಸ್ವಾತಂತ್ರ್ಯ, ಮತ್ತದರ ಜಾತ್ಯಾತೀತ, ಪ್ರಜಾಸತ್ತಾತ್ಮಕ ಗುಣಲಕ್ಷಣಗಳನ್ನು ರಕ್ಷಿಸಿಕೊಳ್ಳಬೇಕು. ಅದಕ್ಕಾಗಿ ಕೋಮುವಾದಿ ಶಕ್ತಿಗಳನ್ನು ಗಂಭೀರವಾಗಿ ಎದುರಿಸಬೇಕಾದ ಅಗತ್ಯವಿದೆ. ನೈಜ ಭಾರತ ಮತ್ತು ನೈಜ ಸ್ವಾತಂತ್ರ್ಯವನ್ನುಳಿಸಲು ನಾವೆಲ್ಲರೂ ಒಟ್ಟಾಗಿ ನಿಲ್ಲೋಣ.

ಕಾರ್ಗಿಲ್ ಯುದ್ಧ ಶಸ್ತ್ರ ಖರೀದಿ

ಭ್ರಷ್ಟಾಚಾರ ಮುಚ್ಚು

ಕಾರ್ಗಿಲ್ ಯುದ್ಧದ ಸಮಯದಲ್ಲಿ ಶಸ್ತ್ರಾಸ್ತ್ರ ಪೂರೈಕೆಗೆ ಸಂಬಂಧಪಟ್ಟಂತೆ ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿಯ ಸಂದರ್ಭದಲ್ಲಿ ಮತ್ತೊಮ್ಮೆ ಎನ್‌ಡಿಎ ಸರ್ಕಾರದ ಪ್ರಜಾಪ್ರಭುತ್ವ-ವಿರೋಧಿ; ಜನ-ವಿರೋಧಿ ನಿಲುವು ಬಯಲಾಗಿದೆ. ಅದು ಉದ್ದೇಶಪೂರ್ವಕವಾಗಿ ಸಂಸತ್ತಿಗೆ ಅವಮಾನ ಮಾಡಲು, ಭ್ರಷ್ಟಾಚಾರವನ್ನು ಮುಚ್ಚಿಹಾಕಲು ಪ್ರಯತ್ನ ನಡೆಸಿದೆ. ಅವುಗಳೇನೆಂದು ವಿವರಿಸಲಿದ್ದಾರೆ ಲೋಕಸಭೆಯಲ್ಲಿ ಸಿಪಿಐ(ಎಂ)ನ ನಾಯಕರಾದ ಸೋಮನಾಥ ಚಟರ್ಜಿ

ಕಾರ್ಗಿಲ್ ಯುದ್ಧದ ಬಗ್ಗೆ ಇಡೀ ದೇಶಕ್ಕೆ ತಿಳಿದಿದೆ. ಪಾಕಿಸ್ತಾನದಿಂದ ಆಕ್ರಮಣ ನಡೆಯಿತು. ಆಕ್ರಮಣಕೋರರನ್ನು ಕಾರ್ಗಿಲ್‌ನಿಂದ ಹೊರಹಾಕಲು ಮಿಲಿಟರಿ ಕಾರ್ಯಾಚರಣೆ (ಒ.ಪಿ. ವಿಜಯ್) ನಡೆಸಲಾಯಿತು. ಆಕ್ರಮಣಕೋರರನ್ನು ಎದುರಿಸಲು ಮೇ 1999 ರಲ್ಲಿ ತ್ವರಿತವಾಗಿ ನಮ್ಮ ಸೇನಾ ಪಡೆಗಳ ಯುದ್ಧ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿತ್ತು ಎಂದು ಸರಕಾರ ಹೇಳಿತು. ಎಂಟು ಬ್ರಿಗೇಡ್‌ಗಳನ್ನು, ಒಂದು ಡಿವಿಜನ್ ಮುಖ್ಯಾಲಯವನ್ನು ಈ ಉದ್ದೇಶಕ್ಕೆ ಬಳಸಬೇಕಾಯಿತು ಎಂದು ರಕ್ಷಣಾ ಇಲಾಖೆ ಹೇಳಿತು. ಈ ಯುದ್ಧದ ರೀತಿಯ ಸನ್ನಿವೇಶದಲ್ಲಿ ಶಸ್ತ್ರಾಸ್ತ್ರಗಳ ಖರೀದಿ ವಿಧಾನವನ್ನು ಮಾರ್ಪಡಿಸಬೇಕಾಯಿತು. ಏಕೆಂದರೆ ಒ.ಪಿ.ವಿಜಯ್ ಕಾರ್ಯಾಚರಣೆಗೆ ತ್ವರಿತವಾಗಿ ಇವೆಲ್ಲಾ ಬೇಕಾಗಿದ್ದವು ಎಂದು ರಕ್ಷಣಾ ಇಲಾಖೆ



ಹೇಳಿದೆ. ಇದಕ್ಕಾಗಿ ಶಸ್ತ್ರಾಸ್ತ್ರ ಖರೀದಿ ವಿಧಾನವನ್ನು ಬಹಳಷ್ಟು ಸರಳೀಕರಿಸಲಾಯಿತು. ಮಾರಾಟಗಾರರು ಬ್ಯಾಂಕ್ ಗ್ಯಾರಂಟಿ ಕೊಡಬೇಕು ಎಂಬಿತ್ಯಾದಿ ಕೆಲವು ಶರತ್ತುಗಳನ್ನು ಬಿಡಲಾಯಿತು ಎಂದು ರಕ್ಷಣಾ ಮಂತ್ರಿಗಳು ಹೇಳಿದ್ದಾರೆ. ಜೂನ್ 21, 1999 ರಂದು ರಕ್ಷಣಾ ಇಲಾಖೆ ಆದೇಶಹೊರಡಿಸಿ ಬೆಲೆ ಮಾತುಕತೆ ಸಮಿತಿ (ಪಿಎನ್‌ಸಿ) ವರದಿಯ ಸಿದ್ಧತೆಗೆ ಮತ್ತು ವಿದೇಶಿ ವಿನಿಮಯ ಬಿಡುಗಡೆಗೆ ಹಾಗೂ ಕಾಂಟ್ರಾಕ್ಟ್ ನೀಡಿದ ನಂತರದ ಕೆಲಸದ ಉಸ್ತುವಾರಿಗೆ ಹೊಸ ವಿಧಾನವನ್ನು ಸೂಚಿಸಲಾಯಿತು.

ಖರೀದಿಯಲ್ಲಿ ಅಕ್ರಮಗಳು

ನಂತರ ರಕ್ಷಣಾ ಖರೀದಿಗಳನ್ನು ಕುರಿತಂತೆ, ಅದರಲ್ಲೂ ಒ.ಪಿ. ವಿಜಯ್ ಕಾರ್ಯಾಚರಣೆಗೆ ಸಂಬಂಧಪಟ್ಟಂತೆ ಅಕ್ರಮಗಳಾಗಿವೆ ಎಂದು ಹಲವು ಆಪಾದನೆಗಳು ಬೆಳಕಿಗೆ ಬಂದಾಗ ಅದನ್ನು ಸಂಸತ್ತಿನಲ್ಲಿ ಎತ್ತಲಾಯಿತು. ಈ ವಿಷಯವನ್ನು ಆಮೂಲಾಗ್ರವಾಗಿ ತನಿಖೆ ಮಾಡುವುದಾಗಿ ರಕ್ಷಣಾ ಮಂತ್ರಿಗಳು ರಾಜ್ಯ ಸಭೆಯಲ್ಲಿ ಡಿಸೆಂಬರ್ 3, 1999 ರಂದು ಭರವಸೆ ನೀಡಿದರು. ಫೆಬ್ರವರಿ 10, 2000 ರಂದು ರಕ್ಷಣಾ ಸಚಿವಾಲಯ ಈ ಕುರಿತು ಒಂದು ಪರಾಮರ್ಶೆ/ ವಿಶೇಷ ಪರಿಶೋಧನೆ ನಡೆಸಬೇಕು ಎಂದು ಮಹಾಲೆಕ್ಕ ಪರಿಶೋಧಕ (ಸಿ ಅಂಡ್ ಎಜಿ) ರಿಗೆ ಬರೆಯಿತು. ಕಾರ್ಗಿಲ್‌ಗೆ ತುರ್ತು ಖರೀದಿಗಳಲ್ಲಿ ಅಕ್ರಮಗಳು ಹಾಗೂ ತಂತ್ರಜ್ಞಾನ ವರ್ಗಾವಣೆಗೆ ಹಣ ನೀಡಿದ್ದರೂ ವರ್ಗಾವಣೆ ಮಾಡದಿರುವ ಇತರ ಮಹತ್ವದ ಪ್ರಶ್ನೆಗಳನ್ನು ಕುರಿತಂತೆ ಆಪಾದನೆಗಳ ಬಗ್ಗೆ ಪರಿಶೀಲಿಸುವುದೂ ಇದರಲ್ಲಿ ಸೇರಿತ್ತು. ಸುಮಾರು ಎರಡು ವರ್ಷಗಳ ಅಧ್ಯಯನ, ಪರೀಕ್ಷಣೆಯ ನಂತರ ಸಿ ಅಂಡ್ ಎಜಿ "ಒ.ಪಿ.ವಿಜಯ್ (....)ಗೆ ಖರೀದಿಯ ಪರಾಮರ್ಶೆ" ಎಂಬ ವರದಿಯನ್ನು ಡಿಸೆಂಬರ್ 11, 2001 ರಂದು ಸಲ್ಲಿಸಿತು.


ಈ ವರದಿಯ ಪ್ರಕಾರ ಸುಮಾರಾಗಿ ಎಲ್ಲಾ ಶಸ್ತ್ರಾಸ್ತ್ರ ಪೂರೈಕೆಗಳು ದೊರೆತದ್ದು ಅಥವಾ ಕಾಂಟ್ರಾಕ್ಟ್ ಕೊಟ್ಟು ಪಡೆದದ್ದು ಗಡಿ ತಿಕ್ಕಾಟಗಳು ನಡೆದ ಬಹಳ ಸಮಯದ ನಂತರ. ಅಂದರೆ ಜುಲೈ 1999 ರಲ್ಲಿ ಅಂತ್ಯಗೊಂಡ ಈ ಗಡಿ ತಿಕಾ್ಕಟಗಳಲ್ಲಿ ಅವುಗಳೇನೂ ಉಪಯೋಗಕ್ಕೆ ಬರಲಿಲ್ಲ. 2150 ಕೋಟಿ ರೂ.ಗಳ ಶಸ್ತ್ರಾಸ್ತ್ರ ಪೂರೈಕೆ ಬಂದದ್ದು ಜುಲೈ 1999 ರ ನಂತರ, ಅದರಲ್ಲೂ 176204 ಕೋಟಿ ರೂ.ಗಳ ಮೌಲ್ಯದ ಪೂರೈಕೆ ಬಂದದ್ದು ಜನವರಿ 2000 ದ ನಂತರ. ಅಂದರೆ ಗಡಿ ತಿಕ್ಕಾಟಗಳು ನಿಂತು ಆರು ತಿಂಗಳ ನಂತರ. ಆಶ್ಚರ್ಯಕರ ಸಂಗತಿಯೆಂದರೆ 1606.26 ಕೋಟಿ ರೂ.ಗಳಷ್ಟು (ಒಟ್ಟು ಖರೀದಿಯ ಶೇ 75) ಖರೀದಿಗೆ ಕಾಂಟ್ರಾಕ್ಟ್ ನೀಡಿದ್ದು ಜುಲೈ 1999 ರಲ್ಲಿ ಗಡಿ ತಿಕ್ಕಾಟಗಳು ಸ್ತಬ್ಧವಾದ ನಂತರ ಹೀಗೆ ಸಿ ಅಂಡ್ ಎಜಿ ವರದಿಯ ಪ್ರಕಾರ ಕಾರ್ಗಿಲ್ ಘರ್ಷಣೆಗಳಿಗೆ ಮಾತ್ರ ಈ ತಕ್ಷಣದ ಖರೀದಿ ಎಂಬ ಸಮರ್ಥನೆ ಈಡೇರಿಲ್ಲ.

ಸಿ ಅಡ್ ಎಜಿ ಇನ್ನಷ್ಟು ವಿವರಗಳನ್ನು ನೀಡಿದೆ. ಕೆಲವು ಐಟಂಗಳಿಗೆ 44.4 ಕೋಟಿ ರೂ. ಹೆಚ್ಚು ಖರ್ಚು ಮಾಡಲಾಗಿದೆ. 260.55 ಕೋಟಿ ಬೆಲೆಯ ಅಗತ್ಯ ಗುಣಮಟ್ಟವಿಲ್ಲದ ಸರಕುಗಳಿಗೆ ಆರ್ಡರ್ ನೀಡಲಾಗಿದೆ, ಒಟ್ಟು ಅಗತ್ಯ / ಮಂಜೂರಿಗಿಂತ 107.97 ಕೋಟಿ ರೂ.ಗಳಷ್ಟು ಹೆಚ್ಚು ಖರೀದಿಸಲಾಗಿದೆ ಹಾಗೂ 342.37 ಕೋಟಿ ರೂ.ಗಳಷ್ಟು ಇಂತಹ ಮದ್ದುಗುಂಡುಗಳನ್ನು ಭಾರತದ ಆರ್ಡಿನೆನ್ಸ್ ಫ್ಯಾಕ್ಟರಿಗಳಲ್ಲಿ / ಸಾರ್ವಜನಿಕ ವಲಯದ ಘಟಕಗಳಲ್ಲಿ ಉತ್ಪಾದಿಸುತ್ತಿದ್ದರೂ ಅವುಗಳ ಆಮದಿಗೆ ಕಾಂಟ್ರಾಕ್ಟ್ ನೀಡಲಾಗಿದೆ ಮತ್ತು 199.42 ಕೋಟಿ ರೂ.ಗಳಷ್ಟು ಶಸ್ತ್ರಾಸ್ತ್ರಗಳು ವಿವಿಧ ಘಟ್ಟಗಳಲ್ಲಿ ವಿಳಂಬಗಳಿಂದಾಗಿ ಬರಲಿಲ್ಲ ಎಂದು ವರದಿ ಹೇಳಿದೆ.

ಹಿಂದೆ ಸಿ ಅಂಡ್ ಎಜಿ ವರದಿಯ ಪ್ರಕಾರ 'ಕಾರ್ಯಾಚರಣೆಯ ಅವಧಿಯಲ್ಲಿ ಸೇನಾಪಡೆಗಳಿಗೆ ಅತ್ಯಂತ ಅಗತ್ಯವಾಗಿದ್ದ ಉಡುಪುಗಳು, ಮದ್ದುಗುಂಡು ಮತ್ತು ಶಸ್ತ್ರಾಸ್ತ್ರಗಳು ತಲುಪದಿದ್ದರೂ 1046 ಕೋಟಿ ರೂ.ಗಳನ್ನು, ಒಟ್ಟು ವೆಚ್ಚದ ಸುಮಾರು ಅರ್ಧದಷ್ಟು, ಅದೂ ಕೂಡಾ ಸಂಪೂರ್ಣವಾಗಿ ವಿದೇಶಿ ವಿನಿಮಯದಲ್ಲಿ ನಿಷ್ಫಲವಾಗಿ ಖರ್ಚು ಮಾಡಲಾಗಿದೆ, ಈ ಮೂಲಕ ಸೂಕ್ತತೆ ನೀತಿಗಳನ್ನು ಉಲ್ಲಂಘಿಸಲಾಗಿದೆ"

ಸಿ.ವಿ.ಸಿ. ವರದಿ

ನಿಯಮಗಳ ಪ್ರಕಾರ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿ.ಎ.ಸಿ.) ಸಿ ಅಂಡ್ ಎಜಿಯ ಇಡೀ ವರದಿಯನ್ನು ವಿವರವಾದ ಪರೀಕ್ಷಣೆಗೆ ಆರಿಸಿಕೊಂಡಿತು. ಸಮಿತಿ ಸಿ ಅಂಡ್ ಎಜಿ ಯೊಂದಿಗೆ ಈ ಬಗ್ಗೆ ನಡೆಸಿದ ಒಂದು ಸಭೆಯಲ್ಲಿ ಒ.ಪಿ.ವಿಜಯ್ ಕಾರ್ಯಾಚರಣೆಗೆ ರಕ್ಷಣಾ ಖರೀದಿಯನ್ನು ಪರೀಕ್ಷಿಸುವ ಸಂದರ್ಭದಲ್ಲಿ ರಕ್ಷಣಾ ವ್ಯವಹಾರಗಳನ್ನು ಕುರಿತಂತಹ ಕೇಂದ್ರ ಜಾಗ್ರ... ಆಯೋಗ (ಸಿ.ವಿ.ಸಿ) ದ ವರದಿಯನ್ನು ನೋಡಬಹುದು ಎಂದು ಸಿ ಅಂಡ್ ಎಜಿ ಸೂಚಿಸಿದರು. ಈ ಪ್ರಕಾರ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಈ ವರದಿಯನ್ನು ಬಯಸಿದ... ಅವರು ಈ ವರದಿ 'ಗುಪ್ತವರದಿ' ಯಾದ್ದರಿ...



ಸೋಮನಾಥ ಚ...

ರಕ್ಷಣಾ ಸಚಿವಾಲಯವ... ಕೇಳಬೇಕು ಎಂದರು. ರಕ್ಷಣಾ ಸಚಿವಾಲಯ ಅದನ್ನು ನೀಡಲು ನಿರಾಕರಿಸಿತು. ಅದೊಂದ... ಗುಪ್ತವರದಿ, ಅದರ ಅಂಶಗಳನ್ನು ಹೊರಗೆಡಹುವುದು ಸಾರ್ವಜನಿಕ ಹಿತಾಸ... ಅನುಗುಣವಾಗಿಲ್ಲ ಎಂದು ಅದು ಹೇಳಿತು...

ಈ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿ...



ಕೇಂದ್ರ ಮಂತ್ರಿಮಂಡಲ ಲೋಕಸಭೆಗೆ ಜವಾಬ್ದಾರಿಯಾಗಿರಬೇಕು ಎಂದು ಸಂವಿಧಾನ ವಿಧಿಸಿದೆ. ಸರ್ಕಾರದ ಆದಾಯಗಳನ್ನೆಲ್ಲಾ 'ಭಾರತದ ಕ್ರೋಢೀಕೃತ ನಿಧಿ' ಯಲ್ಲಿ ಜಮಾ ಮಾಡಿ ಅವನ್ನು ಕಾನೂನಿನ ಪ್ರಕಾರ ಮತ್ತು ಸಂವಿಧಾನದಲ್ಲಿ ವಿಧಿಸಿದ ರೀತಿಯಲ್ಲೇ ಖರ್ಚು ಮಾಡಬೇಕು. ಭಾರತ ಸರ್ಕಾರದ ವಾರ್ಷಿಕ ಹಣಕಾಸು ಹೇಳಿಕೆಯಾದ ಬಜೆಟನ್ನು ಸಂಸತ್ತಿನ ಎರಡೂ ಸದನಗಳಲ್ಲಿ ಮಂಡಿಸಿ ಅದರ ಅನುಮೋದನೆ ಪಡೆಯಬೇಕು. ಹೀಗೆ ಭಾರತ ಸರ್ಕಾರ ತನ್ನೆಲ್ಲಾ ಆದಾಯಗಳು, ಖರ್ಚುಗಳಿಗೆ ಸಂಬಂಧಪಟ್ಟಂತೆ ಸಂಸತ್ತಿಗೆ ಜವಾಬ್ದಾರಿಯಾಗಿರಬೇಕು.

ಸಂಸತ್ತು ಕೇಂದ್ರ ಸರ್ಕಾರದ ಲೆಕ್ಕಪತ್ರಗಳನ್ನು ಪರೀಕ್ಷಿಸಲು ಒಂದು ಸಮಿತಿಯನ್ನು ನೇಮಿಸುತ್ತದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಎಂದು ಅದರ ಹೆಸರು. ಇದು ಸಂಸತ್ತಿನ ಒಂದು ಅತ್ಯಂತ ಪ್ರತಿಷ್ಠಿತ ಸಮಿತಿ. ಇದಲ್ಲದೆ ಈ ಲೆಕ್ಕ ಪತ್ರಗಳ ಪರಿಶೋಧನೆಗೆ ರಾಷ್ಟ್ರಪತಿಗಳು ಒಬ್ಬ ಮಹಾಲೆಕ್ಕ ಪರಿಶೋಧಕರನ್ನು (ಸಿ ಅಂಡ್ ಎಜಿ) ನೇಮಿಸಬೇಕು ಎಂದೂ ಸಂವಿಧಾನ ವಿಧಿಸಿದೆ. ಇವರು ತಮ್ಮ ವರದಿಗಳನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಬೇಕು. ರಾಷ್ಟ್ರಪತಿಗಳು ಅದನ್ನು ಸಂಸತ್ತಿನ ಎರಡೂ ಸದನಗಳ ಮುಂದೆ ತರುವಂತೆ ಮಾಡಬೇಕು. ಸಾರ್ವಜನಿಕ ಲೆಕ್ಕಪತ್ರ ಸಮಿತಿ ಈ ವರದಿಗಳನ್ನು ಪರಿಶೀಲಿಸುತ್ತದೆ. ಈ ಮೂಲಕ ಹಣಕಾಸನ್ನು ಸಂಸತ್ತು ನೀಡಿದ ಅಧಿಕಾರದ ಪ್ರಕಾರವೇ ಖರ್ಚು ಮಾಡಲಾಗಿದೆ ಎಂಬುದನ್ನು ಖಾತ್ರಿಯಾಗುತ್ತದೆ. ಸಂಸತ್ತು ಮಂಜೂರು ಮಾಡಿದ್ದಕ್ಕಿಂತ ಹೆಚ್ಚು ಖರ್ಚು ಮಾಡಿರುವಲ್ಲಿ ಅದನ್ನು ಪರಿಶೀಲಿಸಿ ಸೂಕ್ತ ಶಿಫಾರಸು ಮಾಡುತ್ತದೆ.

ಈ ಸಮಿತಿಯಲ್ಲಿ 22 ಸದಸ್ಯರಿರುತ್ತಾರೆ - 15 ಲೋಕಸಭೆಯಿಂದ, 7 ರಾಜ್ಯ ಸಭೆಯಿ... ಇದರಲ್ಲಿ ಆಳುವ ಪಕ್ಷದ ಸದಸ್ಯರ ಸಂಖ್... ಸದಾ ಬಹಳ ಹೆಚ್ಚಿರುತ್ತದೆ. ಆದರೆ ಈ ಸಮಿ... ಅಧ್ಯಕ್ಷರಾಗಿ ಪ್ರತಿಪಕ್ಷದ ಒಬ್ಬ ಸದಸ್ಯ... ನೇಮಿಸುವ ಸಂಪ್ರದಾಯವಿದೆ.

ಸಂಸದೀಯ ಪ್ರಜಾಪ್ರಭುತ್ವದ ಮೂಲ... ಅಂಶವೆಂದರೆ ಸರ್ಕಾ... ಜವಾಬುದಾರಿಕೆ-ವಿಶೇಷವಾಗಿ, ಸರ್ಕಾ... ಖರ್ಚುಗಳ ವಿಷಯದಲ್ಲಿ. ಏಕೆಂದರೆ ಸರ್ಕಾ... ಬರುವ ಆದಾಯ ಅದು ಜನಸಾಮಾನ್ಯರ... ಹಾಕುವ ತೆರಿಗೆಗಳಿಂದಲೇ. ಆದ್ದರಿಂದ... ಬರುವ ಆದಾಯವನ್ನು ಅತ್ಯಂತ ಸೂ... ಖರ್ಚು ಮಾಡಲಾಗುತ್ತಿದೆಯೇ ಎಂ... ಕಟ್ಟುನಿಟ್ಟಾಗಿ ಪರಿಶೀಲಿಸಬೇಕಾಗುತ್ತದೆ... ನಿಟ್ಟಿನಲ್ಲಿ ಸಂಸತ್ತಿನ ಸಾರ್ವಜನಿಕ ಲೆ... ಸಮಿತಿಯ ಪಾತ್ರ ಬಹಳ ಮಹತ್ವದ್ದು.

ರಸೆ

ಗಿ ಚರ್ಚಿಸಿತು. ರಕ್ಷಣಾ ವ್ಯವಹಾರಗಳ
ಖೆ ಮಾಡಲು ಕೆಲಸವನ್ನು ಸಿ ಅಂಡ್
ತ್ತು ಸಿ.ವಿ.ಸಿ. ಎರಡನ್ನೂ ರಕ್ಷಣಾ
ಯ ನೀಡಿತು. ಆದರೆ ಸಿ ಅಂಡ್
ವರದಿಯನ್ನು
ನಿಕಗೊಳಿಸಲಾಗಿದೆ, ಸಿ.ವಿ.ಸಿ.ಯ
ಬಗ್ಗೆ ಮಾತ್ರ 'ಗುಪ್ತತೆ' ಯ ಕಾರಣ
ಗಿದೆ. ಇದನ್ನು ನೆಪವಾಗಿ
ಗದು ಎಂದು ಸಿ ಅಂಡ್ ಎಜಿ

ಡೆ ಸಿ.ವಿ.ಸಿ. ವರದಿಯನ್ನು ರಕ್ಷಣಾ
ಯ ಕೊಡಲೊಪ್ಪದಿದ್ದರೆ, ಇನ್ನೊಂದೆಡೆ
ಮಂತ್ರಿಗಳು ರಕ್ಷಣಾ ವ್ಯವಹಾರಗಳನ್ನು
ರಕ್ಷಣಾ ಸಚಿವಾಲಯದ
ಜುಗಳನ್ನು ನೋಡುವ ಅವಕಾಶವನ್ನು
ಯ, ಆರ್.ವಿ. ಪಂಡಿತ್
ನಿಗೆ ನೀಡಿದರು. ಈ
ಪಂಡಿತ್ ಸಿ ಅಂಡ್ ಎಜಿಯೇ
ಎಂದು ಜರೆಯುತ್ತಾ ಅಲ್ಯುಮಿನಿಯಂ
ಖರೀದಿಯಲ್ಲಿ ಭ್ರಷ್ಟಾಚಾರದ
ನ್ನು ಎತ್ತಿದ ಸಂಸತ್ ಸದಸ್ಯರ
ಡಿನ ವರ್ತನೆ ಎಂದು ಟೀಕಿಸಿದರು.
ಮಂತ್ರಿಗಳು ಈ ಪಂಡಿತ್ ಎಂಬಾತ
ನ್ನೆನ್ನಲಾದ ಕಿರು ಪುಸ್ತಕವನ್ನು
ಗೆ ಬಿಟ್ಟರು. ಇದಕ್ಕೆ ಸ್ವತಃ ರಕ್ಷಣಾ
ೀ ಮುನ್ನುಡಿ ಬರೆದಿದ್ದಾರೆ. ಅದರಲ್ಲಿ
ತ್ ಎಂಬಾತನ ತೀರ್ಮಾನಗಳನ್ನು
ಮೂಲಕ ಅವರು ಸಿ ಅಂಡ್ ಎಜಿ
ಸಂಸತ್ ಸದಸ್ಯರ ಬಗ್ಗೆ ಮಾಡಿರುವ
ಬ್ದಾರಿ ಆಪಾದನೆಗಳನ್ನು
ದಿಸಿದಂತಾಗಿದೆ.
.ಸಿ. ವರದಿ ಕೊಡದಿರಲು ಸರಿಯಾದ
ಲ್ಲ ಹಾಗೂ ಪಂಡಿತ್ ಎಂಬಾತನ
ದ ಚಲಾವಣೆಗೆ ಸಂಬಂಧಪಟ್ಟಂತೆ
ಮಂತ್ರಿಗಳ ವರ್ತನೆಯನ್ನು
ಸುವ ಅಗತ್ಯವಿದೆಯಾದ್ದರಿಂದ ಈ
ಷಯಗಳನ್ನು ಲೋಕಸಭಾಧ್ಯಕ್ಷರ
ತರಲು ಸಾರ್ವಜನಿಕ ಲೆಕ್ಕಪತ್ರ
ಪಿಎಸಿ) ನಿರ್ಧರಿಸಿತ್ತು. ನಂತರ ಪಿಎಸಿ,
ಮತ್ತು ರಕ್ಷಣಾ ಮಂತ್ರಿಗಳು
ಭಾಧ್ಯಕ್ಷರೊಂದಿಗೆ ಸಭೆಗಳನ್ನು
: ಸಾರ್ವಜನಿಕ ಲೆಕ್ಕಪತ್ರ ಸಮಿತಿಯ
ದಸ್ಯರ ಅಭಿಪ್ರಾಯವನ್ನು
ೕಕೆಂಬ ಲೋಕಸಭಾಧ್ಯಕ್ಷರು
ಂತೆ ಜುಲೈ 10, 2002 ರಂದು ನಡೆದ
ವಿಶೇಷ ಸಭೆಯಲ್ಲಿ "ಸಿ ಅಂಡ್
ವರದಿಯ ಸಂದರ್ಭಗಳಲ್ಲಿ ಈ
ನ್ನು ರಕ್ಷಣಾ ಸಚಿವಾಲಯ
ೕಕು ಎಂದು ಸಾರ್ವಜನಿಕ ಲೆಕ್ಕಪತ್ರ
ಸದಸ್ಯರು ಸರ್ವಾನುಮತದಿಂದ
ದರು' ಮತ್ತು 'ರಕ್ಷಣಾ ಮಂತ್ರಿಗಳು
ಪಡುದಾದ ಹಕ್ಕುಚ್ಯುತಿಗೆ ಹಾಗೂ
ಕೆಲಸದಲ್ಲಿ ಹಸ್ತಕ್ಷೇಪ ನಡೆಸಿದ್ದಾರೆ
ದಾದ ವಿಷಯವನ್ನು ಹಕ್ಕು ಬಾಧ್ಯತಾ
ಪರೀಕ್ಷಿಸಲು ಮಾನ್ಯ
ಾಧ್ಯಕ್ಷರ ಗಮನಕ್ಕೆ ತರಲು'
ಾಯಿತು.
ರ್ವಾನುಮತದ ನಿರ್ಣಯದ
ರಕ್ಷಣಾ ಸಚಿವಾಲಯ ಪಿವಿಸಿ
ಕೊಡಲು ನಿರಾಕರಿಸಿತು. ಅದು
ಸದ, ಸೂಕ್ತವಲ್ಲದ ಮತ್ತು



ಪಿಎಸಿಯ ಮೂಲಕ ಸಂಸದಿಗೆ ಜವಾಬುದಾರಿಕೆಗೆ ಭಂಗ ತಂದಿರುವ ವರ್ತನೆ. ಅಂತಿಮವಾಗಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಇಂತಹ ಪ್ರಮುಖ ದಸ್ತಾವೇಜನ್ನು ಕೊಡದಿರುವ ಬಗ್ಗೆ ಆಶ್ಚರ್ಯ ಸೂಚಿಸುವುದಲ್ಲದೆ ಬೇರೆ ದಾರಿ ಉಳಿಯಲಿಲ್ಲ. ಅದು "ರಕ್ಷಣಾ ಖರೀದಿ ವ್ಯವಹಾರಗಳನ್ನು ಕುರಿತಂತೆ ನಮ್ಮ ತೀರ್ಮಾನಗಳನ್ನು ಕೊಡಲು ಅಸಮರ್ಥರಾಗಿದ್ದೇವೆ" ಎಂದುಖೇದ ವ್ಯಕ್ತಪಡಿಸಬೇಕಾಯಿತು.

ಸಿವಿಸಿ ಅಂದರೆ ಕೇಂದ್ರೀಯ ಜಾಗೃತಾ ಆಯೋಗ ಆಡಳಿತದಲ್ಲಿ ಭ್ರಷ್ಟಾಚಾರದ ಪ್ರಕರಣಗಳನ್ನು ತನಿಖೆ ಮಾಡುವ ಅಧಿಕಾರ ಹೊಂದಿರುವ ಒಂದು ಅತ್ಯಂತ ಮಹತ್ವದ ಸಂಘಟನೆ ಇದು ಸರಕಾರದ ಹಸ್ತಕ್ಷೇಪವಿರದಂತೆ ಈ ಸಂಘಟನೆಯ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಸುಪ್ರೀಂಕೋರ್ಟ್ ಒತ್ತಿ ಹೇಳಿದೆ.

ಈ ರಕ್ಷಣಾ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಸಿ.ವಿ.ಸಿ. ತನಿಖೆ ಮಾಡಿತ್ತು, ಸಿ ಅಂಡ್ ಎಜಿಗೆ ಅದನ್ನು ತನ್ನ ಪರೀಕ್ಷಣೆಯ ವೇಳೆಗೆ ನೋಡಲು ಅವಕಾಶ ದೊರೆತಿತ್ತು. ಹಾಗೂ ಅದನ್ನು ಪರಿಶೀಲಿಸಬೇಕು ಎಂದು ಸಾರ್ವಜನಿಕ ಲೆಕ್ಕಪತ್ರ, ಪರಿಶೀಲಿಸದಂತಹ ಗುಪ್ತವರದಿ ಎಂದು ಪರಿಗಣಿಸಲಾಗದು ಎಂಬುದೂ ಸಿ ಅಂಡ್ ಎಜಿ ಯ ಅಭಿಪ್ರಾಯವಾಗಿದೆ.

ಸತ್ಯವನ್ನು ಮುಚ್ಚಿಡುವ ಸಂಚು

ರಕ್ಷಣಾ ಸಚಿವಾಲಯದ, ಆ ಮೂಲಕ ಭಾರತ ಸರ್ಕಾರದ ವರ್ತನೆ ದೇಶದಲ್ಲಿ ಸಂಸದೀಯ ಆಳ್ವಿಕೆ ವ್ಯವಸ್ಥೆಯ ಬೆಳವಣಿಗೆಯಲ್ಲಿ ಒಂದು ಕೊಳಕು ಅಧ್ಯಾಯ ಸಂಸತ್ತು ದೇಶದ ಜನತೆಯ ಅತ್ಯುನ್ನತ ವೇದಿಕೆ. ಅದಕ್ಕೆ ತನ್ನ ಜವಾಬುದಾರಿಕೆಯ ನೀತಿಗೆ ಸರಕಾರ ಕಳಂಕ ತಂದಿದೆ. ಸಂಸದೀಯ ಪ್ರಜಾಪ್ರಭುತ್ವದ ಮೇಲೆ ಈ ಉದ್ದೇಶಪೂರ್ವಕ ದಾಳಿ ಸಂಸತ್ತಿಗಷ್ಟೇ ಅಲ್ಲ, ದೇಶದ ಜನತೆಗೆ ಮಾಡಿರುವ ಅವಮಾನ. ಮಾಹಿತಿ ಪಡೆಯುವ ಹಕ್ಕು ಜನತೆಯ ಪರವಾಗಿ ಸಂಸತ್ತಿಗಿದೆ. ಗುಪ್ತತೆಯ ಹೆಸರಲ್ಲಿ ಅದನ್ನು ನಿರಾಕರಿಸಲಾಗದು. ಈ ದಸ್ತಾವೇಜು ದೊಡ್ಡ ಭ್ರಷ್ಟಾಚಾರವನ್ನು ಬಯಲಿಗೆಳೆದಿದೆ. ಎಂಬುದರಲ್ಲಿ ಸಂಶಯವಿಲ್ಲ. ಕೇಂದ್ರ ಸರ್ಕಾರದ ಅತ್ಯುನ್ನತ ಮಟ್ಟದಲ್ಲಿ ಸತ್ಯವನ್ನು ಮುಚ್ಚಿಹಾಕುವ, ಈಗಾಗಲೇ ಹಲವು ರಕ್ಷಣಾ ವ್ಯವಹಾರಗಳನ್ನು ಕುರಿತಂತೆ ಶಂಕಿತನಾಗಿರುವ ಮಾನ್ಯ ಮಂತ್ರಿಯನ್ನು ರಕ್ಷಿಸಲು ಸಂಚು ನಡೆದಿರುವುದು ಸ್ವಯಂವೇದ್ಯ.

ಅಲ್ಪ ರಾಜಕೀಯ ಉದ್ದೇಶಗಳಿಗಾಗಿ ಸಂಸತ್ತಿಗೆ ಮಂತ್ರಿಮಂಡಲದ ಜವಾಬುದಾರಿಕೆಯನ್ನು ಕೈಬಿಡಲಾಗಿದೆ. ಪಿವಿಸಿ ವರದಿ ಒಂದು ಸಾರ್ವಜನಿಕ ದಸ್ತಾವೇಜು. ಅದು ರಕ್ಷಣಾ ಸಚಿವಾಲಯವನ್ನು ಅಥವಾ ರಕ್ಷಣಾ ಮಂತ್ರಿಯನ್ನು ನಿರ್ದೋಷಿಗಳೆಂದು ಹೇಳಿದ್ದರೆ ಖಂಡಿತಾ ಅದನ್ನು ಪಿವಿಸಿ ಯಿಂದ ಬಚ್ಚಿಡುತ್ತಿರಲಿಲ್ಲ. ಸರ್ಕಾರ ಮತ್ತು ರಕ್ಷಣಾ ಸಚಿವಾಲಯ ಸಾರ್ವಜನಿಕ ಹಣದ ಪೋಲು ಬಯಲಾಗದಂತೆ ತಡೆಯಬಯಸುತ್ತಿವೆ ಎಂಬುದು ಸ್ಪಷ್ಟ. ಹಣವಿಲ್ಲ ಎಂದು ನೆಪವೊಡ್ಡಿ ಹಲವು ಮಹತ್ವಪೂರ್ಣ ಸಾರ್ವಜನಿಕ ಕಲ್ಯಾಣ ಚಟುವಟಿಕೆಗಳನ್ನು ನಿಲ್ಲಿಸುತ್ತಿರುವಾಗ, ಮಹತ್ವದ ಕೇಂದ್ರ ಸಾರ್ವಜನಿಕ ವಲಯ ಘಟಕಗಳನ್ನು ಮುಚ್ಚಿ ಕಾರ್ಮಿಕರನ್ನು ಬೀದಿ ಪಾಲು ಮಾಡಿ ಹಸಿವಿನಿಂದ ನರಳುವಂತೆ ಮಾಡುತ್ತಿರುವಾಗ ಈ ರೀತಿಯ ಸಾರ್ವಜನಿಕ ಹಣದ ಪೋಲು ನಡೆಯುತ್ತಿದೆ ಎಂದು ಸತ್ಯವನ್ನು ಮುಚ್ಚಿಹಾಕುವ ಪ್ರಯತ್ನ ನಡೆದಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ತೀರ್ಮಾನಗಳು ಸರ್ವಾನುಮತವಾಗಿದ್ದವು ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕಾಗಿದೆ. ಈ ಸಮಿತಿಯಲ್ಲಿ ಆಳುವ ಪಕ್ಷಗಳವರದ್ದೇ ಬಹುಮತ. ಆದರೆ ಈಗ ಎನ್‌ಡಿಎ ಸರ್ಕಾರವನ್ನು ಸಾರ್ವಜನಿಕ ಟೀಕೆಯಿಂದ ತಪ್ಪಿಸಲು ಬಿಜೆಪಿಯ ಸದಸ್ಯರು ನಂತರ ಸದನದಲ್ಲಿ ಈ ವರದಿಗೆ ಸವಾಲು ಹಾಕಿದ್ದಾರೆ. ಇದು ಸಂಸದೀಯ ವರ್ತನೆಗೆ ಕಳಂಕ ತರುವ ವರ್ತನೆ. ಹೀಗೆ ಆಗುತ್ತಿರುವುದು ಇದೇ ಮೊದಲು. ಹತಾಶ ಬಿಜೆಪಿ ಇಡೀ ಸಂಸದೀಯ ಕಾರ್ಯನಿರ್ವಹಣೆಯ ಪ್ರಕ್ರಿಯೆಯನ್ನೇ ತಪ್ಪಿಸಲು, ಹೀಗಳೆಯುವ ಪ್ರಯತ್ನ ನಡೆಸಲು ಕೂಡಾ ಹೇಸುತ್ತಿಲ್ಲ. ಈ ಮೂಲಕ ಅದು ನಮ್ಮ ರಾಜಕೀಯ ವ್ಯವಸ್ಥೆಯ ಅಡಿಗಲ್ಲನ್ನೇ ದುರ್ಬಲಗೊಳಸುತ್ತಿದೆ. ಇದನ್ನು ಈ ದೇಶದ ಜನತೆ ಎಲ್ಲಾ ರೀತಿಗಳಿಂದಲೂ ಪ್ರತಿರೋಧಿಸಬೇಕು.

ಇದು ನಿಷೇಧಗಳ ಸರ್ಕಾರ!

ಗೋಹತ್ಯೆ ನಿಷೇಧ : ಗೋಹತ್ಯೆನಿಷೇಧ ಕುರಿತು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಬೇಕೆಂಬ ಕೇಂದ್ರ ಸರಕಾರದ ಉದ್ದೇಶ ಕುರಿತು ಚರ್ಚಿಸಿದ ಸಿಪಿಐ(ಎಂ) ಪಾಲಿಟ್‌ಬ್ಯೂರೋ ರಾಜ್ಯ ಸಕಾರಗಳ ಅಧಿಕಾರದ ಮೇಲೆ ಕೇಂದ್ರದ ಹಸ್ತಕ್ಷೇಪ ಸಲ್ಲದು ಎಂಬ ತೀರ್ಮಾನಕ್ಕೆ ಬಂದಿದೆ. ಗೋಹತ್ಯೆ ನಿಷೇಧದ ಬಗ್ಗೆ ಹಲವಾರು ರಾಜ್ಯಗಳಲ್ಲಿ ಈಗಾಗಲೇ ಕಾಯಿದೆಗಳನ್ನು ರಚಿಸಿದ್ದು, ಹಾಲು ನೀಡುತ್ತಿರುವ ಮತ್ತು 14 ವರ್ಷದ ಕೆಳಗಿನ ಗೋವುಗಳ ಹತ್ಯೆ ನಿಷೇಧ ಜ್ಯಾರಿಯಲ್ಲಿದೆ.

ಅಲ್ಲದೆ ಬಹುಧರ್ಮೀಯ, ಬಹು ಜನಾಂಗೀಯ ದೇಶವಾಗಿರುವ ಭಾರತದಲ್ಲಿ ವಿವಿಧ ರೀತಿಯ ಆಹಾರ ಸೇವನೆ ಜ್ಯಾರಿಯಲ್ಲಿದ್ದು, ಯಾವುದೇ ವಿಭಾಗದ ಜನರು ಎನ್ನುವ ಆಹಾರದ ಮೇಲೆ ನಿಷೇಧ ಹೇರಬಾರದು ಮತ್ತು ಗೋಹತ್ಯೆ ನಿಷೇದದ ಕುರಿತು ಮಸೂದೆಯನ್ನು ಕೇಂದ್ರದಲ್ಲಿ ಜಾರಿಗೆ ಬಾರದೆ, ರಾಜ್ಯದ ಅಧಿಕಾರಕ್ಕೆ ಬಿಡಬೇಕೆಂದು ಸಿಪಿಐ(ಎಂ) ವಾದಿಸಿದೆ.

ಅಯೋಧ್ಯೆ ಬಿಜೆಪಿ ಅಧಿಕಾರ ದುರುಪಯೋಗ

ಐದು ರಾಜ್ಯಗಳಲ್ಲಿ ಮುಂಬರುವ ವಿಧಾನ ಸಭಾ ಚುನಾವಣೆಗಳನ್ನು ಗಮನದಲ್ಲಿರಿಸಿ, ಅಯೋಧ್ಯಾ ವಿವಾದವನ್ನು ಮುಂದೆ ಮಾಡಿ ಜನರನ್ನು ಅಣಿ ನೆರೆಸಲು ಬಿಜೆಪಿ ಹವಣಿಸುತ್ತಿದೆ. ಅಯೋಧ್ಯೆಯಲ್ಲಿ ಮಂದಿರವನ್ನು ಕಟ್ಟುತ್ತೇವೆ ಎಂದು ಪ್ರಧಾನಿ ಮತ್ತು ಉಪ ಪ್ರಧಾನಿ ಘೋಷಿಸುವುದರ ಮೂಲಕ ನ್ಯಾಯಾಂಗ ಪ್ರಕ್ರಿಯೆಯನ್ನು ವಿಫಲಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಬಾಬರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಆರೋಪಿಗಳಾಗಿರುವ ಬಿಜೆಪಿ ಮುಖಂಡರನ್ನು ರಕ್ಷಿಸುವ ಪ್ರಯತ್ನವೂ ನಡೆಯುತ್ತಿದೆ. ಎಲ್.ಕೆ. ಅದ್ವಾಣಿ, ಮುರಳಿ ಮನೋಹರಜೋಷಿ ಮತ್ತಿತರ ಮುಖಂಡರ ಮೇಲೆ ಹಾಕಿದ ಪಿತೂರಿಯ ಆರೋಪವನ್ನು ಸಿಬಿಐ ತೆಗೆದುಹಾಕಿದೆ. ಇದಕ್ಕೆ ಪ್ರಧಾನಿ ಸಚಿವಾಲಯದ ಒತ್ತಡವಿದೆ. ಮೊದಲು ಲಕ್ನೋ-ಹೈ ಕೋರ್ಟ್ ಮುಂದೆ ಹಾಕಿದ ಆರೋಪ ಪಟ್ಟಿಯಲ್ಲಿ ನಮೂದಿಸಿದ ಆರೋಪಗಳಂತೆ ಎಲ್.ಕೆ. ಅದ್ವಾಣಿ ಮತ್ತಿತರರ ಮೇಲೆ ಪಿತೂರಿಯ ಆರೋಪವನ್ನು ಪಟ್ಟಿಯು ಒಳಗೊಳ್ಳಬೇಕು.

ಕೇರಳ : ವಿದ್ಯಾರ್ಥಿ ಚಳುವಳಿಕಾರರ ಮೇಲೆ ದೌರ್ಜನ್ಯ

ತೀವ್ರ ಹೆಚ್ಚಳ ಮತ್ತು ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಹಣವುಳ್ಳ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ' ನೀತಿಯ ವಿರುದ್ಧ ಅಲ್ಲಿನ ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನಾ ಹೋರಾಟವನ್ನು ದಮನಗೊಳಿಸಲು ಆಂಟನಿ ಸರ್ಕಾರದ ದಮನ ಖಂಡನೀಯ. ಯು.ಡಿ.ಎಫ್. ಸರ್ಕಾರವು ಎಲ್ಲಾ ಜನ ವಿಭಾಗಗಳ ಮೇಲೆ ಎಲ್ಲಾ ಪೊಲೀಸ್ ಬಲ ಹಾಗೂ ದಮನಕಾರಿ ಕ್ರಮಗಳನ್ನು ಕೈಗೊಂಡು ಕ್ರೂರ ಸರ್ಕಾರವಾಗಿ ಪರಿಣಮಿಸಿದೆ. ಜಾತಿ ಹಾಗೂ ಕೋಮುವಾದಿ ಸಂಘಟನೆಗಳನ್ನು ಓಲೈಸುವ ಕಾಂಗ್ರೆಸ್‌ನ ನಾಯಕರ ಕ್ರಮವು ಶಿಕ್ಷಣರಂಗವನ್ನು ಒಳಗೊಂಡು ಇಡೀ ಕೇರಳದ ಸಮಾಜದ ಮೇಲೆ ಹಾನಿಕಾರಕ ಪರಿಣಾಮಗಳನ್ನು ಉಂಟುಮಾಡುತ್ತಿದೆ.

ಇಸ್ರೇಲ್ ಪ್ರಧಾನಿ ಭೇಟಿ

ಈಗ ವರದಿಯಾದಂತೆ ಸೆಪ್ಟೆಂಬರ್ 9 ರಿಂದ 12 ರವರೆಗಿನ ಇಸ್ರೇಲ್‌ನ ಪ್ರಧಾನಿ ಶೆರೂನ್ ಭಾರತಕ್ಕೆ ಭೇಟಿ ನೀಡಲು ಆಹ್ವಾನಿಸಿರುವ ವಾಜಪೇಯಿ ಸರ್ಕಾರದ ಕ್ರಮವನ್ನು ಸಿಪಿಐ(ಎಂ) ವಿರೋಧಿಸಿದೆ. ಪಾಲೆಸ್ತೇನ್ ಜನತೆಯ ಹಕ್ಕು ಹೋರಾಟವನ್ನು ಬರ್ಬರವಾಗಿ ದಮನಿಸುವ ಇಸ್ರೇಲಿನ ಪ್ರಧಾನಿ ಭಾರತಕ್ಕೆ ಬಂದಾಗ ಪ್ರತಿಭಟಿಸಲು ಎಲ್ಲಾ ಪ್ರಜಾಸತ್ತಾತ್ಮಕ ಶಾಂತಿಪ್ರಿಯ ಶಕ್ತಿಗಳಲ್ಲಿ ಮನವಿ ಮಾಡಿದೆ.



ಕೇರಳದಲ್ಲಿ ಪೋಲೀಸರಿಂದ ವಿದ್ಯಾರ್ಥಿ ಚಳುವಳಿಕಾರರ ಮೇಲೆ ದೌರ್ಜನ್ಯ

ರೈತರ ಆತ್ಮಹತ್ಯೆ ನಿಲ್ಲಿಸಿ ಮುಗ್ಧರ ಕೊಲೆ ನಿಲ್ಲಿಸಿ

ಸಮರೋತ್ಸಾಹ ತುಂಬುವ ಜಾಥಾಗಳು

◆ ನಿತ್ಯಾನಂದ ಸ್ವಾಮಿ

ಆತ್ಮವಿಶ್ವಾಸ, ಸಮರೋತ್ಸಾಹ ತುಂಬುವ ಜಾಥಾಗಳು

ಸ್ವಾತಂತ್ರ್ಯೋತ್ಸವದ ದಿನದಂದೇ ಇಬ್ಬರು ರೈತರ ಆತ್ಮಹತ್ಯೆ! ನಿತ್ಯವೂ ಹೀಗೆ ಹೆಣಗಳುರುಳುತ್ತಿದ್ದರೂ ಆಳುವವರಿಗೆ ಕಿಂಚಿತ್ತೂ ಕನಿಕರವಿಲ್ಲ. ಮನಸ್ಸು ಕಲಕುತ್ತಿಲ್ಲ. ಇಲ್ಲಿಗೆ 159 ಎಂದು ಲೆಕ್ಕ ಕೊಡುವ ಈ ಜನನಾಯಕರಿಗೆ ಮಿಡಿವ ಹೃದಯವಿಲ್ಲ, ಹೊಣಗಾರಿಕೆಯಿಲ್ಲ...

ಇವು ಆತ್ಮಹತ್ಯೆಗಳಲ್ಲ, ಇಷ್ಟೊಂದು ಆಸ್ಪತ್ರೆ-ಔಷಧಿಗಳಿದ್ದರೂ ಯಾಕೆ ಜನ ಅನಾರೋಗ್ಯದಿಂದ ಸಾಯುತ್ತಾರೆ? ಗೋದಾಮುಗಳಲ್ಲಿ ಆಹಾರ ಧಾನ್ಯ ತುಂಬಿತುಳುಕುತ್ತಿದ್ದರೂ ಹಸಿವಿನಿಂದೇಕೆ ಸಾಯುತ್ತಿದ್ದಾರೆ? ಇವು ಆತ್ಮಹತ್ಯೆಗಳಂತೆ ಕಂಡರೂ ಆಳುವವರ ನೀತಿಗಳ ವಿಷ ಫಲ - ಅಂದರೆ ಕೊಲೆಗಳೇ!

ಇಂತಹ ನೀತಿಗಳ ವಿರುದ್ಧ ಆತ್ಮವಿಶ್ವಾಸ ತುಂಬುವ ಹೋರಾಟ ನಡೆದಿದೆ ಜನರನ್ನು ಮಹಾನ್ ಹೋರಾಟಕ್ಕೆ ಸಿದ್ಧಗೊಳಿಸಲಾಗುತ್ತಿದೆ. ಜನರ ನಡುವಿನಿಂದ ಜನರೆಡೆಗೆ ಸಾಗಿರುವ ಸಮರಸಿದ್ಧತೆಯ ಜಾಥಾಗಳ ಮೂಲಕ ತಲುಪಲು ಸಿಪಿಐ(ಎಂ) ಹೊರಟಿದೆ. ಈ ಜಾಥಾಗಳೇಕೆ ಎಂಬುದನ್ನು ವಿವರಿಸಿದ್ದಾರೆ ನಿತ್ಯಾನಂದ ಸ್ವಾಮಿಯವರು

ಆಗಸ್ಟ್ 16 ರಿಂದ 31 ರವರೆಗೆ ದೇಶಾದ್ಯಂತ ಪ್ರತಿಭಟನಾ ಪಾಕ್ಷಿಕವನ್ನು ನಡೆಸುವಂತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. ಈ ಅವಧಿಯಲ್ಲಿ ದೇಶದ ಉದ್ದಗಲಕ್ಕೂ ಪ್ರಚಾರ ಜಾಥಾಗಳನ್ನು, ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಗುವುದು. ಯಾಕೆ ಎಂದು ನೀವು ಕೇಳಬಹುದು.

ನಾವು ನಿಮಗೊಂದು ಪ್ರಶ್ನೆ ಕೇಳುತ್ತೇವೆ. ನಮ್ಮ ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ? ಒಬ್ಬನಲ್ಲ, ಇಬ್ಬರಲ್ಲ, ಪ್ರತಿದಿನ ಹತ್ತಾರು. ಕುಟುಂಬದ ಎಲ್ಲಾ ಸದಸ್ಯರು ಸಾಮೂಹಿಕವಾಗಿ ಸಾವಿಗೆ ಶರಣಾಗುತ್ತಿದ್ದಾರೆ. ಯಾಕೆ? ಅವರೆಲ್ಲರಿಗೂ ಹೊಟ್ಟೆ ನೋವು ಬಂದಿತ್ತಾ? ಮಹಿಳೆಯರು ಮಕ್ಕಳು ಸಹ ದುಷ್ಚಟಗಳಿಗೆ ಬಲಿಯಾದವರಾ?

ಇನ್ನೊಬ್ಬನಿಗೆ ಅನ್ನ ನೀಡಿ ಬದುಕಿಸುವ ರೈತ ಇಂದು ದಿಕ್ಕಿಲ್ಲದವನಂತೆ ಸಾಯುತ್ತಿರುವುದನ್ನು ನೋಡಿದರೆ ಈ ದೇಶದಲ್ಲಿ, ಈ ರಾಜ್ಯದಲ್ಲಿ ಸರ್ಕಾರ ಎನ್ನುವುದೊಂದು ಇದೆಯಾ ಎಂದು ಸಂದೇಹ ಉಂಟಾಗುವುದಿಲ್ಲವೇ? ದಿನ ಬೆಳಗಾದರೆ ರಾಜ್ಯದಲ್ಲಿ ರೈತರ ಹೆಣಗಳು ಬೀಳುತ್ತಿರುವಾಗ ಹೊಣೆಗಾರಿಕೆಯ ಸ್ಥಾನದಲ್ಲಿರುವ ಮುಖ್ಯಮಂತ್ರಿ ಕೃಷ್ಣರವರಿಗೆ ಊಟವಾದರೂ ಹೇಗೆ ಸೇರುತ್ತದೆ?

ದೆಹಲಿಯಲ್ಲೊಂದು ಸರ್ಕಾರವಿದೆ. ಅದರಲ್ಲಿ ವಾಜಪೇಯಿಗಳು, ಅಡ್ವಾಣಿಗಳು ಹಿಂದುಗಳ ಉದ್ಧಾರಕ್ಕಾಗಿ ಅವತಾರ ತಾಳಿದವರು! ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರು ಹಿಂದುಗಳಲ್ಲವೇ? ಬೇರೆ ರೈತರು ಸತ್ತರೆ ಅವರು ಚಿಂತಿಸುತ್ತಿಲ್ಲ ಬಿಡಿ! ಹಿಂದು ರೈತರು ಸಾಯುತ್ತಿರುವುದೂ ಇವರುಗಳಿಗೆ ಕಾಣುತ್ತಿಲ್ಲವೇ?

ರೈತರ ಈ ನಾಡಿನಲ್ಲಿ ರೈತರನ್ನು ಕೊಲ್ಲಲಾಗುತ್ತಿದೆ. ವಾಜಪೇಯಿ ಸರ್ಕಾರದ ಧೋರಣೆಗಳು ಒಂದು ಕಡೆ. ಕೃಷ್ಣ ಸರ್ಕಾರದ ಧೋರಣೆಗಳು ಇನ್ನೊಂದು ಕಡೆ. ಎರಡರ ನಡುವೆ ಸಿಕ್ಕಿಹಾಕಿಕೊಂಡ ರೈತರ ಉಸಿರುಗಟ್ಟಿ ಸಾಯುತ್ತಿದ್ದಾನೆ. ರೈತನಿಗೆ ನೀಡಲಾಗುತ್ತಿದ್ದ ಸಬ್ಸಿಡಿಗಳನ್ನು ಕಿತ್ತುಕೊಳ್ಳಲಾಗಿದೆ. ನೀರಾವರಿ ಇತ್ಯಾದಿಗಳಿಗೆ ಹಣ ಹೂಡುವುದನ್ನು ನಿಲ್ಲಿಸಲಾಗಿದೆ. ವಿದೇಶಿ ಕೃಷಿ ಉತ್ಪನ್ನಗಳನ್ನು ದೇಶದೊಳಗೆ ನುಗ್ಗಿಸಿ ನಮ್ಮ ರೈತನ ಶ್ರಮಕ್ಕೆ ಬೆಲೆ ಇಲ್ಲದಂತೆ ಮಾಡಲಾಗಿದೆ. ಸರ್ಕಾರಿ ಸಾಲ ಮಾಯಾಗಿದೆ. ಖಾಸಗಿ ಸಾಲವಲ್ಲದೆ ಬೇರೆ ದಾರಿ ಇಲ್ಲವಾಗಿದೆ. ಇದರ ಜೊತೆಯಲ್ಲಿ ಬರಗಾಲ ಬೆನ್ನು ಹತ್ತಿದೆ. ಬೆಳೆ ಇಲ್ಲ. ಬೆಳೆಗೆ ಬೆಲೆ ಇಲ್ಲ. ಸಾಲಗಾರ ಬಂದು ಹೆಂಡತಿಯ ಸೀರೆ ಎಳೆದು ನಿಂತಾಗ ಸ್ವಾಭಿಮಾನಿ ರೈತ ಕುಸಿದುಬೀಳುತ್ತಾನೆ. ಬೆಳೆಗೆ ಸಿಂಪಡಿಸಲು ತಂದ ಕೀಟನಾಶಕವನ್ನೇ ಸೇವಿಸಿ ತನ್ನನ್ನು ನಾಶ ಮಾಡಿಕೊಳ್ಳುತ್ತಾನೆ.

ರೈತ ಉಳಿಯಬೇಕಾದರೆ ವಾಜಪೇಯಿ ಸರ್ಕಾರದ ನೀತಿ ಬದಲಾಗಬೇಕು. ಅದು ಬದಲಾಗದಿದ್ದರೆ ವಾಜಪೇಯಿ ಸರ್ಕಾರ ಬದಲಾಗಬೇಕು. ಕರ್ನಾಟಕದಲ್ಲಿ ರೈತರ ಆತ್ಮಹತ್ಯೆ ತಡೆಯಬೇಕಾದರೆ ರೈತರ ಬಾಕಿ ವಸೂಲಿ ನಿಲ್ಲಬೇಕು. ಅವನಸಾಲ ಮನ್ನಾ ಆಗಬೇಕು. ಸುಲಿಗೆಖೋರ ಖಾಸಗಿ ಸಾಹುಕಾರರನ್ನು ಜೈಲಿಗೆ ಕಳುಹಿಸಬೇಕು. ಸರ್ಕಾರಿ ಸಾಲ ರೈತನ ನೆರವಿಗೆ ಬರಬೇಕು. ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ ನೀಡಬೇಕು. ರಿಯಾಯ್ತಿ ದರದಲ್ಲಿ ಒಳ್ಳೆಯ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಬೇಕು. ಕೃಷ್ಣ ಸರ್ಕಾರ ಇದಕ್ಕೆ ಒಪ್ಪದಿದ್ದರೆ ಅದು ತೊಲಗಬೇಕು.

ಕೋಮುದ್ವೇಷದ ಕಿಚ್ಚು ಹಚ್ಚುವವರು

ಸೌಹಾರ್ದತೆಯ ಕೇಂದ್ರವಾದ ಬಾಬಾಬುಡನ್‌ಗಿರಿಗೆ ಕೋಮುದ್ವೇಷದ ಕೊಳ್ಳಿ ಇಟ್ಟರು. ರಾಜ್ಯದ ತುಂಬಾ ಗಲಭೆಗಳನ್ನೆಬ್ಬಿಸಿದರು. ಬಂಟ್ವಾಳ ತಾಲೂಕಿನ ಕಲ್ಲಡ್ಕ ಗ್ರಾಮದಲ್ಲಿ ಯೂಸುಫ್ ಎಂಬ ಅಮಾಯಕ ವ್ಯಕ್ತಿಯ ಕೊಲೆಯಾಗಿದೆ. ಸೈಕಲ್ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದ ಈತನಿಗೆ ಯಾರೂ ವೈರಿಗಳಿಲ್ಲ. ಈತನ ಕೊಲೆ ಯಾರಿಂದ ಆಗಿರಬೇಕು ಎಂದು ಜಿಲ್ಲೆಯಲ್ಲಿ ಎಲ್ಲರಿಗೂ ಗೊತ್ತಾಗಿದೆ. ಕೆಲವೇ ದಿನಗಳ ಹಿಂದೆ ಬೆಳಗಿನ ಜಾವ ನಮಾಜಿಗೆ ಹೊರಡಲಿದ್ದ ವ್ಯಕ್ತಿಯೊಬ್ಬನನ್ನು ಮಸೀದಿಯ ಎದುರಿನಲ್ಲಿಯೇ ಕೊಲೆ ಮಾಡುವ ಸಂಚು ಹೂಡಲಾಗಿತ್ತು. ಜಿಲ್ಲೆಯದಕ್ಷ ಪೋಲೀಸ್ ಅಧಿಕಾರಿ ಮಧ್ಯ ರಾತ್ರಿಯಲ್ಲಿ ಕೊಲೆಗೆ ಸಂಚು ನಡೆಸಿದವರನ್ನು ಬಂಧಿಸಿ ಕೊಲೆ ನಡೆಯುವುದನ್ನು ತಪ್ಪಿಸಿದ್ದರು. ಹೀಗೆ ಮುಗ್ಧರನ್ನು ಕೊಲೆ ಮಾಡುವ ಮೂಲಕ ಗಲಭೆಗಳನ್ನು ಹುಟ್ಟುಹಾಕಲು ತೊಗಾಡಿಯಾ ಸಂತತಿಯೊಂದು ಕಾರ್ಯೋನ್ಮುಖವಾಗಿದೆ. ತ್ರಿಶೂಲದ ನೆಪದಲ್ಲಿ ಮಾರಕಾಸ್ತ್ರ ಹಂಚುತ್ತಿದೆ. ಇಂತಹ ಮುಗ್ಧರ ಹತ್ಯೆ ಮಾಡುತ್ತಾ ಹುಬ್ಬಳ್ಳಿಯಲ್ಲೊಂದು ಕೋಟೆಯನ್ನು ಕಟ್ಟಲಾಗಿದೆ. ಮೊನ್ನೆ ತೊಗಾಡಿಯಾ ಮತ್ತು ಮುತಾಲಿಕರ ಜೋಡಿ ವಿಜಾಪುರಕ್ಕೆ ವಕ್ಕರಿಸಿ ಜೋಡು ಗುಮ್ಮಟಕ್ಕೆ ಬಾಂಬ್ ಇಡುವುದನ್ನು ಹೇಳಿಕೊಟ್ಟು ಹೋಗಿದ್ದಾರೆ. ಗುಜರಾತ್‌ನಲ್ಲಿ ಇವರು ಅಮಾಯಕ ರಕ್ತವನ್ನು ಹರಿಸಿ ಓಟಿನ ಬೆಳೆ ಬೆಳೆದಿದ್ದಾರೆ. ನಾವೆಲ್ಲರೂ ಇದನ್ನು ನೋಡುತ್ತಾ ಕೈಕಟ್ಟಿ ಕುಳಿಕೊಂಡರೆ ದೇಶ ಸ್ಮಶಾನವಾಗದೆ ಇರಲಾರದು.

ಈ ತ್ಯಾಗ ಯಾರಿಗಾಗಿ?

ನಮ್ಮ ಸೈನಿಕರು, ರೈತನ ಮಕ್ಕಳು, ಹೊಟ್ಟೆಪಾಡಿಗಾಗಿ ಸೈನ್ಯ ಸೇರಿದ್ದರೂ ದೇಶದ ಗಡಿರಕ್ಷಣೆಗಾಗಿ ಯಾವ ತ್ಯಾಗಕ್ಕೂ ಸಿದ್ಧರಾಗಿದ್ದವರು. ಅಮೇರಿಕದ ದೊರೆಗಳನ್ನು ತೃಪ್ತಿಪಡಿಸಲು ವಾಜಪೇಯಿ ನಮ್ಮ ಸೈನಿಕರ ಇರಾಕಿಗೆ ಕಳುಹಿಸಲು ಉತ್ಸುಕರಾಗಿದ್ದಾರೆ. ಸೈನಿಕರು ಆಕ್ರಮಣಕ್ಕೆ ಒಳಗಾದ ಇರಾಕಿನ ಜನತೆಯನ್ನು ಸದೆಬಡಿಯಬೇಕು. ಇರಾಕ್ ಜನತೆಯನ್ನು ಸದೆಬಡಿಯಬೇಕು. ಇರಾಕ್ ಜನತೆಯ ಆಕ್ರೋಶ ನಮ್ಮ ಸೈನಿಕರ ವಿರು ತಿರುಗಿ ಅವರ ಹೆಣಗಳು ಕಾರ್ಗಿಲ್ ಯು ಸಮಯದಲ್ಲಿ ಆದಂತೆ ಸಾಲುಸಾಲಾಗಿ ಬರತೊಡಗಿದರೆ ಮುಂಬರುವ ಚುನಾವಣೆಯಲ್ಲಿ ತಮಗೆ ಲಾಭವಾಗಬಹು ಎಂದು ಲೆಕ್ಕಾಚಾರ ಮಾಡುತ್ತಿರುವ ವಾಜಪೇಯಿ, ಅಡ್ವಾಣಿ, ಫರ್ನಾಂಡಿಸರ ಏನನ್ನಬೇಕು. ಇವರು ಮನುಷ್ಯರಾ?

ಸತ್ಯ ಸಾರಿ ಹೇಳಲು ಹೊಂಟೀವಿ

ದೇಶದಲ್ಲಿ ಸಾವಿನ ಸುಗ್ಗಿ ನಿಲ್ಲಬೇಕಾದು ಇಂತಹ ಸರ್ಕಾರಗಳು ತೊಲಗಲೇಬೇಕು.

ಸಿಪಿಐ(ಎಂ) ಜನತೆಗೆ ಸತ್ಯವನ್ನು ಹೇಳ ಹೊರಟಿದೆ. ಜನತೆ ಮತೀಯ ಪೊರೆಯನ ಕಿತ್ತುಹಾಕಿ ಪರಿಸ್ಥಿತಿಯನ್ನು ಮನಗಾಣಬೇಕ ದೇಶದ ಸ್ವಾತಂತ್ರ್ಯ ಸ್ವಾವಲಂಬನೆ ಉಳಿಯಬೇಕು. ದೇಶದ ಏಕತೆ, ಸಮಗ್ರ ಬಲಗೊಳ್ಳಬೇಕು. ಅಮೆರಿಕದ ಕಿರಿಯ ಪಾಲುದಾರನಾಗಲು ಹೊರಟಿರುವ ವಾಜಪೇಯಿ ಸರ್ಕಾರದ ಹಾಗೂ ವಿಶ್ವಬ ಗುಲಾಮನಾಗಲು ಹೊರಟಿರುವ ಕೃಷ್ಣ ಸರ್ಕಾರಕ್ಕೆ ಲಗಾಮು ಹಾಕಲು ದೇಶದ ಮುಂದಾಗಬೇಕೆಂಬುದೇ ಸಿಪಿಐ(ಎಂ) ಹಮ್ಮಿಕೊಂಡಿರುವ ಜಾಥಾದ ಸಂದೇಶವ

ಬೃಹತ್ ರ್‍ಯಾಲಿಗಳು

ಪ್ರಚಾರಾಂದೋಲನದ ಅಂಗವಾಗಿ

ಬೆಂಗಳೂರಿನಲ್ಲಿ ಸೆಪ್ಟೆಂಬರ್ 9 ರಂದು

ಮತ್ತು

ಸೆಪ್ಟೆಂಬರ್ 18 ರಂದು ಮಂಗಳೂರಿನಲ್ಲಿ

ಎರಡು ಬೃಹತ್ ರ್‍ಯಾಲಿಗಳನ್ನು ಆಯೋಜಿಸಲಾಗಿದ್ದು ದೇಶವ ಉಳಿಸಲು, ಬೆಳೆಸಲು ಬಯಸುವ ಎಲ್ಲಾ ದೇಶಬಾಂಧವರು ಆಂದೋಲನದಲ್ಲಿ ಪಾಲ್ಗೊಳ್ಳಬೇಕೆಂದು ಕೋರುತ್ತೇವೆ.

ನಾಡಿನ ತುಂಬಾ ಜಾಥಾ ನಡಿಗೆ.....

- **ಆಗಸ್ಟ್ 16 ರಂದು ಗುಲ್ಬರ್ಗಾದಲ್ಲಿ** ಉದ್ಘಾಟನೆಯಾಗುವ ಜಾಥಾ ಗುಲ್ಬರ್ಗಾ, ಬೀದರ್, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಸಂಚರಿಸಿ **25 ರಂದು ಲಿಂಗಸಗೂರಿನ ಹಟ್ಟಿಯಲ್ಲಿ** ಮುಕ್ತಾಯವಾಗಲಿದೆ.
- **ಆಗಸ್ಟ್ 17** ರಂದು ಹೊಸಪೇಟೆಯಿಂದ ಹೊರಡುವ ಜಾಥಾ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ಹಾದು **ಆಗಸ್ಟ್ 28 ರಂದು ಹಗರಿಬೊಮ್ಮನಹಳ್ಳಿಯಲ್ಲಿ** ಕೊನೆಗೊಳ್ಳುವುದು.
- **ಆಗಸ್ಟ್ 18 ರಂದು ಚಿಕ್ಕಮಗಳೂರಿನಲ್ಲಿ** ಉದ್ಘಾಟನೆಯಾಗುವ ಜಾಥಾ ಚಿಕ್ಕಮಗಳೂರು, ಹಾಸನ, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಕ್ರಮಿಸಿ **27 ರಂದು ಕೋಲಾರದಲ್ಲಿ** ಸಮಾಪ್ತಿಯಾಗುವುದು.
- **ಆಗಸ್ಟ್ 20 ರಂದು ಮೈಸೂರಿನಿಂದ** ಹೊರಡುವ ಜಾಥಾ ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳಲ್ಲಿ ಹಾದು **29 ರಂದು ಬೆಂಗಳೂರಿನಲ್ಲಿ** ಕೊನೆಯಾಗುವುದು.
- **ಆಗಸ್ಟ್ 21 ರಂದು ದಾಂಡೇಲಿಯಿಂದ** ಹೊರಡುವ ಜಾಥಾ ಉತ್ತರ ಕನ್ನಡ, ಹಾವೇರಿ, ಧಾರವಾಡ, ಗದಗ, ಬೆಳಗಾಂವ, ಬಾಗಲಕೋಟೆ, ವಿಜಾಪುರ ಜಿಲ್ಲೆಗಳಲ್ಲಿ ಸಂಚರಿಸಿ **26 ರಂದ ವಿಜಾಪುರದಲ್ಲಿ** ಮುಕ್ತಾಯವಾಗುವುದು.
- **ಆಗಸ್ಟ್ 24 ರಂದು ಕಾರವಾರದಿಂದ** ಹೊರಡುವ ಕರಾವಳಿ ಜಾಥಾವು ಉತ್ತರ ಕನ್ನಡ, ಉಡುಪಿ ಮತ್ತು ದ.ಕ. ಜಿಲ್ಲೆಗಳಲ್ಲಿ ಸಂಚರಿಸಿ **26 ರಂದು ಮಂಗಳೂರಿನಲ್ಲಿ ಮುಕ್ತಾಯಗೊಳ್ಳುವುದು.**
- **ಅಲ್ಲದೆ ವಿಶೇಷವಾಗಿ ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಆಗಸ್ಟ್ 23 ರಿಂದ ಸೆಪ್ಟೆಂಬರ್ 2 ರವರೆಗೆ ಪಾದಯಾತ್ರೆ.**
- ಆಗಸ್ಟ್ 22 ರಿಂದ 24 ರವರೆಗೆ ಗಂಗಾವತಿಯಿಂದ ಕುಷ್ಟಗಿಯವರೆಗೆ **ಪಾದಯಾತ್ರೆ. ಕೊಡಗು, ಶಿವಮೊಗ್ಗಗಳಲ್ಲಿ ಉಪಜಾಥಾಗಳು ಸಂಚರಿಸಲಿವೆ.**

ಈ ಜಗದ ಕೀಲಿ

ಬುಷ್ ಎಂಬ ಅಮಾನುಷ ವಂಚಕನ
ಕೊಡಬೇಕೆ ನಾವಿಂದು ಈ ಜಗದ ಕೀ
ಈ ಕುರಿತು ಮನುಷ್ಯತ್ವ ಉಳ್ಳವರು
ತುರ್ತಾಗಿ ಒಂದಾಗಿ ವಿಚಾರ ಮಾಡಿ


- ವಿದಾ

ಜಾಗತೀಕರಣ, ಕೋಮುವಾದದ ಅಪಾಯ ಮತ್ತು ಕಾರ್ಮಿಕ ವರ್ಗ

ಈ ಅವಳಿಗಳನ್ನು ಎದುರಿಸಿ ಹೋರಾಡಲು ಸಿಐಟಿಯು ನಿರ್ಧಾರ

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಭೂತಪೂರ್ವವಾಗಿ ಉಲ್ಬಣಿಸಿರುವ ಕೋಮುವಾದಿ ದಾಳಿಗಳು ದೇಶದ ಐಕ್ಯತೆಯನ್ನು ದುರ್ಬಲಗೊಳಿಸುತ್ತಿರುವ ಇಂದಿನ ಸನ್ನಿವೇಶದಲ್ಲಿ ಕೋಮುವಾದದ ವಿರುದ್ಧ ರಾಷ್ಟ್ರವ್ಯಾಪಿ ಚಳುವಳಿಗಳನ್ನು ನಡೆಸುವ ತುರ್ತು ಅವಶ್ಯಕತೆಯನ್ನು ಸಿಐಟಿಯು ಜನರಲ್ ಕೌನ್ಸಿಲ್ ಮನಗಂಡಿದೆ. ಕೋಮುವಾದದ ಅಪಾಯದ ಕುರಿತು ಮಂಡಿಸಲಾದ ಕರಡು ದಸ್ತಾವೇಜು ಮತ್ತು ಅದರ ಆಧಾರದಲ್ಲಿ ಜರುಗಿದ ಸುಧೀರ್ಘ ವಿಶೇಷ ಚರ್ಚೆಯು ಇಡೀ ದೇಶದಲ್ಲಿ ಕಾರ್ಮಿಕ ವರ್ಗ ಮತ್ತು ಜನಸಾಮಾನ್ಯರ ಐಕ್ಯತೆಯ ಮೇಲೆ ಎದುರಾಗಿರುವ ಗಂಡಾಂತರಗಳನ್ನು ಜನರಲ್ ಕೌನ್ಸಿಲ್‌ನ ಮುಂದೆ ಎಳೆ ಎಳೆಯಾಗಿ ಬಿಡಿಸಿಟ್ಟವು. ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ಕೋಮುವಾದ ಭಾರತದ ಕಾರ್ಮಿಕ ವರ್ಗದ ಮೇಲೆ ಏಕಕಾಲದಲ್ಲಿ ದಾಳಿ ಮಾಡುತ್ತಿರುವ ಅವಳಿ ಅಪಾಯಗಳಾಗಿದ್ದು ಇವುಗಳ ಪೈಕಿ ಯಾವುದನ್ನು ಕ್ಷಣಕಾಲವೂ ನಿರ್ಲಕ್ಷಿಸುವಂತಿಲ್ಲ ಎಂಬುದನ್ನು ಚರ್ಚೆಗಳು ತೋರಿಸಿಕೊಟ್ಟವು.

ಕರಡು ದಸ್ತಾವೇಜನ್ನು ಮಂಡಿಸುತ್ತಾ ಮಾತನಾಡಿದ ಸಿಐಟಿಯು ಕಾರ್ಯದರ್ಶಿಗಳಲೊಬ್ಬರಾದ ಕಾಮ್ರೇಡ್ ಕನ್ನೈ ಬ್ಯಾನರ್ಜಿಯವರು, ಕೋಮುವಾದವು ಕಾರ್ಮಿಕವರ್ಗದ ಐಕ್ಯತೆಯನ್ನು ಒಡೆಯುತ್ತಿರುವ ಕುರಿತು ಗಂಭೀರ ಕಳವಳ ವ್ಯಕ್ತಪಡಿಸಿದರು. ಗುಜರಾತ್ ಗಲಭೆಗಳಂತಹ ಅನೇಕ ಘಟನೆಗಳಲ್ಲಿ ಒಂದು ಕೋಮಿನ ಕಾರ್ಮಿಕರು ಇನ್ನೊಂದು ಕೋಮಿನ ಕಾರ್ಮಿಕರನ್ನು ಬರ್ಬರವಾಗಿ ಹತ್ಯೆಗೈದಿದ್ದಾರೆ. ಕಾರ್ಮಿಕವರ್ಗದ ಚಳುವಳಿಗಳಲ್ಲಿ ದೀರ್ಘಕಾಲದಿಂದ ಉಳಿದುಕೊಂಡಿರುವ ದೌರ್ಬಲ್ಯವು ಈ ಅಪಾಯಕಾರಿ ಘಟನೆಗಳ ಕಾರಣಗಳಲ್ಲಿ ಒಂದಾಗಿದೆ. ನಮ್ಮ ದೇಶದ ಕಾರ್ಮಿಕವರ್ಗದ ಬೃಹತ್ ವಿಭಾಗಗಳು ಇನ್ನೂ ವರ್ಗ ಪ್ರಜ್ಞೆಯನ್ನು ಹೊಂದಿಲ್ಲದಿರುವುದರಿಂದ ಅವುಗಳು ಕೋಮುವಾದಿ ಶಕ್ತಿಗಳ ಪ್ರಭಾವಕ್ಕೆ ಒಳಗಾಗುತ್ತಿವೆ. ಬ್ರಿಟಿಷ್ ಆಡಳಿತದ ಕಾಲದಲ್ಲಿ ಮತ್ತು ಸ್ವಾತಂತ್ರ್ಯ ದೊರೆತ ನಂತರದ ಆರಂಭದ ವರ್ಷಗಳಲ್ಲಿ ಕೋಮುವಾದಿಗಳ ಪ್ರಭಾವವು ಕೆಲವು ನಗರ ಪ್ರದೇಶಗಳ ಪುಟ್ಟ ಬಂಡವಾಳಶಾಹಿಗಳು, ಪಾಳೇಗಾರಿ ಭೂಮಾಲೀಕರು ಮತ್ತು ದೊಡ್ಡ ವ್ಯಾಪಾರಿಗಳಿಗೆ ಸೀಮಿತವಾಗಿತ್ತು. ಆದರೆ ಇಂದು ಕೋಮುವಾದಿಗಳು ಸಮಾಜದ ಅತ್ಯಂತ ಕೆಳಸ್ತರದ ಜನರನ್ನು ತಮ್ಮ ಬಲೆಗೆ ಹಾಕಿಕೊಂಡಿರುವುದು ಒಂದು ಗಂಭೀರ ಬೆಳವಣಿಗೆಯಾಗಿದೆ. ಕೋಮು ಗಲಭೆಗಳಲ್ಲಿ ಭಾಗವಹಿಸುವವರು ಮತ್ತು ಅವುಗಳಿಗೆ ಬಲಿಯಾಗುವವರು ಬಹುತೇಕ ಬಡವರು. ಒಂದು ಕೋಮು ಗಲಭೆ ಆದ ತಕ್ಷಣ ಬಡಜನರಲ್ಲಿ 'ನಾವು' ಮತ್ತು 'ಅವರು' ಎಂಬ ಭಾವನೆ ಬೆಳೆದುಬಿಡುತ್ತದೆ ಮತ್ತು ಆ ಕ್ಷಣದ ತನಕ ಇದ್ದ ಸೌಹಾರ್ದತೆಯು ಮಾಯವಾಗಿ ಬಿಡುತ್ತದೆ.



ಭಾರತದಲ್ಲಿ ಕೋಮುವಾದವು ರಾಜಕೀಯ ಅಧಿಕಾರವನ್ನು ಪಡೆಯುವ ಆಯುಧವಾಗಿ ಬೆಳೆದು ನಿಂತಿದೆ. ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದಗಳೆರಡೂ ಒಂದನ್ನೊಂದು ತಿಂದು ಬದುಕುವ ಪಿಡುಗುಗಳಾಗಿವೆ. ಇವುಗಳು ಪರಸ್ಪರರನ್ನು ಶತ್ರುಗಳೆಂದು ಸಾರುತ್ತವೆ. ಈ ಪ್ರಕ್ರಿಯೆಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಜನರ ಮೇಲೆ ಪ್ರಭಾವ ಬೀರಲು ಶಕ್ತವಾದ ಬಹುಸಂಖ್ಯಾತ ಹಿಂದೂ ಕೋಮುವಾದವು ತನ್ನ ರಾಜಕೀಯ ಪಕ್ಷವಾದ ಬಿಜೆಪಿಯು ಕೇಂದ್ರದಲ್ಲಿ ಹೊಂದಿರುವ ಅಧಿಕಾರವನ್ನು ಬಳಸಿಕೊಳ್ಳುವುದರಿಂದಾಗಿ ಅದು ಹೆಚ್ಚು ಅಪಾಯಕಾರಿಯಾಗಿದೆ ಎಂದು ಅವರು ಒತ್ತಿ ಹೇಳಿದರು. ಸಂಘಪರಿವಾರವು ಸುಳ್ಳು, ಮೋಸ, ಧಾರ್ಮಿಕ ಭೋಧನೆಗಳ ತಪ್ಪು ವಿಶ್ಲೇಷಣೆ, ತಪ್ಪು ಮಾಹಿತಿ, ಚರಿತ್ರೆಯ ವಿಕೃತಿ, ಇತ್ಯಾದಿಗಳನ್ನು ಅಸ್ತ್ರಗಳನ್ನಾಗಿ ಬಳಸುತ್ತಿವೆ ಎಂದು ಅವರು ವಿವರಿಸಿದರು.

ಕೋಮುವಾದದ ವಿರುದ್ಧ ಆರ್ಥಿಕ, ರಾಜಕೀಯ ಮತ್ತು ಸೈದ್ಧಾಂತಿಕ ರಂಗಗಳಲ್ಲಿ ಹೋರಾಟ ನಡೆಸಬೇಕೆಂದು ದಸ್ತಾವೇಜು ಒತ್ತಿ ಹೇಳಿದೆ.

ವಿವಿಧ ರಾಜ್ಯಗಳ ಜನರಲ್ ಕೌನ್ಸಿಲ್ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ತಮ್ಮ ತಮ್ಮ ರಾಜ್ಯಗಳಲ್ಲಿನ ಪರಿಸ್ಥಿತಿಗಳನ್ನು ವಿವರಿಸಿದರು. ಕಾರ್ಮಿಕ ವರ್ಗವು ಉನ್ನತ ಮಟ್ಟದ ವರ್ಗಪ್ರಜ್ಞೆ ಹೊಂದಿರುವ ಪಶ್ಚಿಮಬಂಗಾಳ, ತ್ರಿಪುರ ಮತ್ತು ಕೇರಳದಲ್ಲಿ ಕೋಮುವಾದಿಗಳನ್ನು ಸ್ವಲ್ಪಮಟ್ಟಿಗೆ ತಡೆಯಲು ಸಾಧ್ಯವಾಗಿದೆ. ವರ್ಗಪ್ರಜ್ಞೆಯನ್ನು ಬೆಳೆಸುವುದೇ ಕಾರ್ಮಿಕ ಸಂಘಟನೆಗಳ ಮುಂದಿರುವ ಪ್ರಮುಖ ಕರ್ತವ್ಯವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಉದ್ಯೋಗಾವಕಾಶಗಳಿಗಾಗಿ, ಕನಿಷ್ಠಕೂಲಿಗಾಗಿ ಮತ್ತು ಅಸಂಘಟಿತ ಕಾರ್ಮಿಕರ ಬದುಕಿನ ಭದ್ರತೆಗಾಗಿ ಹೋರಾಟಗಳನ್ನು ನಡೆಸುವ ಮೂಲಕ ವಿಶಾಲ ಜನಸಮೂಹಗಳನ್ನು ಕೋಮುವಾದಿಗಳ ಪ್ರಭಾವದಿಂದ ದೂರವಿರಿಸಲು ಮತ್ತು ಜಾತ್ಯಾತೀತತೆಗಾಗಿ ದುಡಿಯಲು ಕಾರ್ಮಿಕ ಸಂಘಟನೆಗಳು ದುಡಿಯಬೇಕೆಂಬುದು ಬಹುತೇಕ ಕಾರ್ಮಿಕ ಸಂಗಾತಿಗಳ ಅಭಿಪ್ರಾಯವಾಗಿತ್ತು. ಜನತೆಯ ಧಾರ್ಮಿಕ ಪ್ರಜ್ಞೆಯನ್ನೂ ಅವರ ರಾಷ್ಟ್ರೀಯತೆಯ ಭಾವನೆಯನ್ನು ವಿಕೃತ ಪ್ರಚಾರಗಳ ಮೂಲಕ ಕೆರಳಿಸುವ ಕೋಮುವಾದಿಗಳ ಹುನ್ನಾರಗಳನ್ನು ಬಯಲಿಗೆಳೆಯಬೇಕೆಂದೂ ಸಂಗಾತಿಗಳು ಸೂಚಿಸಿದರು.

ಕರ್ನಾಟಕದ ಜನರಲ್ ಕೌನ್ಸಿಲ್ ಸದಸ್ಯರ ಪರವಾಗಿ ಮಾತನಾಡಿದ ಕಾಂ.ಬಿ.ಮಾಧವ ಅವರು ದಸ್ತಾವೇಜನ್ನು ಬೆಂಬಲಿಸುತ್ತಾ, ಕೋಮುವಾದವನ್ನು ಎದುರಿಸುವ ಅಂಗವಾಗಿ ಕಾರ್ಮಿಕವರ್ಗದಲ್ಲಿ ವರ್ಗ ಪ್ರಜ್ಞೆಯ ಜತೆಗೇ ವೈಜ್ಞಾನಿಕ ಮನೋಭಾವವನ್ನೂ ಬೆಳೆಸಬೇಕೆಂದು ಸೂಚಿಸಿದರು.

ಚರ್ಚೆಗಳಲ್ಲಿ ವ್ಯಕ್ತವಾದ ಅಸಂಖ್ಯ ಸೂಚನೆಗಳ ಹಿನ್ನೆಲೆಯಲ್ಲಿ ದಸ್ತಾವೇಜನ್ನು ಸೂಕ್ತ ತಿದ್ದುಪಡಿಗಳೊಂದಿಗೆ ಅಂತಿಮಗೊಳಿಸಲು ಸಭೆಯು ಕಾರ್ಯದರ್ಶಿ ಮಂಡಳಿಗೆ ಅಧಿಕಾರ ನೀಡಿತು.

ಬಿ.ಮಾಧವ
ಸಿಐಟಿಯು, ರಾಜ್ಯಾಧ್ಯಕ್ಷರು

ಹಸಿವನ್ನು ಹಿಂಗಿಸಲು ಮಗುವನ್ನು ಮಾರಿದರು

ರೈಲ್ವೆ ಇಲಾಖೆಯಲ್ಲಿ ಕಾಮಗಾರಿ ಮುಗಿದು ಕೆಲಸ ಕಳೆದುಕೊಂಡರು ಅವರು. ಹಸಿವ ಹಿಂಗಿಸಲು ನೀರು ಕುಡಿದರು, ಉಪವಾಸ ಮಲಗಿದರು, ಕೊನೆಗೆ ಕರುಳ ಬಳ್ಳಿಯನ್ನೇ ಮಾರಿದರು. ಮಿಡಲು ಸಂಪತ್ತಿನ ಈ ಕೋಟೆಯಲ್ಲೀಗ ಆಕ್ರಂದನೆಗಳ ಮೊರೆತ...

ಜಾಗತೀಕರಣದಿಂದ ಎಲ್ಲೆಲ್ಲೂ ಬಡಜನರ ಬಾಳ ಹೃದಯವಿದ್ರಾವಕ ಘಟನೆಗಳು ಕಂಡುಬರುತ್ತಿರುವಂತೆ ಮಂಗಳೂರಿನ ಸುತ್ತಮುತ್ತಲೂ ಕಂಡುಬರುತ್ತಿವೆ. ಹಸಿವಿನಿಂದ ಸತ್ತವರು, ಸಾಮೂಹಿಕ ವಿಷಪ್ರಾಸನಕ್ಕೆ ಬಲಿಗಾದವರು ನೇಣಿಗೆ ಗೋಣ ಕೊಟ್ಟವರು. ಕಾಯಿಲೆಗೆ ಒಳಗಾಗಿ ಔಷಧಕ್ಕೆ ತಾಕತ್ತಿಲ್ಲದೆ ಕಾಡಿಗೆ ಹೋದವರು; ಕೀಟನಾಶಕ ಸೇವಿಸಿದರು. ಕೂಲಿ ಇಲ್ಲದೆ ಬೀದಿ ಬದಿ ನಿಂತವರು ಅಸಂಖ್ಯಾತ ಸಂಖ್ಯೆಯಲ್ಲಿ ಇವೆ. ಜಾಗತೀಕರಣದಿಂದಾಗಿ ವ್ಯಾಪಾರ ನಷ್ಟಗೊಂಡು 150 ಮಿಕ್ಕಿ ಚಿನ್ನದ ಕೆಲಸಗಾರರು ಸ್ವಯಂ ದೇಹ ಹತ್ಯೆ ಮಾಡಿಕೊಂಡಿದ್ದಾರೆಂದು ಪತ್ರಿಕೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ವರದಿಯಾಗಿವೆ.

ಇದು ಅನಿವಾರ್ಯವಲ್ಲ. ನಮ್ಮನ್ನಾಳುವವರ ಪ್ರೇರಣೆ. ಇಂತಹ ದುಃಸ್ಥಿತಿಗೆ ಸಮಾಜವನ್ನು ತಳ್ಳುತ್ತಿರುವಾಗಲೇ ಭವಿಷ್ಯ ಕರಾಳವಾಗುವ ಎಲ್ಲಾ ಪ್ರಯೋಗಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡುಬರುತ್ತಿದೆ. ಕೃಷಿ ಆಧಾರಿತ ರಂಗದಲ್ಲಿ ಉದ್ಯೋಗವಿಲ್ಲ. ಬೀಡಿ ಉದ್ಯಮದ ಪರಿಸ್ಥಿತಿ ಉತ್ತಮವಾಗಿಲ್ಲ. ಹಂಚುಗೇರು ಸಂಪೂರ್ಣವಾಗಿ ನಷ್ಟಕ್ಕೆ ಒಳಗಾಗಿ ಮುಚ್ಚಿಕೊಂಡಿದೆ. ಬೈಕಂ ಪಾಡಿ, ಯೆಯ್ಯಾಡಿಯಲ್ಲಿರುವ ಇಂಡಸ್ಟ್ರಿಯಲ್ ಎಸ್ಟೇಟ್‌ನ ಉದ್ದಿಮೆಗಳು ಸಾಕಷ್ಟು ಸಂಖ್ಯೆಯಲ್ಲಿ ಮುಚ್ಚಿಕೊಂಡಿದೆ. ಕರಾವಳಿಯ ಉದ್ದಗಲಕ್ಕೂ ಇದ್ದ ಗೇರುಗಳ ಉದ್ಯಮಗಳು ಎಪ್ಪತ್ತಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮುಚ್ಚಿಕೊಂಡಿದ್ದು ಕೇವಲ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿ ಮಾತ್ರ ಉಳಿದುಕೊಂಡಿವೆ.

ಹೃದಯವಿದ್ರಾವಕ

ಜಾಗತೀಕರಣದ ವಿರುದ್ಧವಾಗಿ ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿಗೆ ತೊಂದರೆಗೆ ಒಳಗಾಗಿ ಹೋರಾಟ ರೂಪಿಸಿದ ಸಣ್ಣ ಪಾನೀಯ ತಯಾರಿಕಾ ಘಟಕಗಳು ಕೂಡಾ ಸಾಕಷ್ಟು ಸಂಖ್ಯೆಯಲ್ಲಿ ಮುಚ್ಚಿಕೊಂಡಿವೆ. ಇವೆಲ್ಲವುಗಳು ನಡೆಯುತ್ತಿರುವಾಗಲೇ ಹಸಿವನ್ನು ಹಿಂಗಿಸಲು ಮಗುವನ್ನು ಮಾರಿದ ಹೃದಯವಿದ್ರಾವಕ ಘಟನೆಯೊಂದನ್ನು ಸಂಜೆ ಪತ್ರಿಕೆಯೊಂದು ವರದಿ ಮಾಡಿದೆ.

ಕಾಸರಗೋಡು ಜಿಲ್ಲೆಯ ಉಪ್ಪಳ ಮಂಗಳೂರಿನಿಂದ ಕೇವಲ 28 ಕಿ.ಮೀ ದೂರದಲ್ಲಿದ್ದು 5 ವರ್ಷಗಳ ಹಿಂದೆ ಕುಂದಾರಪುರದಿಂದ ರೈಲ್ವೆಗಳ ನಿರ್ಮಾಣ ಕಾಮಗಾರಿಗೆಂದು ವಿಶ್ವ ಮತ್ತು ರಾಧಾ ದಂಪತಿಗಳು ಆಗಮಿಸಿ ಬಾಡಿಗೆ ಕೊಠಡಿಯಲ್ಲಿ ವಾಸವಾಗಿದ್ದರು. ರೈಲ್ವೇ ಕಾಮಗಾರಿ ಮುಗಿಯುತ್ತಿದ್ದಂತೆ ನಿರುದ್ಯೋಗ ಸಮಸ್ಯೆ ಆವರಿಸಿ 4 ಮಕ್ಕಳ ಈ ಸಂಸಾರ ಬಾಡಿಗೆ ಮನೆಯಿಂದಿ ಬೀದಿಗೆ ತಳ್ಳಲ್ಪಟ್ಟಿತು. ಈ ಮಳೆಗಾಲದ ಆರ್ಭಟಕ್ಕೆ ಅತ್ತ ಉದ್ಯೋಗವೂ ಇಲ್ಲದೆ ಅನಿವಾರ್ಯವಾಗಿ ಗುಜರಿ ಹೆಕ್ಕುವ ಕೆಲಸಕ್ಕೆ ಪ್ರಾರಂಭಿಸಿತು ಕುಟುಂಬ. ಆದರೂ ಸಹ ಹಸಿವೆಯಿಂದ ಮಕ್ಕಳ ಹಸಿವು ಹಿಂಗಿಸಲು ಸಾಧ್ಯವಾಗಲಿಲ್ಲವೆಂದು ಹೇಳಲಾಗುತ್ತಿದೆ. ಪರಿಣಾಮವಾಗಿ ಕಾಯಿಲೆಗೆ ಒಳಗಾದ ಮಕ್ಕಳು ಕೆಲವಾರು ದಿನ ನೀರು ಕುಡಿದೇ ದಿನವನ್ನು ಕಳೆದಿದ್ದಾರೆ ಎಂದು ಹೇಳಲಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಮುಂಬೈ ಮೂಲಕ ನೂರ್‌ಜಹಾನ್ ಎಂಬ ಮಹಿಳೆಗೆ ತಮ್ಮ ಒಂದೂವರೆ ವರ್ಷದ ಮಗುವನ್ನು 1000 ರೂಪಾಯಿಗೆ ಮಾರಿ ಆ ಬಗ್ಗೆ ವಿಕ್ರಯದ ದಾಖಲೆ ಪತ್ರಕ್ಕೆ ಸಹಿ ಮಾಡಿದ್ದಾರೆ. ಮತ್ತೆ ತಾತ್ಕಾಲಿಕವಾಗಿ ಹಸಿವು ಶಮನಗೊಂಡಿದೆಯಾದರೂ ಅವರ ಹಸಿವಿಗೆ ಉದಾರೀಕರಣ ನೀಡುವ ಉತ್ತರ 'ಸಾಮೂಹಿಕ ಸ್ವಯಂ ದೇಹಹತ್ಯೆ' ಯಾಗಿರುವುದರಲ್ಲಿ ಸಂದೇಹವೇ ಇಲ್ಲದಾಗಿದೆ.

ಕಿಶನ್ ತಲಪ್ಪಾಡಿ, ಮಂಗಳೂರು

ಭಾರತ ಔಷಧಿ ಕ್ಷೇತ್ರದಲ್ಲಿ ಸಾಧಿಸಿದ್ದೇನು? ಸಾಧಿಸಬೇಕಾದುದ್ದೇನು?



ಔಷಧಿ ಕ್ಷೇತ್ರದ ಸಾಧನೆ, ಜನಾರೋಗ್ಯ ಸುಧಾರಣೆ ಹಾಗೂ ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರುತ್ತದೆ. ಔಷಧಿ ಕ್ಷೇತ್ರದ ಸಾಧನೆಯೆಂದರೆ ಅಗತ್ಯ ಔಷಧಿಗಳು ದೊರಕಿಕೊಂಡುಕೊಳ್ಳಲು ಸಾಧ್ಯವಾಗುವುದು. ಅನಗತ್ಯ ಔಷಧಿಗಳು ಮಾರುಕಟ್ಟೆಯಲ್ಲಿ ದೊರಕದೇ ಇರುವುದು, ಭಾರತೀಯ ಕಂಪನಿಗಳು ಔಷದಿ ತಯಾರಿಸಿ ಸ್ವಾವಲಂಬನೆ ಸಾಧಿಸುವುದು.

1952 ರಲ್ಲಿ ಅಮೆರಿಕದ ಸೆನೇಟರ್ ಕೆಫವೂರ್ ನೇತೃತ್ವದ ಸಮಿತಿಯ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಔಷಧಿಗಳ ಬೆಲೆ ಇತರೇ ದೇಶಕ್ಕೆ ಹೋಲಿಸಿದರೆ ಅತಿ ಹೆಚ್ಚು ಎಂದು ಕಂಡುಬಂದಿತ್ತು. ಆ ಸಮಯದಲ್ಲಿ ನಮ್ಮಲ್ಲಿ ಅಗತ್ಯ ಔಷಧಿಗಳಿಗಿಂತ ಅನಗತ್ಯ ಔಷಧಿಗಳೇ ಹೆಚ್ಚಾಗಿ ದೊರಕುತ್ತಿದ್ದವು. ಔಷಧಿ ಕ್ಷೇತ್ರ ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿತ್ತು ಹಾಗೂ ಭಾರತೀಯ ಕಂಪನಿಗಳು ಪೈಪೋಟಿ ಎದುರಿಸುವ ಸ್ಥಿತಿಯಲ್ಲಿರಲಿಲ್ಲ. ಅಂದಿನಿಂದ ಇಲ್ಲಿಯವರೆಗೆ (2003) ಔಷಧಿ ಕ್ಷೇತ್ರದಲ್ಲಿ ಭಾರತದ ಸಾಧನೆ :

ಸಾರ್ವಜನಿಕ ಔಷಧಿ ಉದ್ಯಮದ ಸ್ಥಾಪನೆ (1956-60) ಐಡಿಪಿಎಲ್ ಹಾಗೂ ಎಚ್‌ಎಎಲ್ ಕಂಪನಿಗಳು ಭಾರತಕ್ಕೆ ಅಗತ್ಯವಾದ ಆಂಟಿ ಬಯಾಟಿಕ್, ಕ್ಷಯರೋಗದ ಔಷಧಿಗಳನ್ನು ತಯಾರಿಸಿದವು. ಈ ಪ್ರಯತ್ನದಲ್ಲಿ ಭಾರತದ ಬಹುರಾಷ್ಟ್ರೀಯ ಕಂಪನಿಗಳು ಸಹಕರಿಸಲಿಲ್ಲ. ಈ ಬೆಳವಣಿಗೆಯ ಪರಿಣಾಮವಾಗಿ ಔಷದಿ ಬೆಲೆಗಳು ಕಡಿಮೆಯಾಗಿ, ಜನಸಾಮಾನ್ಯರಿಗೆ ಔಷಧಿಗಳು ದೊರಕುವಂತಾಯಿತು. 12 ವರ್ಷದ ಸುದೀರ್ಘ ಚರ್ಚೆಯ ನಂತರ ಜಾರಿಗೆ ಬಂದ ಭಾರತೀಯ ಪೇಟೆಂಟ್ ಕಾನೂನು 1970, ಭಾರತದಲ್ಲಿ ಕಂಪನಿಗಳಿಗೆ ವಸ್ತುಸ್ವಾಮ್ಯ (Product Patent) ವನ್ನು ರದ್ದುಗೊಳಿಸಿ, ವಿಧಾನ ಸ್ವಾಮ್ಯ (Process Patent) ವನ್ನು ಜಾರಿಗೊಳಿಸಿತು. ಇದರ ಪರಿಣಾಮವಾಗಿ ಭಾರತ ಸುಮಾರು 100 ಅಗತ್ಯ ಔಷಧಿಗಳನ್ನು ತಯಾರಿಸುವ ಸಾಮರ್ಥ್ಯವನ್ನು ಪಡೆಯಿತು ಹಾಗೂ ಸ್ವಾವಲಂಬನೆಯತ್ತ ಕಾಲಿಟ್ಟಿತು.

1974 ರ ಹಾಥೀ ಸಮಿತಿ ವರದಿ ಔಷಧಿ ಕ್ಷೇತ್ರದ ವೈಜ್ಞಾನಿಕ ಅಧ್ಯಯನವನ್ನು ಮಾಡಿ, ಔಷಧಿ ಕ್ಷೇತ್ರವನ್ನು ಸುಧಾರಿಸಲು ಸಹಾಯ ಮಾಡಿತು.

ಭಾರತ ಸಾಧಿಸದೇ ಇದ್ದುದ್ದೇನು?


ಜನಪರ ಔಷಧಿ ನೀತಿ: ಭಾರತ ಹಾಥೀ ವರದಿಯ ಶಿಫಾರಸ್ಸನ್ನು ತಿರಸ್ಕರಿಸಿ 1978 ರ ಔಷಧಿ ನೀತಿಯನ್ನು ಜಾರಿಗೊಳಿಸಿತು. ನಂತರದ (86, 94, 02) ನೀತಿಗಳು ಜನಪರ ಔಷದಿ ನೀತಿಯಾಗದೆ, ಉದ್ಯಮಪರ ನೀತಿಗಳಾದವು. ಇದರ ಪರಿಣಾಮವೇ ಅನಗತ್ಯ ಔಷಧಿಗಳ ಹೆಚ್ಚಳ, ಔಷಧಿ ಬೆಲೆಗಳ ಹೆಚ್ಚಳ. ಪೇಟೆಂಟ್ ನೀತಿಯ ಬದಲಾವಣೆ : ಭಾರತ 1970 ರ ಪೇಟೆಂಟ್ ನೀತಿಯನ್ನು ಬದಲಿಸುವುದಾಗಿ ಸಹಿ ಹಾಕಿದೆ ಹಾಗೂ ಆ ನೀತಿ 2005 ರ ಹೊತ್ತಿಗೆ ಜಾರಿಗೆ ಬರುತ್ತದೆ. ಆ ನೀತಿ ಬಹುರಾಷ್ಟ್ರೀಯ ಕಂಪನಿಗಳಿಗೆ ಸಹಾಯಕವಾಗುವುದರಿಂದ ನಾವ ಸ್ವಾವಲಂಬನೆಯನ್ನು ಕೈಬಿಟ್ಟಂತೆ.

ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟಿನ ಛೀಮಾರಿ

ಭಾರತದ ಸುಪ್ರೀಂ ಕೋರ್ಟ್ ಭಾರತ ಸರ್ಕಾರಕ್ಕೆ ಛೀಮಾರಿ ಹಾಕಿದೆ. ವಿಷಯವೇನೆಂದರೆ ಜೀವನ ಉಳಿಸುವ ಔಷಧಿಗಳನ್ನು ಆ ಗುಂಪಿನಲ್ಲಿ ಸೇರಿಸದೇ ಇರುವುದು.

ಜೀವವುಳಿಸುವ ಔಷಧಿಗಳನ್ನು ಒಂದು ಪ್ರತ್ಯೇಕ ಗುಂಪಿನಲ್ಲಿ ಸೇರಿಸಿ ಅವುಗಳ ಬೆಲೆಗಳನ್ನು ನಿಯಂತ್ರಣದಲ್ಲಿ ಡುವುದು ಬಂಡವಾಳಶಾಹಿ ವ್ಯವಸ್ಥೆಯ ಪದ್ಧತಿ. ಇಲ್ಲವಾದರೆ ಬಂಡವಾಳಶಾಹಿಗಳು ಈ ಔಷಧಿಗಳ ಬೆಲೆಗಳಲ್ಲೇ ಆಕಾಶ ದೆತ್ತರಕ್ಕೆ ಏರಿಸಿ ಜನರು ಸಾಯುವಂತೆ ಮಾಡಿಬಿಡುತ್ತಾರೆ.

ಇಂತಹ ಅವಘಡಗಳನ್ನು ತಪ್ಪಿಸಲು ಬೆಲೆಗಳ ನಿಯಂತ್ರಣ ಮಾಡಲಾಗುತ್ತದೆ. ಟೈಫಾಯಿಡ್, ಹಿಪಾಟೆಟಿಸ್ ಎ, ಹೃದಯಸ್ತಂಭನಕ್ಕೆ ಬಳಸುವ ಔಷಧಿಗಳನ್ನು ಔಷದಿ ನಿಯಂತ್ರಣ ಆಜ್ಞೆಯ ಅಡಿ ತರಲಾಗಿಲ್ಲ. ಆದ್ದರಿಂದಲೇ ಸುಪ್ರೀಂ ಕೋರ್ಟ್ ಇಂತಹ ಆಜ್ಞೆ ನೀಡಿದೆಯಲ್ಲದೆ, ಈ ದಿಸೆಯಲ್ಲಿ ಸರಿಯಾದ ಕ್ರಮಗಳನ್ನು ಕೈಗೊಳ್ಳದೇ ಹೋದಲ್ಲಿ ಈ ವಿಷಯದಲ್ಲಿ ನ್ಯಾಯಾಂಗೀಯ ತೀರ್ಪನ್ನು ನೀಡುತ್ತೇವೆ ಎಂದೂ ಅದು ಹೇಳಿದೆ.



ಮಾನ ಮರ್ಯಾದೆಗಳಿರುವ ಯಾವುದೇ ಸರ್ಕಾರ ಇಂತಹ ಒಂದು ಆಜ್ಞೆಗೆ ಅವಕಾಶ ಮಾಡಿಕೊಡುವ ಸ್ಥಿತಿಗೆ ಬರಲೇಬಾರದು. ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಇಂದು ಅಂತಹ ಸ್ಥಿತಿಗೆ ಬಂದಿವೆ.

ಜನಗಳಿಗೆ ಇದೇ ನ್ಯಾಯವೆಂದೇನೂ ಅಲ್ಲ. ಯಾಕೆಂದರೆ ಆರೋಗ್ಯ ಸೌಕರ್ಯಗಳೆಂದರೆ ಜೀವನಾಶ್ಯಕ ಔಷಧಿಗಳ ಬೆಲೆ ನಿಯಂತ್ರಣವೊಂದೇ ಅಲ್ಲ. ಇಂತಹ ಹಲವು ವೈದ್ಯಕೀಯ ಸೌಕರ್ಯಗಳನ್ನು ಒದಗಿಸಿ ಸಾರ್ವಜನಿಕ ಆರೋಗ್ಯ ಸೌಕರ್ಯಗಳನ್ನು ಕಲ್ಪಿಸಬೇಕು.

ಆದರೆ ಇದು ಬಂಡವಾಳ ಶಾಹಿ ನ್ಯಾಯವನ್ನೇ ಒದಗಿಸ ದಂತಹ ಸರ್ಕಾರ ಇಂದಿನ ಕೇಂದ್ರ ಸರ್ಕಾರ ಎಂಬುದನ್ನು ನಾವು ಗಮನಿಸಬೇಕು.

ಅಲ್ಪಸಂಖ್ಯಾತರು ಭಯದಲ್ಲಿದ್ದರೆ ಅಭಿವೃದ್ಧಿಯಾಗದು

ಇದನ್ನು ಒಟ್ಟು ಅಲ್ಪಸಂಖ್ಯಾತರೊಬ್ಬರು ಹೇಳಿದ ಮಾತಲ್ಲ, ನೋಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಪ್ರೊ. ಅಮಾರ್ತ್ಯಸೇನ್ ಈ ಮಾತನ್ನು ಹೇಳಿದ್ದಾರೆ - "ಈ ಧರ್ಮದ ಆಧಾರದ ಮೇಲೆ ಈಗ ಧೃವೀಕರಣ ಆಗುತ್ತಿದೆ. ಇದು ಸರಿಯಾದದ್ದಲ್ಲ. ಇದರಿಂದಾಗಿ ಜನರ ತಾಳ್ಮೆ ಸಹನೆ ಹಾಳಾಗುತ್ತಿದೆ. ಆದ್ದರಿಂದ ಇಂತಹ ಧೃವೀಕರಣ ಆಗಬಾರದು' ಎಂದು ಅವರು ಹೇಳಿಕೆ. ದೇಶದ ಪ್ರಜಾಪ್ರಭುತ್ವವನ್ನು ಇನ್ನೂ ಹೆಚ್ಚಿನ ಮಟ್ಟಕ್ಕೆ ನಾವು ಕೊಂಡೊಯ್ಯಬೇಕು ಎಂದೂ ಅವರು ಹೇಳಿದ್ದಾರೆ. ರಾಮಜನ್ಮಭೂಮಿ, ಬಾಬ್ರಿ ಮಸೀದಿಯ ಸುತ್ತ ಕೋಮುದ್ವೇಷದ ವಾತಾವರಣವನ್ನು ಬೆಳೆಸಲು ಬಿಜೆಪಿ ಮತ್ತು ಸಂಘ ಪರಿವಾರಗಳು ಕೆಲಸ ಮಾಡುತ್ತಿರುವಾಗ ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂಬುದು ಅವರ ಅಭಿಮತ.

ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ದೇಶದ ಅಭಿವೃದ್ಧಿಯ ಬಗ್ಗೆ ಇನಿತೂ ಕಾಳಜಿಯಲ್ಲ ಎಂಬುದೂ ಅವರ ಈ ಮಾತಿನಿಂದ ಸ್ಪಷ್ಟವಾಗುತ್ತದೆ. ಸೇನರು ಎಡಪಂಥೀಯ ಅರ್ಥಶಾಸ್ತ್ರಜ್ಞರಂತೂ ಅಲ್ಲ.

ಬಡತನ ಹೆಚ್ಚಾದರೆ ಆರ್ಥಿಕತೆ ಬೆಳೆದಂತೆಯೇ?

ಕೇಂದ್ರ ಸರ್ಕಾರದ ಅರ್ಥ ಸಚಿವರು ಭಾರತದ ಆರ್ಥಿಕತೆ ಉತ್ತಮ ಬೆಳವಣಿಗೆಯ ಲಕ್ಷಣಗಳನ್ನು ತೋರುತ್ತಿದೆ ಎಂದು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ. ಅವರು ಅಂಕಿ ಸಂಖ್ಯೆಗಳನ್ನು ನೀಡಿದ್ದಾರೆ. ಉದಾಹರಣೆಗೆ ಸರ್ಕಾರದ ತೆರಿಗೆ ಸಂಗ್ರಹಣೆ ರೂ 19,172.20 ಷ್ಟು ಎಪ್ರಿಲ್-ಜೂನ್ ಅವಧಿಗೆ ಆಗಿದೆಯಂತೆ. ಇದು ಕಳೆದ ಸಾಲಿಗಿಂತ ಶೇ. 20.6 ರಷ್ಟು ಕಡಿಮೆ ಎಂಬುದು ಬೇರೆ ಮಾತು. ಈ ಕಡಿಮೆ ಸಂಗ್ರಹಣೆ ದೊಡ್ಡ ಪ್ರಮಾಣದಲ್ಲಿ ತೆರಿಗೆ ವಾಪಸ್ಸು ಮಾಡಿದ್ದರಿಂದ ಆಯಿತು ಎಂಬುದು ಅದರ ವಿವರಣೆ.

ಜಸವಂತ್ ಸಿಂಗರ ಪ್ರಕಾರ ಕೇಂದ್ರದ ಒಟ್ಟಾರೆ ತೆರಿಗೆ ಸಂಗ್ರಹಣೆ ಶೇ 26 ರಷ್ಟು ಹೆಚ್ಚಾಗಿದೆಯಂತೆ ಇದರಲ್ಲಿ ಕಂಪನಿಗಳ ತೆರಿಗೆ ಶೇ 35 ರಷ್ಟು ಹೆಚ್ಚಾದರೆ ವರಮಾನ ತೆರಿಗೆ ಶೇ 16 ರಷ್ಟು ಹೆಚ್ಚಳವಾಗಿದೆ.

ಈ ಅಂಕಿ ಸಂಖ್ಯೆಗಳು ಇರಲಿ. ಆದರೆ ನಿಜಕ್ಕೂ ದೇಶದ ಜನರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಮಾನವ ಅಭಿವೃದ್ಧಿ ವರದಿ, ದಿನನಿತ್ಯ ಬರುತ್ತಿರುವ ರೈತರ ಆತ್ಮಹತ್ಯೆಯ ಸುದ್ದಿ, ಉದ್ದಿಮೆಗಳಲ್ಲಿ ದಿನಬೆಳಗಾದರೆ ಉದ್ಯೋಗ ಕಡಿತದ ಸುದ್ದಿಗಳು ಹೇಳುತ್ತವೆ. ಮಾನವ ಅಭಿವೃದ್ಧಿ ವರದಿಯ ಪ್ರಕಾರ ಭಾರತದ ಸ್ಥಾನ ಕೆಳಗಿಳಿದಿದೆ. ರೈತರ ಆತ್ಮಹತ್ಯೆಗಳು ದಿನನಿತ್ಯದ ಮಾತಾಗಿದೆ. ಸಾಲದ ಹೊರೆ ತಾಳಲಾರದೆ ರೈತರು ಆತ್ಮಹತ್ಯೆ ಮಾಡಿಕೊಂಡರೂ ಸರ್ಕಾರಗಳು (ನಮ್ಮ ರಾಜ್ಯ ಸರ್ಕಾರವೂ ಸೇರಿದಂತೆ) ಏನೂ ಮಾಡುತ್ತಿಲ್ಲ.


ಉದ್ಯೋಗ ಕಡಿತಗಳೂ ಅಷ್ಟೇ. ಬಹುತೇಕ ಕಂಪನಿಗಳೂ ಉದ್ಯೋಗಗಳ ಕಡಿತ ಮಾಡಿ ಲಾಭ ಹೆಚ್ಚಿಸಿಕೊಳ್ಳುವ ಹುನ್ನಾರದಲ್ಲಿವೆ. ಜನಸಂಖ್ಯೆ ಬೆಳೆಯುತ್ತಿರುವ ದರದಲ್ಲಾದರೂ ಉದ್ಯೋಗಗಳು ಹೆಚ್ಚಾಗಬೇಕಾಗಿತ್ತು. ಬದಲಿಗೆ ಉದ್ಯೋಗ ಕಡಿತಗಳಾಗುತ್ತಿವೆ. ಇರುವ ಉದ್ಯೋಗಗಳಲ್ಲೂ ಮಾಲೀಕರುಗಳು ಸಂಬಳ/ ಭತ್ಯೆಗಳಲ್ಲಿ ಕಡಿತ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ.

ದೇಶದ ಜನತೆ ಹೀಗೆ ಬಡತನದ ಬೇಗೆಗೆ ತುತ್ತಾಗಿರುವಾಗ ದೇಶದ ಆರ್ಥಿಕತೆ ಬೆಳೆಯುತ್ತಿದೆ ಎಂದರೆ ಏನರ್ಥ? ಬಡತನವೇ ಬೆಳವಣಿಗೆ ಎಂದೆ?

ರೈತರು ಉತ್ತಮ ಸಾಲಗಾರರು : ಬ್ಯಾಂಕ್ ಮುಖ್ಯಸ್ಥರ ಹೇಳಿಕೆ

ಇಷ್ಟೊಂದು ಸಾಲ ವಸೂಲಾತಿ ಸಮಸ್ಯೆಗಳ ನಡುವೆ ರೈತರೇ ಉತ್ತಮ ಸಾಲಗಾರರು ಎಂದು ಬ್ಯಾಂಕ್ ಮುಖ್ಯಸ್ಥರುಗಳು ಒಪ್ಪಿಕೊಳ್ಳುತ್ತಾರೆ. ಯಾಕೆಂದರೆ ರೈತರು ಇಂದಲ್ಲ ನಾಳೆ ಸಾಲವನ್ನು ಮರುಪಾವತಿ ಮಾಡುತ್ತಾರೆ. ಆದರೆ ಬಂಡವಾಳಿಗರು ತೆಗೆದುಕೊಂಡ ಸಾಲಕ್ಕೆ ತುಳಸಿ ನೀರು ಬಿಟ್ಟಂತೆ (ಅಂದರೆ ದಾನ ಮಾಡಿದಂತೆ) ಎಂಬುದು ಇವರ ಅನುಭವ.

ಆದರೆ ನಮ್ಮ ಮಾಧ್ಯಮಗಳು ರೈತರ ವಿರುದ್ಧ ಹುಯಿಲೆಬ್ಬಿಸುತ್ತವೆ. ರೈತರಿಗೆ ಕೊಟ್ಟ ಸಾಲಗಳು ವಾಪಸ್ಸು ಬರುತ್ತಿಲ್ಲ. ಆದ್ದರಿಂದಲೇ ಬ್ಯಾಂಕುಗಳ ದುಡಿಯದ ಆಸ್ತಿಯ ಪ್ರಮಾಣ ಹೆಚ್ಚಾಗಿದೆ ಎಂದೆಲ್ಲ ಪ್ರಚಾರ ಮಾಡಲಾಗುತ್ತಿದೆ. ಆದರೆ ಬಂಡವಾಳಿಗರಿಗೆ ಹೋಲಿಸಿದರೆ ಎಲ್ಲತರಹದ ಜನಸಾಮಾನ್ಯರು ಬ್ಯಾಂಕುಗಳಿಂದ ಪಡೆವ ಸಾಲವನ್ನು ಸಮಯಕ್ಕೆ ಸರಿಯಾಗಿ ಮರುಪಾವತಿಸುತ್ತಾರೆ. ಸಾಲ ಕಟ್ಟಲಾಗದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಸಾಲ ಕಟ್ಟದ ಬಂಡವಾಳಿಗರು ವಿಲಾಸದಲ್ಲಿ ತೊಡಗಿರುತ್ತಾರೆ. ಎನ್‌ಡಿಎ ಸರ್ಕಾರ ರೈತರ ರೂ. 50,000 ವರೆಗಿನ ಸಾಲದ ಮೇಲಿನ ಬಡ್ಡಿಯನ್ನು ಕಡಿಮೆ ಮಾಡಿದೆ. ಆದರೆ ಈ ಬಡ್ಡಿ ಕಡಿತ ಕಣ್ಣೊರೆಸುವ ತಂತ್ರ ಮಾತ್ರ. ರೈತರ ವಸೂಲಿಗೆ ಬೆಲೆ ದೊರೆಯದಿದ್ದರೆ ಇಂತಹ ಬಡ್ಡಿ ದರದ ಕಡಿತ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡಲಾರದು. ಪ್ರಾಮಾಣಿಕರಿಂದ ಕಿತ್ತುಕೊಂಡು ಅಪ್ರಾಮಾಣಿಕರಿಗೆ ನೀಡುವುದೇ ಈ ಸರ್ಕಾರದ ನೀತಿ ಎನ್ನೋಣವೇ?



ಉಳ್ಳವರ ಮತ್ತು ಇಲ್ಲದವರ ನಡುವಿನ ಕಂದಕ 1950 ರಲ್ಲಿ 1:30 ಇದ್ದದ್ದು, 1920 ರಲ್ಲಿ 1:60 ಕ್ಕೇರಿ, ಜಾಗತೀಕರಣೋತ್ತರ ಯುಗದಲ್ಲಿ (1998) 1:74 ಕ್ಕೆ ತಲುಪಿದೆ.

ಡಾ. ವಿ.ಮುರಾರಿ ಬಲ್ಲಾಳ
ಆಗಸ್ಟ್ 21 ರ ಸುಧಾ ಪತ್ರಿಕೆಯಲ್ಲಿ

ನಿಲ್ಲದ ನರ ಬಲಿಗಳು

ನಮ್ಮ ನಿಮ್ಮ ಸಂ-ವಾದ

ಹಣದ ಆಸೆ ಮತ್ತು ಪಾಳೆಯಗಾರಿ ಮೌಢ್ಯಗಳನ್ನು ಹೊಂದಿದ್ದ ವ್ಯಕ್ತಿಯೊಬ್ಬ ಗುಪ್ತ ನಿಧಿಗಾಗಿ ತನ್ನ ಮಗಳನ್ನೇ ಬಲಿಕೊಟ್ಟ ದಾರುಣ ವಾರ್ತೆ ತಂತ್ರಜ್ಞಾನ ಯುಗದ ಚಿಂತಕರನ್ನು ದಂಗುಬಡಿಸುತ್ತದೆ. ವಿಜ್ಞಾನದ ಬೆಳವಣಿಗೆಗೆ ಹೆಮ್ಮೆ ಪಟ್ಟುಕೊಳ್ಳುವಾಗಲೇ ಇಡೀ ಸಮಾಜದ ಪರಿಸ್ಥಿತಿ ಹೇಗಿದೆ ಎಂದು ನಮ್ಮ ಬೆನ್ನನ್ನು ನಾವೇ ನೋಡಿಕೊಳ್ಳಬೇಕಾಗುತ್ತದೆ.

ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ದಸರಿಘಟ್ಟದ ಚೌಡೇಶ್ವರಿ ದೇವಸ್ಥಾನದ ಅರ್ಚಕ ನಾರಾಯಣಪ್ಪನೇ ಕರುಳ ಕುಡಿಯನ್ನು ಬಲಿಕೊಟ್ಟ ರಕ್ಕಸ. ಆರು ತಿಂಗಳ ಹಿಂದೆ ಅಸ್ಸಾಂ ರಾಜ್ಯದ ಗೌಹಾತಿಯಿಂದ ಬಂದ ಸನ್ಯಾಸಿಯೊಬ್ಬ 'ನರಬಲಿ ಕೊಟ್ಟರೆ ಗುಪ್ತ ನಿಧಿ ಸಿಗುತ್ತದೆ' ಎಂದು ಹೇಳಿದ್ದನಂತೆ. ಬಹುಶಃ ಮಂಕುಕವಿದಿದ್ದ ನಾರಾಯಣಪ್ಪನಿಗೆ ನರಬಲಿ ಕೊಡಲು ಬೇರೆ ಯಾರೂ ಸಿಕ್ಕಲಿಲ್ಲವೆಂದು ಕಾಣುತ್ತದೆ. ಸುಲಭವಾಗಿ ಸಿಕ್ಕಿದ ತನ್ನ ಮಗಳನ್ನೇ ಬಲಿಕೊಟ್ಟ!

ಇಲ್ಲಿ ಹಲವಾರು ಪ್ರಶ್ನೆಗಳು ಉದ್ಭವಿಸುತ್ತವೆ. ಹಣದ ದುರಾಸೆ ಒಂದೆಡೆಯಾದರೆ, ಮಗಳನ್ನೇ ಬಲಿಕೊಟ್ಟ ನರಹಂತಕತನ ಇನ್ನೊಂದೆಡೆ. ಸನ್ಯಾಸಿಯ ಮಾತು 'ವೇದವಾಕ್ಯ' ಎನ್ನುವಂತೆ ಪ್ರಶ್ನೆ ಮಾಡದೆ ಸ್ವೀಕರಿಸಬೇಕೆನ್ನುವ ಮೌಢ್ಯ ಒಂದೆಡೆಯಾದರೆ, ದೇವತೆಗಳಿಗೆ ಲಂಚ ಕೊಟ್ಟು (ಬೇರೆ ಬೇರೆ ರೂಪದಲ್ಲಿ) ತನ್ನ ಇಷ್ಟವನ್ನು ಸಿದ್ಧಿಸಿಕೊಳ್ಳಬೇಕೆಂಬ ವಂಚಕತನ ಇನ್ನೊಂದೆಡೆ.

ಇನ್ನೊಂದು ಪ್ರಮುಖವಾದ ಪ್ರಶ್ನೆ - ನಾರಾಯಣಪ್ಪನಿಗೆ ಎರಡು ಹೆಣ್ಣು ಮಕ್ಕಳು, ಒಂದು ಗಂಡು ಮಗು. 'ಹೆಣ್ಣು ಕುಲದಿಂದ ಹೊರಕ್ಕೆ' ಎಂದು ಮಹಿಳೆಯರನ್ನು ತಾತ್ಸಾರದಿಂದ ನೋಡುವ ದೃಷ್ಟಿಯೂ ಇದರಲ್ಲಿ ಅಡಗಿದೆ. ಲಂಕೇಶ್ ಪತ್ರಿಕೆಯಲ್ಲಿ ಬಂದಿರುವ ವರದಿಯ ಪ್ರಕಾರ, ಬಲಿಗೆ ಒಳಗಾದ ಹೆಣ್ಣು ಮಗು ಮದುವೆಯಾದ 6 ತಿಂಗಳಿಗೆ ಹುಟ್ಟಿತ್ತಂತೆ. ನಾರಾಯಣಪ್ಪ ತನ್ನ ಹೆಂಡತಿ ಗೌರಮ್ಮನನ್ನು ಪ್ರೀತಿಸಿ ಮದುವೆಯಾಗಿದ್ದ. ಆದರೆ 6 ತಿಂಗಳಿಗೆ ಮಗು ಹುಟ್ಟಿದ್ದರಿಂದ ಅದು ತನ್ನ ಮಗುವೆ ಅಥವಾ ಬೇರೆಯವರ ಮಗುವೆ ಎಂಬ ಅನುಮಾನ ಬೇರೆ! ಎಲ್ಲಾ ವಿಧದಲ್ಲೂ ಹೆಣ್ಣು ಶೋಷಣೆಗೆ ಒಳಗಾಗುತ್ತಾಳೆ ಎಂಬುದಕ್ಕೆ ಬೇರೆ ಉದಾಹರಣೆ ಬೇಕಿಲ್ಲ.

ಈ ದೇವಸ್ಥಾನಕ್ಕೆ ಸಮಾಜದ ಪ್ರತಿಷ್ಠಿತರು ಭೇಟಿ ಕೊಡುತ್ತಾರೆ. ಸಿನಿಮಾ ನಟರು, ಕಾಂಗ್ರೆಸ್, ಬಿಜೆಪಿ, ಜನತಾದಳದ ಮುಖಂಡರು ಹರಕೆ ಸಲ್ಲಿಸುತ್ತಾ ಕುರಿ,ಕೋಳಿಗಳನ್ನು ಬಲಿಕೊಡುತ್ತಾರೆ. ಚೌಡೇಶ್ವರಿ ದೇವಸ್ಥಾನದ ಅಭಿವೃದ್ಧಿ ಸಮಿತಿಗೆ ಆದಿ ಚುಂಚನಗಿರಿಯ ಬಾಲಗಂಗಾಧರನಾಥಸ್ವಾಮಿಗಳು ಅಧ್ಯಕ್ಷರು. ಪ್ರತಿಷ್ಠಿತರೆನಿಸಿಕೊಂಡವರು, ಜನರನ್ನಾಳುವವರೇ ಈ ರೀತಿಯಲ್ಲಿ ಮೂಢ ನಂಬಿಕೆಯನ್ನು ಪೋಷಿಸುವುದಾದರೆ, ಭಾರತದ ಸಂವಿಧಾನದಲ್ಲಿ ಹೇಳಿದ ವೈಜ್ಞಾನಿಕ ಮನೋಭಾವವನ್ನು ಬೆಳೆಸುವವರಾರು? ಕೆಲವು ವರ್ಷಗಳ ಹಿಂದೆ 'ಗಣೇಶ ಹಾಲು ಕುಡಿದ ಗುಲ್ಲು' ದೇಶದ ತುಂಬೆಲ್ಲಾ ಹಬ್ಬಿದ ಸಂದರ್ಭದಲ್ಲಿ ನವದೆಹಲಿಯ ಬಿಜೆಪಿ ಕಛೇರಿಯಲ್ಲಿ ಎಲ್.ಕೆ.ಅಡ್ವಾಣಿ ಗಣೇಶನಿಗೆ ಹಾಲು ಕುಡಿಸುತ್ತಿದ್ದ ದೃಶ್ಯ ಪತ್ರಿಕೆಗಳಲ್ಲಿ ಪ್ರಕಟವಾದುದು ಕಣ್ಣಮುಂದೆ ನಿಲ್ಲುತ್ತದೆ. ದಿನ ಬೆಳಗಾದರೆ ಹೈಟೆಕ್ ಮಾತನಾಡುವ ಮುಖ್ಯಮಂತ್ರಿ ಕೃಷ್ಣ ಮಳೆ ಬಾರದೆ ಇದ್ದಾಗ ಪೂಜೆ ಸಲ್ಲಿಸಲು, ಸರಕಾರಿ ಸುತ್ತೋಲೆ ಕಳಿಸುತ್ತಾರೆ. ವಿಜ್ಞಾನವನ್ನು ಪೋಷಿಸಬೇಕಾದವರು ಮೌಢ್ಯವನ್ನು ಬೆಳೆಸುತ್ತಾರೆ.

ಕೃಷ್ಣ ಸರ್ಕಾರದ ಅಡಿಯಲ್ಲಿ ಮೂರು ನರಬಲಿ ನಡೆದಿದೆ. ಸಾಧಾರಣ ಎರಡು ವರುಷಗಳ ಹಿಂದೆ ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ಇಂತಹುದೇ ನರಬಲಿ ನಡೆದಿತ್ತು. ಅದು ಕೂಡಾ ಭೂಮಿಯಲ್ಲಿ ಹುದುಗಿದ್ದ ಸಂಪತ್ತು ಅರಸುವುದಕ್ಕಾಗಿ. ಅಲ್ಲಿ ಬೇರೊಬ್ಬ ಬಾಲಕನನ್ನು ಕದ್ದುತಂದು ನರಬಲಿ ಕೊಡಲಾಗಿತ್ತು. ಆ ನರಬಲಿಯ ಪ್ರಮುಖ ಆರೋಪಿ, ಅಲ್ಲಿಯ ಶಾಸಕ ಬಸವರಾಜ ಪಾಟೀಲ್ ಹುಮ್ನಾಬಾದ್ ಅವರ ಮನೆಯಲ್ಲಿ ಅಡಗಿದ್ದರು ಎಂದು ಪತ್ರಿಕೆಗಳಲ್ಲಿ ಬಂದಿತ್ತು. ಬಸವರಾಜ ಪಾಟೀಲ್ ಹುಮ್ನಾಬಾದ್ ಈಗ ಕೃಷ್ಣ ಸರ್ಕಾರದಲ್ಲಿ ಹೆಚ್ಚು ವೋಲ್ಟೇಜಿನ ವಿದ್ಯುತ್ ಮಂತ್ರಿ!

ಭೀಮನ ಅಮಾವಾಸ್ಯೆಯ ದಿನ, ತಂದೆ-ತಾಯಿಗೆ ಒಬ್ಬಳೇ ಮಗಳಾಗಿದ್ದ ಬಾಲಕಿಯನ್ನು ದೇವಿಗೆ ಬಲಿ ನೀಡಿದರೆ ಇಷ್ಟಾರ್ಥಗಳು ಈಡೇರುತ್ತವೆ ಎಂಬ ಮೂಢನಂಬಿಕೆಗೆ ಒಳಗಾಗಿ, ಕೂಡ್ಲಿಗಿ ತಾಲ್ಲೂಕಿನ ಬಸಯ್ಯಾ ಹಾಗೂ ಆತನ ಮಕ್ಕಳಾದ ಬೋರಕ್ಕೆ ಮತ್ತು ಚನ್ನಪ್ಪ ಚಳ್ಳಕೆರೆಯ 10 ವರ್ಷದ ಬಾಲಕಿಯ ಬಲಿ ತೆಗೆದುಕೊಂಡಿದ್ದಾರೆ.

ಜುಲೈ 29 ರಂದು ಭೀಮನ ಅಮಾವಾಸೆಯ ರಾತ್ರಿ ಬಾಲಕಿಯನ್ನು ದೇವಿಗೆ ಬಲಿಕೊಡುವ ಯತ್ನ ಮಾಡಿ ವಿಫಲರಾದಾಗ, 30 ರ ಮಧ್ಯಾಹ್ನದವರೆಗೆ ಅಮಾವಾಸ್ಯೆ ಇದೆ ಎಂದು ಭಾವಿಸಿ, 10 ವರ್ಷದ ಬಾಲಕಿ ನೇತ್ರಾವತಿಯ ಕತ್ತನ್ನು ಕೊಯ್ದು, ರಕ್ತವನ್ನು ಚಿಕ್ಕ ಡಬ್ಬದಲ್ಲಿ ಹಾಕಿಕೊಂಡು ತಮ್ಮ ಮನೆಯಲ್ಲಿ ಪ್ರತಿಷ್ಠಾಪಿಸಿಕೊಂಡಿದ್ದ ದೇವಿಗೆ ನೈವೇದ್ಯ ಮಾಡಿದ್ದರು.

ವಿಜ್ಞಾನ, ತಂತ್ರಜ್ಞಾನ ಮುಂದುವರಿದಿದೆ ಎಂದು ಹೆಮ್ಮೆಯಿಂದ ಹೇಳುವ ಕರ್ನಾಟಕದಲ್ಲಿ ಹೀಗಾಗುತ್ತಿರುವುದೇಕೆ? ಚಿಂತಕರೆಲ್ಲರೂ ಚಿಂತಿಸಬೇಕು. ಪರ್ಯಾಯಕ್ಕಾಗಿ ಪಣ ತೊಡಬೇಕು. ಮೌಢ್ಯತೆಯನ್ನು ಹೋಗಲಾಡಿಸಿ ಪಟ್ಟಭದ್ರರನ್ನು ಹಿಡಿತದಲ್ಲಿಡುವ ಸಮಾಜದ ರಚನೆಯಾಗಬೇಕು.

- ಬಾಲಕೃಷ್ಣ

ಇತಿಹಾಸದ ಪುಟಗಳಿಂದ

ಕಾರ್ಮಿಕ ವರ್ಗದ ವಿಮೋಚನೆಗೆ ಕ್ರಾಂತಿಕಾರಿ ಸೈದ್ಧಾಂತಿಕ ಅಸ್ತ್ರ ನೀಡಿದವರು ಮಾರ್ಕ್ಸ್, ಎಂಗೆಲ್ಸ್‌ರವರು. ಇಡೀ ಮಾನವ ಕುಲದ ಇತಿಹಾಸದಲ್ಲೇ ಶ್ರಮಿಕವರ್ಗದ ಕ್ರಾಂತಿಯನ್ನು ಸಾಧ್ಯವಾಗಿಸಿದ್ದು ರಶಿಯಾದಲ್ಲಿ ಬೋಲ್ಶೆವಿಕ್ ಪಕ್ಷದಿಂದ. ಜಗತ್ತನ್ನೇ ತಲ್ಲಣಗೊಳಿಸಿ, ಮುಂದೆಯೂ ಹಿಟ್ಲರ್ ಫ್ಯಾಸಿಸಂನ್ನು ಪುಡಿಗಟ್ಟಿದ, ಸಾಮ್ರಾಜ್ಯಶಾಹಿಗಳ ಎದೆಯಲ್ಲಿ ಸದಾ ನಡುಕ ಹುಟ್ಟಿಸಿದ, ಶೋಷಿತ ಜನಾಂಗದಲ್ಲಿ ಹೋರಾಟದ ಹುಮ್ಮಸ್ಸು ಹೆಚ್ಚಿಸಿದ ಶಕ್ತಿ ಬೋಲ್ಶೆವಿಕ್ ಪಕ್ಷ. ಇಂತಹಮಹಾನ್ ಕ್ರಾಂತಿಕಾರಿ ಪಕ್ಷ ಸ್ಥಾಪನೆಯಾಗಿ ನೂರುವರುಷಗಳು ತುಂಬುತ್ತಿವೆ. ಅದು ರೂಪುಗೊಂಡ ಬಗೆಯತ್ತ ಒಂದು ಕಿರುನೋಟ ಇಲ್ಲಿದೆ

ಶರತ್‌ಚಂದ್ರ



ನೂರು ತುಂಬಿದ ಬೊಲ್ಶೆವಿಕ್ ಪಾರ್ಟಿ

ಬೊಲ್ಶೆವಿಕ್ ಪಾರ್ಟಿಗೆ ನೂರುವರ್ಷ ತುಂಬಿತು. ಆಗ ರಶ್ಯನ್ ಸೋಶಿಯಲ್ ಡೆಮಾಕ್ರಾಟಿಕ್ ಲೇಬರ್ ಪಾರ್ಟಿ ಎಂದು ಹೆಸರಿತ್ತು - ಬೊಲ್ಶೆವಿಕ್ ಪಾರ್ಟಿಗೆ. ಆಮೇಲೆ ಕಮ್ಯುನಿಸ್ಟ್ ಪಾರ್ಟಿ ಆಫ್ ಸೋವಿಯತ್ ಯೂನಿಯನ್ (ಬೊಲ್ಶೆವಿಕ್) ಎಂದು ಹೆಸಲಾಯಿತು. 1903 ಜುಲೈ 30 ರಂದು ಬೊಲ್ಶೆವಿಕ್ ಪಕ್ಷದ ಎರಡನೇ ಮಹಾಧಿವೇಶನ ಬೆಲ್ಜಿಯಂನ ಬ್ರಸ್ಸೆಲ್ಸ್‌ನಲ್ಲಿ ಸೇರಿತ್ತು. ಕಾರ್ಯಕ್ರಮ ಆಧಾರಿತ ಕಾರ್ಮಿಕ ವರ್ಗದ ಒಂದು ಹೊಸ ರೀತಿಯ ಪಕ್ಷ ಕಟ್ಟುವುದು, ಅದರ ಕಾರ್ಯಕ್ರಮ ಅಂಗೀಕರಿಸುವುದು - ಮಹಾಧಿವೇಶನದ ಮುಂದಿದ್ದ ಮಹತ್ತರ ಜವಾಬ್ದಾರಿ. ರಶ್ಯನ್ ಬೊಲ್ಶೆವಿಕ್ ಪಾರ್ಟಿ ಬೆಲ್ಜಿಯಂನಲ್ಲಿ ಯಾಕೆ ಮಹಾಧಿವೇಶನ ನಡೆಸಿತ್ತು ಎಂದಿರಾ? ಝಾರ್ ಶಾಹಿಯ ಸರ್ವಾಧಿಕಾರದಲ್ಲಿ ರಶ್ಯದಲ್ಲಿ ಯಾವುದೇ ರಾಜಕೀಯ ಪಕ್ಷ (ಕಾರ್ಮಿಕ ವರ್ಗದ್ದಕ್ಕಂತೂ ಪ್ರಶ್ನೆಯೇ ಇರಲಿಲ್ಲ)ದ ಚಟುವಟಿಕೆಗೆ ಅವಕಾಶ ಇರಲಿಲ್ಲ. ಆದರೆ ಬೆಲ್ಜಿಯಂನಲ್ಲೂ ಮಹಾಧಿವೇಶನವನ್ನು ಪೋಲೀಸರು ಮಧ್ಯಪ್ರವೇಶ ಮಾಡಿ ನಡೆಯದಂತೆ ಮಾಡಿದರು. ಲಂಡನ್‌ನಲ್ಲಿ ಮುಂದೆ ಅದನ್ನು ಮುಂದುವರೆಸಲಾಯಿತು.

ಈ ಚಾರಿತ್ರಿಕ ಮಹಾಧಿವೇಶನ ಕಾರ್ಯಕ್ರಮವನ್ನು ಅಂಗೀಕರಿಸಿತು. ಮಾತ್ರವಲ್ಲ, ಒಂದು ಹೊಸ ರೀತಿಯ ಕಾರ್ಮಿಕ ವರ್ಗದ ರಾಜಕೀಯ ಪಕ್ಷ ರಚಿಸಿತು. ಅದು ರಶ್ಯಕ್ಕೆ ಮಾತ್ರವಲ್ಲ ಇಡೀ ಜಗತ್ತಿಗೇ ಚಾರಿತ್ರಿಕ ಘಟನೆಯಾಯಿತು. ಇದರರ್ಥ ಹಿಂದೆ ಕಾರ್ಮಿಕ ವರ್ಗದ ಪಕ್ಷಗಳು (ಕಾರ್ಯಕ್ರಮ ಆಧಾರಿತವಾಗಿರುವವು) ರಚನೆಯಾಗಿರಲಿಲ್ಲ ಎಂತಲ್ಲ. 19ನೇ ಶತಮಾನದ ಎರಡನೇ ಅರ್ಧದಲ್ಲಿ ಯುರೋಪಿನ ಹಲವು ದೇಶಗಳಲ್ಲಿ ಇಂತಹ ಪಕ್ಷಗಳು ರಚನೆಯಾಗಿದ್ದವು. ಅವು ತತ್‌ಕ್ಷಣದ ರಾಜಕೀಯ-ಆರ್ಥಿಕ ಕಾರ್ಯಕ್ರಮ ಹಮ್ಮಿಕೊಂಡಿದ್ದವು. ಆದರೆ ಬೊಲ್ಶೆವಿಕ್ ತರಹ ದೂರಗಾಮಿ ಕಣ್ಣೋಟದ ಕ್ರಾಂತಿಕಾರಿ ಪಕ್ಷವಾಗಿರಲಿಲ್ಲ. ಬೊಲ್ಶೆವಿಕ್ ಪಾರ್ಟಿ ಸರಿಯಾದ ಕಾರ್ಯಕ್ರಮ ಅಂಗೀಕರಿಸಿದ ಮೊದಲ ಕ್ರಾಂತಿಕಾರಿ ಪಕ್ಷವಾಗಿತ್ತು. ಸಂಘಟನಾತ್ಮಕವಾಗಿ, ಕಾರ್ಯಕ್ರಮಾತ್ಮಕವಾಗಿಯೂ - ನವೆಂಬರ್ ಕ್ರಾಂತಿಗೆ ಸಜ್ಜಾದ ಪಾರ್ಟಿ ಆದಾಗಿತ್ತು. ಆದ್ದರಿಂದ ಸ್ವಾಭಾವಿಕವಾಗಿಯೇ ಜಗತ್ತಿನಾದ್ಯಂತ ಕ್ರಾಂತಿಕಾರಿ ಕಾರ್ಮಿಕ ವರ್ಗದ ಪಕ್ಷಗಳ ಸಂಘಟನೆ ಮತ್ತು ಕಾರ್ಯಕ್ರಮಕ್ಕೆ ಸ್ಫೂರ್ತಿಯ ಚಿಲುಮೆಯಾಯಿತು.

ಕಾರ್ಮಿಕವರ್ಗದ ಸಿದ್ಧಾಂತದ ಆಯುಧ ಮಾರ್ಕ್ಸ್-ಎಂಗೆಲ್ಸ್ 55 ವರ್ಷದ ಹಿಂದೆಯೇ ಸಿದ್ಧಪಡಿಸಿದ್ದರೂ, ಬೊಲ್ಶೆವಿಕ್ ಪಕ್ಷ ಕ್ರಾಂತಿ ಮಾಡಹೊರಟ ಮೊದಲ ಪಕ್ಷವಾಗಿತ್ತು. ಎರಡನೇ ಮಹಾಧಿವೇಶನದ ವೇದಿಕೆಯಲ್ಲಿ ಪಕ್ಷದ ಕಾರ್ಯಕ್ರಮ ಆಕಾಶದಿಂದ ಬೀಳಲಿಲ್ಲ. ಲೆನಿನ್ ಅವರ ನಾಯಕತ್ವದಲ್ಲಿ ಪಕ್ಷದ ಒಳಗೆ-ಹೊರಗೆ ಕಾರ್ಯಕ್ರಮದ ಬಗ್ಗೆ ವಿಚಾರಮಂಥನ ನಡೆದಿತ್ತು. ಪಕ್ಷದ ಕಾರ್ಯಕ್ರಮದಲ್ಲಿ ಕನಿಷ್ಟ ಮತ್ತು ಮಹತ್ವದ ಕಾರ್ಯಕ್ರಮ ಎಂಬ ಎರಡು ಭಾಗಗಳಿದ್ದವು. ಮಹತ್ವದ ಕಾರ್ಯಕ್ರಮ ಕಾರ್ಮಿಕ ವರ್ಗದ ಪಕ್ಷದ ಅಖೈರು ಉದ್ದೇಶವನ್ನು ಹೇಳುತ್ತಿತ್ತು. ಅಂದರೆ ಸಮಾಜವಾದಿ ಸಮಾಜ ನಿರ್ಮಿಸುವುದು.

ಬೊಲ್ಶೆವಿಕ್ ಪಾರ್ಟಿಯ ಕನಿಷ್ಟ ಕಾರ್ಯಕ್ರಮ - ಝಾರ್ ಶಾಹಿಯನ್ನು ಕಿತ್ತೊಗೆಯುವುದು, ಬೂರ್ಜ್ವಾ-ಪ್ರಜಾಪ್ರಭುತ್ವ ಕ್ರಾಂತಿ, ಪ್ರಜಾಸತ್ತಾತ್ಮಕ ಪ್ರಭುತ್ವದ ರಚನೆ, ಎಂಟು ಗಂಟೆಗಳ ದಿನ, ಎಲ್ಲಾ ದೇಸಿ-ಜನಾಂಗಗಳಿಗೆ ಸ್ವಯಮಾಡಳಿತದ ಹಕ್ಕು ಸಾಧನೆ, ಪಾಳೆಯಗಾರಿ ವ್ಯವಸ್ಥೆಯ ನಾಶ ಮತ್ತು ಸಮಾನತೆ ಸಾಧಿಸುವುದು- ಇವುಗಳನ್ನು ಒಳಗೊಂಡಿತ್ತು. ಬೊಲ್ಶೆವಿಕ್ ಪಾರ್ಟಿಯ ಮೇಲ್ಪಂಕ್ತಿ ಮತ್ತು ಲೆನಿನ ಅವರ ಸೈದ್ಧಾಂತಿಕ ಬೆಳವಣಿಗೆ ಮಾಡಿದ್ದರಿಂದ, ಇತರ ಪಕ್ಷಗಳು ಕಾರ್ಯಕ್ರಮ ರೂಪಿಸುವಾಗ ಆಯಾ ದೇಶದಲ್ಲಿ ಕ್ರಾಂತಿಯು ಪ್ರಸ್ತುತ ಹಂತ ಮತ್ತು ಅಂತಿಮ ಉದ್ದೇಶದತ್ತ ಹಲವು ಹಂತಗಳನ್ನು ಗುರುತಿಸುವುದು ಕಾರ್ಯಕ್ರಮದ ಭಾಗವಾಗಿ ಹೋಯಿತು.

ಸಂಘಟನಾತ್ಮಕವಾಗಿ ಬೊಲ್ಶೆವಿಕ್ ಪಾರ್ಟಿ 'ಲೆನಿನ್ ವಾದಿ' ಎಂದು ಕರೆಯಲಾದ ಸೂತ್ರಗಳನ್ನು ಮುಂದಿಟ್ಟಿತು. ಪೂರ್ಣ ಸಮಯದ ಕ್ರಾಂತಿಕಾರಿಗಳನ್ನೊಳಗೊಂಡ ಸಮಿತಿಗಳು, ಕಾರ್ಮಿಕ ವರ್ಗ, ಸುಸಂಘಟಿತ, ವರ್ಗ-ಪ್ರಜ್ಞೆಯಿರುವ, ಸ್ವಾರ್ಥರಹಿತ, ಕ್ರಾಂತಿಗೆ ಜೀವನಮುಡುಪಿಟ್ಟ ಅತ್ಯುತ್ತಮ ಪ್ರತಿನಿಧಿಗಳು ಕಾರ್ಮಿಕವರ್ಗದ ಸದಸ್ಯರನ್ನಾಗಿ ತೆಗೆದುಕೊಳ್ಳಬೇಕು ಎಂಬ ಲೆನಿನ್‌ವಾದಿ ನೀತಿ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳಿಗೆ ಮೂಲಮಂತ್ರವಾಯಿತು. ಕಮ್ಯುನಿಸ್ಟ್ ಪಕ್ಷ ಕಾರ್ಮಿಕವರ್ಗದ ಮುಂಚೂಣಿಯಲ್ಲಿರುವ, ಸಂಘಟಿತ ಶಕ್ತಿ. ಮಾರ್ಕ್ಸ್‌ವಾದದ ಜ್ಞಾನ, ಕಾರ್ಮಿಕ ವರ್ಗದ ಕ್ರಾಂತಿಕಾರಿ ಪರಂಪರೆ, ಸಾಮಾಜಿಕ ಬದಲಾವಣೆ ಮತ್ತು ವರ್ಗ ಸಮರದ ಅನುಭವದಿಂದ ಸಜ್ಜಿತವಾದ ಪಕ್ಷ ಇದು. ಇಂತಹ ಕ್ರಾಂತಿಕಾರಿ ಸಂಘಟನೆಗೆ ತಕ್ಕುದಾದ ನೀತಿ ಸಂಹಿತೆ, ಶಿಸ್ತನ್ನು ಬೊಲ್ಶೆವಿಕ್ ಪಾರ್ಟಿ ರೂಪಿಸಿತು.

ಬೊಲ್ಶೆವಿಕ್ ಪಾರ್ಟಿ ತನ್ನ ಸರಿಯಾದ ಸೈದ್ಧಾಂತಿಕ, ಸಂಘಟನಾತ್ಮಕ ನೀತಿಗಳಿಂದ ರಚಿತವಾಗಿ 14 ವರ್ಷಗಳಲ್ಲಿ ಮಹಾನ್ ಅಕ್ಟೋಬರ್ ಕ್ರಾಂತಿಯ, ಸಫಲ ನಾಯಕತ್ವ ವಹಿಸಿತು. ಆಮೇಲೆ ನೂರಾರು ಕಮ್ಯುನಿಸ್ಟ್ ಪಕ್ಷಗಳು ಲೆನಿನ್ ವಾದಿ ನೀತಿ ಸೂತ್ರಗಳ ಮೇಲೆ ಆಧಾರಿತವಾಗಿ ರಚಿತವಾಗಿವೆ. ಬೊಲ್ಶೆವಿಕ್ ಪಾರ್ಟಿಗೆ ನೂರು ವರ್ಷ ತುಂಬಿರುವುದು ಅತ್ಯಂತ ಮಹತ್ತರವಾದ ಚಾರಿತ್ರಿಕ ಘಟನೆ.

ಆಫ್ರಿಕಾದಲ್ಲಿ ಬುಷ್? ಬರಲಿವೆ ಬರ್ಬರ ದಿನಗಳು

ಇತ್ತೀಚಿಗಿನ ಅಮೆರಿಕದ ಅಧ್ಯಕ್ಷ ಬುಶ್ ಭೇಟಿ ಏನನ್ನು ಸಾಧಿಸಿತು? ಆಫ್ರಿಕಾಕ್ಕೆ ಅದರಿಂದ ಏನಾದರೂ ಪ್ರಯೋಜನವಾಯಿತೇ? ಒಂದು ಕಡೆ ಬುಶ್ ಹೋದದಲ್ಲೆಲ್ಲಾ ಇರಾಕಿನಲ್ಲಿ ಸಾಮೂಹಿಕ ನಾಶದ ಶಸ್ತ್ರಾಸ್ತ್ರಗಳ ಪತ್ತೆ ಆಗದ ಬಗ್ಗೆ ಅಣಕಕ್ಕೆ ಒಳಗಾದರು. ಇರಾಕ್ ಮೇಲೆ ಯುದ್ಧ ಹೂಡಲು ಸುಳ್ಳು ಬೇಹುಗಾರ ವರದಿ ಸೃಷ್ಟಿಸಿದ ಬಗೆಗೆ ಅಣಕ ವ್ಯಕ್ತವಾಯಿತು. ಇನ್ನೊಂದು ಕಡೆ ಆಫ್ರಿಕಾದ ಏಡ್ಸ್ ಸಮಸ್ಯೆ ಬಗೆಹರಿಸಲು ಮಾನವೀಯ ಸಹಾಯದ ಹೊರೆ ಹೊತ್ತು ಬಂದಿದ್ದಾರೆ ಎಂಬ ಅಬ್ಬರದ ಪ್ರಚಾರ. ಅಧ್ಯಕ್ಷ ಬುಶ್ ಏಡ್ಸ್-ಅನಾಥರ ಜತೆ ಫೋಟೋ ತೆಗೆಸಿಕೊಂಡಿದ್ದೆ ತೆಗೆಸಿಕೊಂಡಿದ್ದು. ಬುಶ್ ಪತ್ನಿ ಏಡ್ಸ್ ಪೀಡಿತರನ್ನು ನೋಡಿ ಕ್ಯಾಮರಾ ಮುಂದೆ ಕಣ್ಣೀರು ಹಾಕಿದ್ದೇ ಹಾಕಿದ್ದು.


ಆದರೆ ಬುಶ್ ಆಫ್ರಿಕಾದ ಭೇಟಿಯ ಹಿಂದಿನ ಹುನ್ನಾರ ಬೇರೆಯೇ. ಬುಶ್ ಆಫ್ರಿಕಾ ಭೇಟಿ ನಡೆಯುತ್ತಿದ್ದಂತೆ - ಬುಶ್‌ರ ರಿಪಬ್ಲಿಕನ್ ಪಾರ್ಟಿ ಬಹುಮತದ ಸೆನೆಟ್ ಏಡ್ಸ್ ನೆರವನ್ನು 3 ಶತಕೋಟಿ ಡಾಲರಿನಿಂದ 2 ಶತಕೋಟಿ ಡಾಲರಿಗೆ ಕಡಿತ ಮಾಡಿತು. ಅದನ್ನು ಹೇಗೆ ಬಳಸಲಾಗುತ್ತದೆ ಎಂಬ ವಿವರಗಳನ್ನು ನೋಡಿದರೆ, ನಿಜವಾದ ಹುನ್ನಾರ ಗೊತ್ತಾಗುತ್ತದೆ.

ಅಮೆರಿಕನ್ ನೆರವನ್ನು ಏಡ್ಸ್ - ನಿವಾರಣೆಯಲ್ಲಿ ತೊಡಗಿರುವ ವಿಶ್ವಸಂಸ್ಥೆಯ ಸಂಘಟನೆ ಅಥವಾ ಸ್ಥಳೀಯ ಸರ್ಕಾರೇತರ ಸಂಘಟನೆಗಳಿಗಾಗಲೀ ಕೊಡಲಾಗುವುದಿಲ್ಲವಂತೆ. ಈ ನೆರವನ್ನು ಬಳಸಲು ಅಮೆರಿಕ ತನ್ನದೇ ಆದ ಸಂಘಟನೆಗಳನ್ನು ಹುಟ್ಟು ಹಾಕುತ್ತಾರಂತೆ. ಅಲ್ಲದೆ ನೆರವನ್ನು ಅಮೆರಿಕನ್ ಕಂಪನಿಗಳಿಂದ ಏಡ್ಸ್-ನಿವಾರಕ ಔಷಧಿಗಳನ್ನು ಖರೀದಿ ಮಾಡಲು ಮಾತ್ರ ಬಳಸಬಹುದಂತೆ. ಫ್ರಾನ್ಸ್, ಇಂಡಿಯಾ, ದಕ್ಷಿಣ ಆಫ್ರಿಕಾದಂತಹ ದೇಶಗಳ ಕಂಪನಿಗಳು ತಯಾರಿಸಿದ ಅಗ್ಗದ ಏಡ್ಸ್-ನಿವಾರಕ ಔಷಧಿಗಳನ್ನು ಅವು ಕೊಳ್ಳುವಂತಿಲ್ಲ. ಅಮೆರಿಕ ರಚಿಸಲಿರುವ ಸಂಘಟನೆಯ ಮುಖ್ಯಸ್ಥನಾಗಿ ನೇಮಕ ಆಗಿರುವವನು, ಔಷಧಿ ಕಂಪನಿಯೊಂದರ ಮಾಜಿ ಮುಖ್ಯಸ್ಥ, ಸಾಮೂಹಿಕ ಆರೋಗ್ಯ ಸೇವೆಗಳಲ್ಲಿ ಅನುಭವ ಇರುವವನಲ್ಲ ಆತ.

ಇದೇ ರೀತಿ ಆಫ್ರಿಕಾದ ಬೆಳವಣಿಗೆಗೆ ಕೊಡಲಾಗುವ ಇತರ ನೆರವಿನ ಹಿಂದೆಯೂ ಆಫ್ರಿಕಾದ ಹಿತಾಸಕ್ತಿಗೆ ವಿರುದ್ಧವಾದ ಷರತ್ತುಗಳಿವೆ. ಆಫ್ರಿಕಾದ ಆರ್ಥಿಕಗಳನ್ನು ಇನ್ನಷ್ಟು ಅಮೆರಿಕದ ಕಂಪನಿಗಳ ಬಂಡವಾಳ ಹೂಡಿಕೆ, ವ್ಯಾಪಾರಕ್ಕೆ ತೆರೆಯುವ ಷರತ್ತುಗಳಿವೆ. ಈಗಾಗಲೇ ಆಫ್ರಿಕಾದ ಕೃಷಿ ರಫ್ತುದಾರರು, ಅಮೆರಿಕದಿಂದ ಬರುವ ಸಬ್ಸಿಡಿ-ಆಧಾರಿತ ಕೃಷಿ ಆಮದುಗಳಿಂದ ಜರ್ಝರಿತವಾಗಿದ್ದಾರೆ. ಬುಶ್ ಭೇಟಿಯ ಕಾಲದಲ್ಲಿ ನಿರ್ದಿಷ್ಟ ದೇಶಗಳ ಮೇಲೆ ಹೊಸ ಶರತ್ತುಗಳನ್ನು ವಿಧಿಸುವ ಬಗ್ಗೆ ಒತ್ತಡ ಹಾಕಲಾಯಿತು. ಆಫ್ರಿಕಾದ ಅತ್ಯಂತ ಪ್ರಬಲವಾದ ಆರ್ಥಿಕವಾದ ದಕ್ಷಿಣ ಆಫ್ರಿಕಾದಲ್ಲೂ ಅಮೆರಿಕದ ಶರತ್ತುಗಳಿಗೆ ಒಪ್ಪುವ ಬಗ್ಗೆ ತೀವ್ರ ವಿರೋಧ ವ್ಯಕ್ತವಾಗಿದೆ. ದಕ್ಷಿಣ ಆಫ್ರಿಕಾದ ಸಾರ್ವಜನಿಕ ಕ್ಷೇತ್ರ ಖಾಸಗೀಕರಣದಲ್ಲಿ ಅಮೆರಿಕನ್ ಕಂಪನಿಗಳಿಗೆ ಬಾಗಿಲು ತೆರೆಯುವುದು, ಅಮೆರಿಕನ್ ಕಂಪನಿಗಳು ಆ ದೇಶ ಸರ್ಕಾರದ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲು ಅನುವು ಮಾಡಿಕೊಡುವುದು - ಮುಂತಾದ ಅಮೆರಿಕನ್ ಯೋಜನೆಗಳಿಗೆ ತೀವ್ರ ವಿರೋಧ ವ್ಯಕ್ತವಾಯಿತು.

ಆಫ್ರಿಕಾದಲ್ಲಿ ಹೆಚ್ಚಿನ ಮಿಲಿಟರಿ ಮಧ್ಯಪ್ರವೇಶಕ್ಕೆ ಅನುವು ಮಾಡಿಕೊಳ್ಳುವುದರತ್ತ ಸಹ ಬುಶ್ ತಮ್ಮ ಆಫ್ರಿಕಾ ಭೇಟಿಯ ಸಮಯದಲ್ಲಿ ಪ್ರಯತ್ನ ಮಾಡಿದರು. ಆಫ್ರಿಕಾದ ಮುಖ್ಯ ಆಸಕ್ತಿ ಇರುವುದು ನೈಜೀರಿಯಾದ ಸುತ್ತಮುತ್ತ ಇರುವ ವರ್ಣ ಆಫ್ರಿಕಾದ ತೈಲದಲ್ಲಿ. ಈ ಪ್ರದೇಶದ ತೈಲ ಆಮದು ಈಗಾಗಲೇ ಶೇಕಡಾ 17 ಇದು ಶೇಕಡಾ 25 ಕ್ಕೆ ಏರುವ ಸೂಚನೆ ಇದೆ. ನೈಜೀರಿಯಾದಲ್ಲಿ ಈಗಾಗಲೇ ಅಮೆರಿಕ ತರಬೇತಿ ನೀಡಿದ ಐದು ಬಟಾಲಿಯನ್ ಸೈನ್ಯ, ಅಮೆರಿಕ ಪರ ಸರ್ವಾಧಿಕಾರಿಯನ್ನು ರಕ್ಷಿಸಲು ಸಿದ್ಧವಾಗಿದೆ. ಆಫ್ರಿಕಾದ ತುಂಬಾ 'ಭಯೋತ್ಪಾದಕತೆ ವಿರುದ್ಧ ಯುದ್ಧ'ದ ಹೆಸರಲ್ಲಿ ಮಧ್ಯಪ್ರವೇಶ ಮಾಡಲು ಅಮೆರಿಕ ಹುನ್ನಾರ ನಡೆಸಿದೆ. ಪೂರ್ವ ಆಫ್ರಿಕಾದ 'ಭದ್ರತೆ'ಗೆ ಹತ್ತು ಕೋಟಿ ಡಾಲರುಗಳ ಯೋಜನೆ ಇದೆ. ಅಗತ್ಯ ಬಿದ್ದಾಗ ಯುರೋಪಿನಿಂದ ಆಫ್ರಿಕಾದ ಯಾವುದೇ ಭಾಗಕ್ಕೆ 5 ರಿಂದ6 ಸಾವಿರ ಸೈನ್ಯವನ್ನು ಕಳಿಸಲು ಎಲ್ಲಾ ಸಿದ್ಧತೆ ನಡೆಸಿದೆ. ಮೊರೊಕ್ಕೊ, ಟುನಿಶಿಯಾ, ಜತೆ ಇರುವ 'ಮಿಲಿಟರಿ' ಸಂಬಂಧಗಳನ್ನು ಬಲಪಡಿಸುವಾಗ, ಅಲ್ಜೀರಿಯಾ, ಮಾಲಿಯಂತಹ ದೇಶಗಳಲ್ಲಿ ಸೇವಾ ನೆಲೆಗಳನ್ನು ದೊರಕಿಸಿಕೊಳ್ಳುವ ಈ ಬಗ್ಗೆ ಭೇಟಿಯ ಸಮಯದಲ್ಲಿ ಮಾತುಕತೆಗಳು ನಡೆದವು.

ಇವೆಲ್ಲದರ ಒಟ್ಟು ಫಲವೆಂದರೆ ಆಫ್ರಿಕಾದ ಸಾಮಾನ್ಯ ಜನತೆಯ ಪರಿಸ್ಥಿತಿ ಇನ್ನಷ್ಟು ಬರ್ಬರವಾಗುತ್ತದೆ.




ಸ್ವಾತಂತ್ರ ಹೋರಾಟದ ಚಳುವಳಿ ಮತ್ತು ನನ್ನ ನೆನಪುಗಳು

ಡೇವಿಡ್ ಎ. ಕರ್ಕಡರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ದುಡಿಯುವ ವರ್ಗದ ಆಂದೋಲನದಲ್ಲಿ ತೊಡಗಿದ ಪ್ರಮುಖ ಸಂಗಾತಿ. ವಿಶೇಷವಾಗಿ ಉಡುಪಿ ಪ್ರದೇಶ ಅವರ ಪ್ರಧಾನ ಕಾರ್ಯಕ್ಷೇತ್ರ. ವಿದ್ಯಾರ್ಥಿ ದಿಶೆಯಲ್ಲೇ ಚಳುವಳಿಯಸೆಳೆತದಲ್ಲಿ ಸ್ವಾತಂತ್ರ್ಯ ಚಳುವಳಿಯ ಸಂಪರ್ಕಕ್ಕೆಳಸಿ, ಒಬ್ಬ ದೇಶಪ್ರೇಮಿ ಹೋರಾಟಗಾರನಾಗಿ ರೂಪುಗೊಂಡವರು.

ಇತ್ತೀಚೆಗೆ ಉಡುಪಿಯಲ್ಲಿ ಐಕ್ಯರಂಗ ಬಳಗದ ಸಭೆಯಲ್ಲಿ ಅತ್ಯಂತ ಉತ್ಸಾಹದಾಯಕವಾಗಿ ಭಾಗಿಯಾದ ಅವರು ಅಲ್ಲಿ ಪತ್ರಿಕೆ-ಸಾಹಿತ್ಯ ಪ್ರಸಾರದ ನಂಟನ್ನು ಬಿಚ್ಚಿಟ್ಟರು. ಬಹುತೇಕ ದಾಖಲಾದ, ಇಂದಿನ ಪೀಳಿಗೆಗೆ ಗೊತ್ತೇ ಇರದ ಹಲವು ಸಂಗತಿಗಳನ್ನು ಹೇಳಿದರು. ಅರೇ! ನಿಮ್ಮಲ್ಲಿಯೇ ಇದ್ದಾರೆ ಹೇಗೆ, ನಮ್ಮ ಓದುಗರಿಗೂ ಹೇಳಬಾರದೇ. ಇವೆಲ್ಲಾ ಚಳುವಳಿಗಾರರ, ಕ್ರಾಂತಿಕಾರಿಗಳ ಸ್ವತ್ತಲ್ಲವೇ ಎಂದಾಗ ನಕ್ಕು ಮೌನವಾದ ಅವರು ಹೊಸಪೇಟೆಯ ಶಿಬಿರದಲ್ಲಿನ ಒಂದು ದಿನ ಮಧ್ಯರಾತ್ರಿಯಲ್ಲಿ ಪೇಪರ್-ಪೆನ್ನು ಹಿಡಿದು ಬರೆದು ಕೊಟ್ಟೇಬಿಟ್ಟರು! ಹೀಗೆ ಅವರ 'ನೆನಪು ನಿಮ್ಮೆದುರು... ಕಡಲ ತಡಿಯಿಂದ ಹಾರಿಬಂದಂತೆಲ್ಲಾ ವಾರವಾರವೂ....

- ಸಂ.



1942 ರಲ್ಲಿ (ಕ್ವಿಟ್ ಇಂಡಿಯಾ) ಭಾರತದಿಂದ ತೊಲಗಿರಿ ಎಂಬ ಚಳುವಳಿಗೆ ಕರೆ ಬಂದಾಗ ನಾನಿನ್ನೂ ಶಾಲಾ ವಿದ್ಯಾರ್ಥಿಯಾಗಿ 8ನೇ ತರಗತಿಯಲ್ಲಿ ಮಣಿಪಾಲದಲ್ಲಿ ಕಲಿಯುತ್ತಿದ್ದೆ. ನಮ್ಮ ಶಾಲಾ (ಹೆಡ್ ಮಾಸ್ಟರ್) ಮುಖ್ಯೋಪಾಧ್ಯಾಯರಾದ ಶ್ರೀ ಶ್ರೀನಿವಾಸ ಪೈಗಳು ದೇಶಪ್ರೇಮಿಯಾಗಿದ್ದು ಶಾಲೆಗಳನ್ನು ಬಂದ್ ಮಾಡಿ ಮೆರವಣಿಗೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದ್ದರಿಂದ ಬಾಲ್ಯದ ದಿನಗಳಲ್ಲಿ ನನ್ನ 14ನೇ ವರ್ಷ ಪ್ರಾಯದಲ್ಲಿ ನಾನು ಮೆರವಣಿಗೆ ಯಲ್ಲಿ ಭಾಗವಹಿಸಲು ಪ್ರಾರಂಭಿಸಿ ಸ್ವಾತಂತ್ರ್ಯ ಹೋರಾಟದೊಂದಿಗೆ ಸಂಪರ್ಕ ಬಂತು. ನಂತರ ಆಗಿನ ಸಂಯುಕ್ತ ಕರ್ನಾಟಕ ಪತ್ರಿಕೆಯ ಮೂಲಕ ದೇಶಪ್ರೇಮದ ಬಗ್ಗೆ ತಿಳಿಯತೊಡಗಿದೆ.

1944 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದಾಗಲೇ ಪ್ರಾರಂಭವಾಗಿದ್ದ ಕಾರ್ಮಿಕ ಚಳುವಳಿ ಉಡುಪಿ ಪ್ರದೇಶಕ್ಕೆ ವಿಸ್ತರಿಸಿದಾಗ ನಾನು ವಿದ್ಯಾಭ್ಯಾಸ ಮುಗಿಸುವ ಹಂತದಲ್ಲಿದ್ದೆ. ಉಡುಪಿಯಲ್ಲಿ ನಡೆಯುವ ಕಾರ್ಮಿಕರ ಮೆರವಣಿಗೆಗಳಿಂದ ಆಕರ್ಷಿತನಾಗಿದ್ದೆ. ಕಾರ್ಮಿಕನಾಗಿ ಕೆಲಸಕ್ಕೆ ಸೇರಿದ ನಂತರ ಕಾರ್ಮಿಕ ಚಳುವಳಿಯಲ್ಲಿ ಭಾಗವಹಿಸುತ್ತಾ ಭಾರತ ಕಮ್ಯುನಿಸ್ಟ್ ಪಕ್ಷದ ಸಂಪರ್ಕಕ್ಕೆ ಬಂದು 1946 ರಲ್ಲಿ ಪಕ್ಷದ ಸದಸ್ಯನಾಗಿ ಸೇರಿದೆ. ಈ ಮಧ್ಯದಲ್ಲಿ ಮುಷ್ಕರದಲ್ಲಿ ಭಾಗವಹಿಸಿ ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಉಡುಪಿಯಲ್ಲಿ ನೇಕಾರರ ಸಂಘಟನೆಯಲ್ಲಿ ಜತೆಕಾರ್ಯದರ್ಶಿಯಾಗಿ ಆಯ್ಕೆಯಾದೆ.

1948 ರಲ್ಲಿ ಪಕ್ಷದ ಮೇಲೆ ಮದ್ರಾಸು ಸರಕಾರ ನಿಷೇಧ ಹೇರಿ ನಮ್ಮ ಉಡುಪಿಯಲ್ಲಿದ್ದ 2 ಕಛೇರಿಗಳನ್ನು ಪೊಲೀಸರು ಬಂದು ಬೀಗಮುದ್ರೆ ಮಾಡಿದರು. ಕಾರ್ಮಿಕರ ಸಂಘಗಳ ನಾಯಕರ ಬೇಟೆ ಪ್ರಾರಂಭಿಸಿದ ಪೊಲೀಸರು ನನ್ನನ್ನು ಬಂಧಿಸಿದರು. ನಂತರ 2 ದಿನಗಳ ಕಾಲ ಪೊಲೀಸರ ಏಟುಗಳನ್ನು ತಿನ್ನುತ್ತಾ ಕಳೆದ ನಂತರ ಹೆದರಿಸಿ ಬೆದರಿಸಿ ಬಿಟ್ಟುಬಿಟ್ಟರು. ನಾನು ಬಿಡುಗಡೆಯಾಗಿ ಲಾಕಪ್ಪಿನಿಂದ ಹೊರಬಂದಾಗ ಹೊರಗಿದ್ದವರು ಕಾಂ.ದಾಸ ಸೇರಿಗಾರ, ಕಾಂ.ಶೀನ ನಾಯಕ, ಕಾಂ.ರಾಘವನ್, ಕಾಂ.ಅನಂತ ಕೃಷ್ಣ ಐತಾಳರು ಭೂಗತರಾಗಿದ್ದು, ನಂತರ ಬಂಧಿತರಾದರು. ತತ್ಕಾಲಕ್ಕೆ ಕಾರ್ಮಿಕ ಸಂಘಟನೆಗಳ ಕೆಲಸ ನಿಂತು ಹೋಗುವಂತಾಯಿತು.

ಈ ಪರಿಸ್ಥಿತಿಯಲ್ಲಿ ನಾನು ಉದ್ಯೋಗ ನಿಮಿತ್ತ ಮುಂಬಾಯಿಗೆ ಹೋಗಿ ಬಜಾಜ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ ನಂತರ ಅಲ್ಲಿನ ಪಾರ್ಟಿ ಸಂಪರ್ಕ ಬೆಳೆಸಿ ಪಕ್ಷದ ಪತ್ರಿಕೆಗಳೂ ಸೇರಿ ಸಾಹಿತ್ಯಗಳನ್ನು ಅಭ್ಯಾಸ ಮಾಡುತ್ತಾ ಇದ್ದೆ. ಪಕ್ಷದ ಕೇಂದ್ರ ಕಛೇರಿ ಆಗ ಮುಂಬಯಿಯಲ್ಲಿತ್ತು. ಅಲ್ಲಿ ಕಾ... ಸಂಘಗಳಲ್ಲಿ ಕೆಲಸ ಮಾಡ... ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುತ್ತಾ 1956... ಮತ್ತೆ ಊರಿಗೆ ಬರಬೇಕೆಂಬ ಕೇಳಿಕೆಯ... ಊರಿಗೆ ಹೋಗಿ ಹಲವಾರು ಕಾ... ಸಂಘಗಳಲ್ಲಿ ಕೆಲಸ ಮಾಡುತ್ತಾ 1956 ರ... 1960 ವರೆಗೆ ಜಿಲ್ಲಾ ಮೋಟಾರ್ ... ಇಂಜಿನಿಯರಿಂಗ್ ವರ್ಕರ್ಸ್ ಯೂನಿಯ... ಪ್ರಧಾನ ಕಾರ್ಯದರ್ಶಿಯಾಗಿ ಜಿಲ್ಲೆಯಾದ... ಸಂಚರಿಸಿ ಮೋಟಾರು ಕಾರ್ಮಿಕ ಸಂಘಟನೆ... ಕೆಲಸ ಮಾಡಿದೆ. ಪ್ರಾರಂಭದಲ್ಲಿ 360 ... ಸದಸ್ಯತನ 781 ವರೆಗೆ ಹೆಚ್ಚಾಗಿ ಮೋಟ... ಕಾರ್ಮಿಕರ ಸಂಘಟನೆ ಜಿಲ್ಲಾ ಮಟ್ಟ... ಬೆಳೆದುಬಂತು.

1964 ರಲ್ಲಿ ಪಕ್ಷದ ವಿಭಜನೆಯಾ... ಮಾರ್ಕ್ಸ್‌ವಾದಿ ಪಕ್ಷದಲ್ಲಿ ಗುರುತಿಸಿಕೊ... ಅಂದಿನಿಂದ ಇಂದಿನವರೆಗೆ ವಿವಿಧ ಹಂತ... ಕೆಲಸ ಮಾಡುತ್ತಾ ಇದೀಗ ಉಡುಪಿ ಜ... ಸಮಿತಿಯ (ಆಫೀಸು) ಕಛೇರಿಯಲ್ಲಿ ಜವಾ... ವಹಿಸಿ ಕೆಲಸ ಮಾಡುತ್ತಾ ಇದ್ದೇನೆ. ಹಿಂತಿ... ನೋಡಿದಾಗ ಪಕ್ಷದಲ್ಲಿ ಈ ರೀತಿಯಾಗಿ ... ವ್ಯಕ್ತಿತ್ವವನ್ನು ಬೆಳೆಸಿಕೊ... ಮುಂದುವರಿಯುತ್ತಿರುವ ಬಗ್ಗೆ ಈಗ... ಗೌರವವಿದೆ. ಈಗೀಗ ಪಕ್ಷದ ಬೆಳವಣಿಗೆ ಸಾ... ಎಂಬ ಭಾವನೆಯ ಮಧ್ಯದಲ್ಲಿಯೂ ಪಕ್ಷ... ದುಡಿಯಲು ಹುಮ್ಮಸ್ಸಿದೆ. ಪಕ್ಷ ಬೆಳೆಯಬೇ... ಭಾವನೆಯಿಂದ ಪಕ್ಷದಲ್ಲಿ ದುಡಿಯುತ್ತಿದ್ದೇ...

- ಡೇವಿಡ್.ಎ.ಕ...

ಸ್ವಾತಂತ್ರ್ಯೋತ್ಸವದ ಅಂಗವಾಗಿ

ವಾಜಪೇಯಿಯೊಂದಿಗೆ ವಿಶೇಷ ಸಂದರ್ಶನ

ಹೀಗೆ ಸುದ್ದಿಗಾಗಿ ಸುತ್ತಾಡಿ ಪುಗ್ಸಟ್ಟೆ ದೆಹಲಿ ತಲುಪಿದ 'ನಗಾರಿ' ಪತ್ರಿಕೆಯ ಪ್ರಧಾನ ವರದಿಗಾರರಿಗೆ ಸುಲಭವಾಗಿ ಸಿಕ್ಕಿಬಿದ್ದರು ಪ್ರಧಾನಿಗಳು! ಆಕಳಿಸುವುದರೊಳಗೆ ಹತ್ತಾರು ಪ್ರಶ್ನೆ ಕೇಳಿ ಉತ್ತರ ಪಡೆದೆಬಿಟ್ಟರು. ಅವರ ಚಾಕಚಕ್ಯತೆಗೆ ಯಾರ ತಲೆಯೂ ಸದ್ಯಚೂರಾಗಿಲ್ಲ! ಭಗವಾದ್ವಜಕ್ಕೆ ಮಾತ್ರ ವಂದಿಸುತ್ತಿದ್ದ ಪ್ರಧಾನಿಗಳಿಗೆ ಈಗ ತ್ರಿವರ್ಣಧ್ವಜ ಹಾರಿಸಿ ಸೆಲ್ಯೂಟ್ ಹೊಡೆಯಬೇಕಾಗಿ ಬಂದಿರುವುದೂ ಒಳಗೊಂಡು ಹಲವು ವಿಷಯಗಳ ಸಂದರ್ಶನ ಇಲ್ಲಿದೆ.

"ಎಲ್ಲೆಲ್ಲಿ ಏನೇನು ಹೇಳಬೇಕೋ ಅದನ್ನೇ ಹೇಳ್ಕತ್ತೀದ್ದೀವಿ ನೋಡ್ರಿ...."

- ಪ್ರಧಾನಿ ಬಹಿರಂಗಪಡಿಸಿದ ಅಧಿಕಾರದ ಗುಟ್ಟು

ಪ್ರಶ್ನೆ: ಮಾನ್ಯ ಪ್ರಧಾನಿಗಳೇ ಸತತ ಐದನೇ ಬಾರಿ ಕೆಂಪುಕೋಟೆ ಮೇಲೆ ಸ್ವಾತಂತ್ರ್ಯದ ಬಾವುಟ ಹಾರ್ಸಿದ್ರಿ ನಿಮಗೆ ಎನನ್ಸಿದೆ?

ಉತ್ತರ: ಈ ವರ್ಷನೂ ನಾನೇ ಹಾರಿಸ್ತೀನಿ ಅಂತ ಅಂದ್ಕೊಂಡಿರ್ಲಿಲ್ಲ. ದೊಡ್ಡ ಮನಸ್ಸು ಮಾಡಿ ಸಹಪಕ್ಷಗಳೆಲ್ಲ ಅವಕಾಶ ಕೊಟ್ರು. ನನಗಂತು ಬಹಳ ಸಂತೋಷವಾಗಿದೆ. ಬಹಳ ಸುಂದರವಾದ ಕವನ ಬರ್ದೆ ಮಲ್ಗದು ಇವತ್ತು.

ಪ್ರಶ್ನೆ: ಸುಮಾರು ಎರಡು ಡಜನ್ ಪಕ್ಷದ ಕೂಟ ನಿಮ್ದು. ಐದು ವರ್ಷ ಸಂಭಾಳಿಸ್ಸಿದ್ದೀರಿ, ಇದು ಸುಲಭದ ಮಾತಲ್ಲ. ನೀವೇ ಹೇಳ್ದಂಗೆ ಆತಂಕ ಇದ್ದದ್ದೆ. ಇಂಥಾ ಸಾಧನೇನ ಹೇಗೆ ಮಾಡಿದ್ರಿ? ಅವಕಾಶ ಹೇಗೆ ಉಳಿಸ್ಕೊಂಡ್ರಿ?

ಉತ್ತರ: ಪ್ರಶ್ನೆ ಅಂದ್ರೆ ಇದು ಕಣ್ರಿ. ನೋಡಿ ಆ ರಾಮಚಂದ್ರ ಪರಮಹಂಸ ಸತ್ತಾಗ. ಅತ್ಕೊಂಡು ಸುರ್ಕೊಂಡು ಏನ್ ಹೇಳ್ದೆ.

ಅಯೋಧ್ಯೆಯಲ್ಲಿ ರಾಮನ ದೇವಸ್ಥಾನ ಕಟ್ಟೇಕಟ್ತೀನಿ ಅಂತಾ ಹೇಳ್ದೆ. ಅವಾಗೇನಾಯ್ತು. ಸಂಘ ಪರಿವಾರಕ್ಕೆ ಮಹದಾನಂದವಾಯ್ತು. ಸಾಧು ಸನ್ಯಾಸಿಗಳಿಗೆಲ್ಲಾ ಮೈದುಂಬಿ ಬಂತು.

ಪ್ರಧಾನಿ ಮಾಡಿದ್ದಕ್ಕು ಸಾರ್ಥಕವಾಯ್ತು ಅಂತ ಎಲ್ಲರೂ ಹೊಗಳಿದ್ರು.

ಪ್ರಶ್ನೆ: ಈ ಹೇಳಿಕೆ ಕೊಟ್ಟಿದ್ದು ತಪ್ಪಲ್ವ ಸಾರ್? ಇಂಥಾ ಮಾತ್ ಕೇಳಿ ಎನ್.ಡಿ.ಎ ದವರು ಸುಮ್ನಿರ್ತಾರ ಸರ್ಕಾರಕ್ಕೆ ಏನುತ್ತರ ಹೇಳಿದ್ರಿ ಸಾರ್?

ಉತ್ತರ: ಹೇಳಿದ್ನಲ್ರೀ... ನಾನು ಆ ರೀತಿ ಹೇಳ್ಲೇ ಇಲ್ಲ ಅಂತಾ ಪಾರ್ಲಿಮೆಂಟ್ನಲ್ಲೇ ಹೇಳಿಬಿಟ್ನಲ್ಲ. ಎಲ್ಲೆಲ್ಲಿ ಏನೇನ್ ಹೇಳಬೇಕೋ ಅದನ್ನೇಳಿಕೊಂಡು ಐದನೇ ವರ್ಷಕ್ಕೆ ಕಾಲಿಟ್ಟಿದ್ದೀನಿ ನೋಡ್ರಿ. ಅದೇ ಐದು ವರ್ಷದ ಆಡಳಿತದ ಗುಟ್ಟು.

ಅಣಕ

ಪ್ರಶ್ನೆ: ಹೌದೌದು ಸಾರ್. ನಿಮ್ಮನ್ನ ದಕ್ಷ ಪ್ರಧಾನಿ ಅಂತ ಊರೆಲ್ಲಾ ಪ್ರಚಾರ ಮಾಡ್ತಿದ್ರು. ಈಗ ನೆನಪಾಯ್ತು ಬಿಡಿ ಸಾರ್. ಆದ್ರೆ ಸಾರ್ ಗಾಂಧೀಜಿ ಸಮಾಧಿಗೆ ಹೂವಿಡುವಾಗ ನಿಮಗೆ ಏನನ್ನಿಸ್ತು ಸಾರ್?

ಉತ್ತರ: ಹೂ- ನೋಡ್ರಿ, ಅದ್ಯಾಕೊ ಸಮಾಧಿ ಹತ್ರ ಹೋದಾಗ ಶಾಕ್ ಹೊಡ್ದಂಗಾಯ್ತು. ವರ್ಷಾನುಗಟ್ಲೆ ಡ್ರಿಲ್ ಮಾಡಿರೋನು ನಾನು ಆ ಥರದ ಶಾಕಿಗೆಲ್ಲಾ ಹೆದರ್ತೀನಾ... ಅದೂ ಅಲ್ದೆ ಐದನೇ ಬಾರಿ ನೋಡಿ ರೂಢಿಯಾಯ್ತು.

ಪ್ರಶ್ನೆ: ಕಾರ್ಗಿಲ್ ಯುದ್ಧದಲ್ಲಿ ಸತ್ರಲ್ಲ ಸಾವಿರಾರು ಯೋದ್ರು, ಅವರನ್ನು ಈ ವರ್ಷ ನೀವು ನೆನೆಸ್ಕಂಡ್ಲೇ ಇಲ್ವಂತೆ ಯಾಕ್ ಸಾರ್?

ಉತ್ತರ: ಅಷ್ಟೂ ಗೊತ್ತಾಗಲ್ವೇನ್ರಿ... ಆವಾಗ ಚುನಾವಣೆ ಇತ್ತು. ಪ್ರತಿದಿನ ನೆನೆಸ್ಕೊಂಡ್ಲೇ ಬೇಕಿತ್ತು. ಈಗ್ಯಾಕ್ರಿ ನಾಲಕ್ ವರ್ಷ ಆದ್ಮೇಲೆ. ಮುಂದಿನ ಚುನಾವಣೆಗೆ ಗುಜರಾತ್ ಬಗ್ಗೆ ಹೇಳೋದಿಲ್ವೇನ್ರಿ... ನರೇಂದ್ರ ಮೋದಿ ಸಾಲ್ದೇನ್ರಿ.

ಪ್ರಶ್ನೆ: ತಪ್ಪಾಯ್ತು ಬಿಡಿ ಸಾರ್. ಸಾರ್ ಈ ಬಾರಿ ಕೆಂಪು ಕೋಟೆ ಮೇಲೆ ನಿತ್ಕೊಂಡು ಏನ್ ಪ್ರಾರ್ಥನೆ ಮಾಡಿದ್ರಿ?

ಉತ್ತರ: ಅದೇ ಕಣ್ರೇ.... ಬೆಳಿಗ್ಗೆ ಎದ್ರೆ ಶಸ್ತ್ರಾಸ್ತ್ರ ಖರೀದಿ ಲೆಕ್ಕ ಕೊಡಿ, ಕಾರ್ಗಿಲ್ ಲೆಕ್ಕ ಕೊಡಿ ಅಂತಾರಲ್ಲಾ ಅದಕ್ಕೆ ಭಗವಂತ, ಶ್ರೀರಾಮ ಅದನ್ನೆಲ್ಲಾ ಮರೆಸಿಬಿಡಪ್ಪಾ, ಪಾರ್ಲಿಮೆಂಟಲ್ಲಿ ಚರ್ಚೆಗೆ ಬರ್ದಂಗೆ ನೋಡ್ಕಳಪ್ಪ ಅಂತ ಬೇಡ್ಕೊಂಡೆ.

ಪ್ರಶ್ನೆ: ದೇಶದ ಜನಕ್ಕೆಲ್ಲಾ ಏನ್ ಸಂದೇಶ ಕೊಟ್ರಿ?

ಉತ್ತರ: ದೇಶದ ಜನಕ್ಕೆಲ್ಲಾ ಒಂದೇ ಸಂದೇಶ ಕೊಡೋ ಪರಂಪರೆ ಅಲ್ಲ ಕಣ್ರಿ ನಮ್ದು. ಕೊನೇ ಪಕ್ಷ ಎರಡಾದ್ರು ಕೊಡ್ಬೇಕು. ಒಂದು, ದೇಶದ ಜನ ಎಲ್ಲ ಒಂದಾಗಿರಿ ಅನ್ನದು. ಇನ್ನೊಂದು ಖಾವಿಪಡೆ ಕ್ರಿಯಾಶೀಲವಾಗಿದ್ದು 'ದೇಶಸೇವೆ ಮಾಡಾಕೆ' ಒಂದಲ್ಲ ಒಂದು ಕಡೆ ಗಲಭೆ ಇರಂಗೆ ನೋಡ್ಕಳಿ ಅನ್ನದು. ಹೆಂಗೆ..

ಪ್ರಶ್ನೆ: ಆಯ್ತು ಸಾರ್, ಕೆಂಪು ಕೋಟೆ ಮೇಲೆ ನಿತ್ಕೊಂಡು ಸತತವಾಗಿ ಐದನೇ ಬಾರಿ ಬಾವುಟ ಹಾರ್ಸಿದ ಕಾಂಗ್ರೆಸ್ಸೇತರ ಪ್ರಧಾನಿ ನೀವೇ ಆದ್ರು ನೀವ್ ಬಾವುಟ ಹಾರಿಸುವಾಗ ದೇಶದ ಜನಕ್ಕೆಲ್ಲಾ ಕರುಳು ಕಿವುಚಿ ಹೊ... ತೊಳೆಸಿದಂಗಾಗುತ್ತಂತಲ್ಲಾ ಸಾರ್?

ಉತ್ತರ: ಅದು ಆ ರೀತಿ ಅಲ್ಲಾ

ಪ್ರಶ್ನೆ: ಸಾರ್ ದೇಶದ ಜನ ಎ... ಪರಂಗಿಗಳು "ಭಾರತ ಬಿಟ್ಟು ತೊಲಗಿ" ಅ... ಹೇಳೋವಾಗ ನೀವು 'ತಪ್ಪಾಯ್ತು' ಅ... ಅದೇನೋ ಬರ್ಕೊಟ್ರಂತಲ್ಲಾ ಸಾರ್ ಅದಕ್ಕ... ಸಾರ್?

ಉತ್ತರ: ಆಯ್ತು ಬಿಡ್ರಿ, ಅದನ್ನು ನಾ... ಬರ್ಕೊಟ್ಟೇ ಇಲ್ಲಾ-ಭಗತ್ ಸಿಂಗ್ ಅ... ಹೇಳಿಬಿಡ್ತೀನಿ ಆಯ್ತಲ್ಲಾ....

ಪ್ರಶ್ನೆ: ಅದು ತಪ್ಪಾಗಲ್ವಾ ಸಾ... ಭಗತ್‌ಸಿಂಗ್ ಬಗ್ಗೆ ಮಕ್ಕಳಿಗೂ ಗೊತ್ತು... ಸಾರ್?

ಉತ್ತರ: ಪುಸ್ತಕ ಬರೆಯಕ್ಕೇ ಅಂತ... ಖಾವಿ ಪಂಡಿತ್ರುಗುಳ್ನ ನೇಮಿಸಿಲ್ವಾ ಅವರಿಗೆ... ಪುಸ್ತಕದಲ್ಲೇ ಬರ್ಸೇ ಬಿಡ್ತೀನಿ ಬಿಡಿ.

ಪ್ರಶ್ನೆ: ಆದ್ರೂ ಜನ ನಿಮ್ಮನ್ನ ಬಿಡ... ಸಾರ್?

ಉತ್ತರ: ಏನ್ರಿ ಮಾಡ್ತಾರೆ ಅಂಥದ್ದನ್ನ... handle ಮಾಡಕೆ ಅಂತನೆ ಅಲ್ವೆ... ಹುಡುಗರಿಗೆಲ್ಲಾ ತ್ರಿಶೂಲ ಹಂಚಿ ಟ್ರೈನಿಂ... ಕೊಡ್ತಾ ಇರೋದು.

ಪ್ರಶ್ನೆ: ಮುಂದಿನ ಬಾರಿಗೂ ನೀ... ಬಾವುಟ ಹಾರಿಸ್ತೀರಾ ಸಾರ್?

ಉತ್ತರ: ಅದೇ ಕಣ್ರೇ. ಆ ನರೇಂ... ಮೋದಿ ಅಶೋಕ್ ಸಿಂಘಾಲ, ಪ್ರವೀ... ತೊಗಾಡಿಯ, ಸುರೇಶ್ ಬೇಟಾ, ಮು... ಉಮಾಭಾರತಿ ಇವರೆಲ್ಲಾ ಫೀಲ್ಡ್‌ಗಿಳಿದು ... ಮಾಡಿದ್ರೆ ಖಂಡಿತಾ ನಾನೇ ಕಣ್ರೇ ಹಾರ್ಸ...

ಆಯ್ತು ಸಾರ್ ಅಂತಾ ದುರ್ಗತಿ ... ದೇಶಕ್ಕೆ ಮತ್ತೆ ಬರ್ದೇ ಇರ್ಲಿ ಸಾರ್. ಥ್ಯಾಂಕ... ಸಾರ್.

ಅಣಕು ಸಂದರ್ಶನ...

ನಾ...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH